ವಾರ್ಷಿಕ ಚಂದಾ ರೂ.25/-

# ಮಾರ್ಚ್ ಜನಪದ

ಸಂಪುಟ-07 • ಸಂಚಿಕೆ-05 • ಮಾರ್ಚ್ 2024




## ಕಾಯಕ ಮತ್ತು ದಾಸೋಹ ತತ್ವದ ಬಜೆಟ್

Downloaded From:www.kpscvaani.com



ಫೆಬ್ರವರಿ 10 ರಂದು ಮಾಜಿ ಮುಖ್ಯಮಂತ್ರಿ ದಿ.ಕೆಂಗಲ್ ಹನುಮಂತಯ್ಯ ಅವರ ಜನ್ಮದಿನಾಚರಣೆ ಅಂಗವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧ ಆವರಣದಲ್ಲಿ ಇರುವ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಸಂದರ್ಭ. ಈ ಸಂದರ್ಭದಲ್ಲಿ ವಿಧಾನ ಪರಿಷತ್‌ನ ಸಭಾಪತಿಗಳಾದ ಬಸವರಾಜ ಹೊರಟ್ಟಿ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳಾದ ಗೋವಿಂದರಾಜು ಹಾಗೂ ಹನುಮಂತಯ್ಯ ಅವರ ಕುಟುಂಬಸ್ಥರು ಉಪಸ್ಥಿತರಿದ್ದಾರೆ.



ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದಲ್ಲಿ ಗೆದ್ದು ಐತಿಹಾಸಿಕ ಸಾಧನೆ ಮಾಡಿದ ರೋಹನ್ ಬೋಪಣ್ಣ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸನ್ಮಾನಿಸಿದ ಸಂದರ್ಭ. ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳಾದ ಗೋವಿಂದರಾಜು ಹಾಗೂ ರೋಹನ್ ಬೋಪಣ್ಣ ಅವರ ಕುಟುಂಬದವರು ಉಪಸ್ಥಿತರಿದ್ದಾರೆ.

Downloaded From:www.kpscvaani.com



ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-07 • ಸಂಚಿಕೆ-05 • ಮಾರ್ಚ್ 2024


**06** ಕಾಯಕ ಮತ್ತು ದಾಸೋಹ ತತ್ವದ ಬಜೆಟ್
• ಹರತೀಸುತ

**13** ಜನಸ್ಪಂದನ: ಜನರ ಮನದ ಮಾತಿಗೆ ಕಿವಿಯಾದ ಮುಖ್ಯಮಂತ್ರಿಗಳು
• ನಂಜುಂಡಪ್ಪ.ವಿ

**17** ಗ್ಯಾರಂಟಿಗಳಿಂದ ಜನರ ಬದುಕು ಗಟ್ಟಿ
• ಚಂದ್ರಮುಖಿ

**20** ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರಿದೆಯೇ?
• ಜಡಿಯಪ್ಪ ಗೆದ್ಲಗಟ್ಟಿ






**24** ಗಿನ್ನಿಸ್ ದಾಖಲೆ ನಿರ್ಮಿಸಿದ ಕಲ್ಪತರು ನಾಡು
• ರಿಷಿಕೇಶ್ ಪಿ.ವಿ

**26** ಅಲೆಮಾರಿ ಅಭಿವೃದ್ಧಿ ನಿಗಮದ ಯೋಜನೆಗಳು
• ಕೆ. ಎಸ್. ರಾಜಮನ್ನಾರ್

**28** ಬಂಡೀಪುರ ಸಫಾರಿ ಪ್ರವಾಸಿಗರಿಗೆ ವಿಮಾ ಸೌಲಭ್ಯ
• ಡಾ.ವರ ಪ್ರಸಾದ್ ರಾವ್ ಪಿ.ವಿ

**31** ಸಿದ್ಧಿ ಮಹಿಳೆಯರ ಹೋಂ ಸ್ಟೇನಲ್ಲಿ ಅರಳುವ ಗುರ್ಗೆಕಟ್ಟೆ ಹೂ
• ನಾಗರಾಜ್ ಹರಪನಹಳ್ಳಿ





**33** 15 ನೇ ಅಂತಾರಾಷ್ಟ್ರೀಯ ಸಿನಿಮೋತ್ಸವಕ್ಕೆ ಸಕಲ ಸಿದ್ಧತೆ
• ಹರೀಶ್ ಬಸವರಾಜ್

**35** ರಾಜೇಶ್ವರಿ ಚಟರ್ಜಿ: ನಮ್ಮ ರಾಜ್ಯದ ಪ್ರಥಮ ಮಹಿಳಾ ಎಂಜಿನಿಯರ್
• ಕೆ.ಎಸ್.ಸೋಮೇಶ್ವರ

**37** ಬೇಸಿಗೆಯನ್ನು ಎದುರಿಸುವುದು ಹೀಗೆ-
• ಡಾ.ಕೆ.ಎಸ್.ಚೈತ್ರಾ

**40** ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ "ಪಿಡಿಒ ಆಫ್ ದಿ ಮಂತ್" ಪ್ರಶಸ್ತಿ
• ಬಿ. ಶಿವಕುಮಾರ್

**42** ಪರೀಕ್ಷಾ ಸಮಯದಲ್ಲಿ ಮಕ್ಕಳ ದೃಷ್ಟಿಗೆ ಸಂಬಂಧಿಸಿದ ಸವಾಲುಗಳು
• ಡಾ. ರೋಹಿತ್ ಶೆಟ್ಟಿ

**44** ಮರಾಠಿ ಮಣ್ಣಿನಲ್ಲಿ ಶ್ರಮಿಕ ಮಕ್ಕಳ ಕನ್ನಡ ಶಾಲೆ
• ಮಂಜುನಾಥ್ ಚಾಂದ್

**47** ವಾಹನ ಪಾರ್ಕಿಂಗ್ ಕುರಿತ ಕಾನೂನು ನಿಯಮಗಳು
• ಡಾ. ಅನಿಲ್‌ಕುಮಾರ್ ಪಿ. ಗ್ರಾಮಪುರೋಹಿತ್

**50** ಪದಬಂಧ-52



**ಪ್ರಧಾನ ಸಂಪಾದಕರು**
**ಹೇಮಂತ್ ಎಂ ನಿಂಬಾಳ್ಕರ್, ಐ.ಪಿ.ಎಸ್**
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**

**ಮಂಜುನಾಥ ಡಿ.ಡೊಳ್ಳಿನ**
ಜಂಟಿ ನಿರ್ದೇಶಕರು (ಹೆ.ಪ್ರ)

**ಸಹನಾ ಎಂ.**
ಉಪ ನಿರ್ದೇಶಕರು

**ಉಪ ಸಂಪಾದಕರು**
**ಬಿ. ಜಿ. ಪೂರ್ಣಿಮ**

**ಪ್ರಕಾಶಕರು**
**ಆಯುಕ್ತರು**
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
**ಲಾವಣ್ಯ ಮುದ್ರಣ**
# 19, ವಿದ್ಯಾಪೀಠ ವೃತ್ತ,
ಬನಶಂಕರಿ 1ನೇ ಹಂತ, ಬೆಂಗಳೂರು-50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ನಿರುದ್ಯೋಗಿ ಯುವಕ-ಯುವತಿಯರು ಉದ್ಯೋಗ ಅರಸಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಅನುಕೂಲವಾಗುವಂತೆ ಆರ್ಥಿಕ ಸಹಾಯವನ್ನು ನೀಡುವ ಯುವನಿಧಿ ಯೋಜನೆಗೆ ಸರ್ಕಾರ ಚಾಲನೆ ನೀಡಿರುವುದು ಅತ್ಯಂತ ಸಂತಸದ ವಿಚಾರ.

ಈಗಷ್ಟೇ ಪದವಿಯನ್ನು ಮುಗಿಸಿ ಉದ್ಯೋಗ ಅರಸುತ್ತಿರುವ ನಮ್ಮಂತಹವರಿಗೆ ಅರ್ಜಿ ಶುಲ್ಕ ಮತ್ತು ಓಡಾಟದ ಖರ್ಚಿಗೆ ಅಪ್ಪ-ಅಮ್ಮಂದಿರ ಮೇಲೆ ಹೊರೆಯಾಗುವುದು ತಪ್ಪಲಿದೆ. ಇಂತಹ ಯೋಜನೆಯನ್ನು ರೂಪಿಸಿ, ನಮಗೆ ಅನುಕೂಲ ಮಾಡಿಕೊಟ್ಟಿರುವ ಸಿದ್ದರಾಮಯ್ಯ ಅವರ ಸರ್ಕಾರಕ್ಕೆ ಅನಂತ ಧನ್ಯವಾದಗಳನ್ನು ತಮ್ಮ ಪತ್ರಿಕೆಯ ಮೂಲಕ ತಿಳಿಸಲು ಇಚ್ಛಿಸುತ್ತೇನೆ.

**-ಮೀನಾಕ್ಷಿ ಕೆ.ಎಂ, ಮೈಸೂರು**

* * *

ರಾಜ್ಯ ಸರ್ಕಾರವು ಚುನಾವಣೆ ವೇಳೆ ಭರವಸೆ ನೀಡಿದಂತೆ ಎಲ್ಲಾ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ತಮ್ಮ ಸರ್ಕಾರ ನುಡಿದಂತೆ ನಡೆವ ಸರ್ಕಾರ ಎಂಬುದನ್ನು ಸಾಬೀತು ಪಡಿಸಿದೆ. ವಾರ್ತಾ ಜನಪದ ಪತ್ರಿಕೆಯು ಸರ್ಕಾರದ ಪ್ರತಿಬಿಂಬದಂತೆ ಸರ್ಕಾರದ ಕಾರ್ಯಕ್ರಮಗಳೆಲ್ಲವನ್ನೂ ಪ್ರಕಟಿಸುವ ಮೂಲಕ ಜನರಿಗೆ ಸರ್ಕಾರದ ಎಲ್ಲಾ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ತಿಳಿಸುವ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ. ಫೆಬ್ರವರಿ ಸಂಚಿಕೆಯಲ್ಲಿ ಪ್ರಕಟಿಸಲಾಗಿದ್ದ ಎಲ್ಲಾ ಲೇಖನಗಳು ಉತ್ತಮ ಮಾಹಿತಿಯನ್ನು ಒದಗಿಸಿದವು.

**-ಜೀವನ್, ಚಿತ್ರದುರ್ಗ**

ಜನರು ಅದ್ಧೂರಿ ಮದುವೆಯನ್ನು ಮಾಡುವ ಮೂಲಕ ಅನಗತ್ಯವಾಗಿ ಖರ್ಚು ಮಾಡುವುದನ್ನು ತಪ್ಪಿಸುವ ಸಲುವಾಗಿ ಸರಳ ವಿವಾಹಕ್ಕೆ ಉತ್ತೇಜನ ನೀಡಲು ಸರ್ಕಾರವು ಮಾಂಗಲ್ಯ ಭಾಗ್ಯ ಎಂಬ ಹೆಸರಿನಡಿ ಸಾಮೂಹಿಕ ವಿವಾಹಗಳನ್ನು ನಡೆಸುತ್ತಿರುವ ಕುರಿತ ಲೇಖನ ಸೂಕ್ತವಾಗಿತ್ತು. ರಾಜ್ಯದ ಎ ಮತ್ತು ಬಿ ಗ್ರೇಡ್ ನ ಎಲ್ಲಾ ದೇವಾಲಯಗಳಲ್ಲಿ ಪ್ರತಿ ತಿಂಗಳು ಸಾಮೂಹಿಕ ವಿವಾಹವನ್ನು ಮಾಡಿಸುತ್ತಾರೆ ಎಂಬ ವಿಷಯ ಈ ಲೇಖನದಿಂದ ತಿಳಿದು ಬಂತು. ಜನರಿಗೆ ಅನುಕೂಲವಾಗುವ ಇಂತಹ ಲೇಖನಗಳನ್ನು ಇನ್ನು ಹೆಚ್ಚು ಹೆಚ್ಚು ಪ್ರಕಟಿಸಿ ಎಂಬುದು ನನ್ನ ವಿನಂತಿ.

**-ವಿದ್ಯಾ ಶಂಕರ್, ಕುಣಿಗಲ್**

* * *

ಪ್ರತಿ ವರ್ಷ ಗಣರಾಜ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನಲ್ಲಿ ಆಯೋಜಿಸಲಾಗುವ ಫಲಪುಷ್ಪ ಪ್ರದರ್ಶನಕ್ಕೆ ಹೋಗಿ ಬರುತ್ತಿದ್ದ ನನಗೆ ಈ ಬಾರಿ ಹೋಗಲು ಸಾಧ್ಯವಾಗಿರಲಿಲ್ಲ. ಆದರೆ ಫೆಬ್ರವರಿಯ ವಾರ್ತಾ ಜನಪದದಲ್ಲಿ ಈ ಬಾರಿ ಬಸವಣ್ಣ ಮತ್ತು ವಚನ ಸಾಹಿತ್ಯ ಆಧಾರಿತ ವಿಷಯದಲ್ಲಿ ಏರ್ಪಾಡಾಗಿದ್ದ ಫಲಪುಷ್ಪ ಪ್ರದರ್ಶನದ ಛಾಯಾಚಿತ್ರ ಪ್ರಕಟಿಸಿರುವುದನ್ನು ನೋಡಿ ಕಣ್ಣು ತುಂಬಿಕೊಂಡೆ.

**-ಗೌತಮ್, ಬೆಂಗಳೂರು**




ಲಾಲ್‌ಬಾಗ್ ಉದ್ಯಾನವನದಲ್ಲಿ ಕೀಟಗಳ ವಂಶಾಭಿವೃದ್ಧಿಗಾಗಿ ವಿನೂತನ ಕೀಟ ಕೆಫೆ ತೆರೆದಿರುವ ಕುರಿತ ಲೇಖನ ಓದಿ ಇದೊಂದು ವಿಶಿಷ್ಟ ಮತ್ತು ಉತ್ತಮ ಆಲೋಚನೆ ಎನಿಸಿತು. ಇದರ ಕಲ್ಪನೆಯ ರುವಾರಿಗಳಾದ ಇಂಡಿಯಾ ಫೌಂಡೇಶನ್ ಸಂಸ್ಥೆಯ ಸಿಇಓ ಆಗಿರುವ ಡೇವಿಡ್ ಕುಮಾರ್ ಅವರಿಗೆ ಅಭಿನಂದನೆಗಳು. ನಗರೀಕರಣದಿಂದ ಜೀವಜಂತುಗಳಿಗೆ ವಾಸ ಸ್ಥಾನಗಳೇ ಇಲ್ಲದಂತಾಗಿರುವ ಹಿನ್ನೆಲೆಯಲ್ಲಿ ಅವರ ವಿನೂತನ ಪ್ರಯತ್ನ ನಿಜಕ್ಕೂ ಅಭಿನಂದನಾರ್ಹವಾದುದು.

**-ಸಬೀನಾ ಬೇಗಂ, ವಿಜಾಪುರ**

* * *

ಪರಿಸರ ಸ್ನೇಹಿಯಾದ ಸ್ಯಾನಿಟರಿ ಪ್ಯಾಡ್‌ಗಳಿಗೆ ಪರ್ಯಾಯವಾದ ಮುಟ್ಟಿನ ಕಪ್‌ಗಳನ್ನು ಬಳಸುವಂತೆ ಹೆಣ್ಣು ಮಕ್ಕಳು ಮತ್ತು ಮಹಿಳೆಯರಲ್ಲಿ ಜಾಗೃತಿ ಮೂಡಿಸಲು ಫೆಬ್ರವರಿ 2024 ರ ವಾರ್ತಾ ಜನಪದ ಸಂಚಿಕೆಯಲ್ಲಿ ಪ್ರಕಟಿಸಲಾಗಿರುವ 'ಮಹಿಳೆಯರ ಸ್ವಾಸ್ಥ್ಯಕ್ಕಾಗಿ ಮುಟ್ಟಿನ ಕಪ್ ಯೋಜನೆ' ಲೇಖನ ನಿಜಕ್ಕೂ ಅತ್ಯಂತ ಉಪಯುಕ್ತವಾದುದು. ಸ್ಯಾನಿಟರಿ ಪ್ಯಾಡ್‌ಗಳನ್ನು ಒಂದು ಬಾರಿ ಉಪಯೋಗಿಸಿ ಕಸದೊಂದಿಗೆ ಬಿಸಾಕುವುದರಿಂದ ಅವು ಮಣ್ಣಿನಲ್ಲಿ ಕರಗದೇ ಪರಿಸರ ಮತ್ತು ಮಣ್ಣಿನ ಸ್ವಾಸ್ಥ್ಯವನ್ನು ಹಾಳುಮಾಡುತ್ತವೆ.

ನನಗೆ ಕೂಡ ಮುಟ್ಟಿನ ಕಪ್ ಕುರಿತು ಸರಿಯಾದ ಜ್ಞಾನ ಇರಲಿಲ್ಲ. ಈ ಲೇಖನ ಓದಿದ ಮೇಲೆ ಅದನ್ನು ಹೇಗೆ ಬಳಸುವುದು ಮತ್ತು ಅದರಿಂದ ಆಗುವ ಉಪಯೋಗ ತಿಳಿಯಿತು. ಒಂದು ಮುಟ್ಟಿನ ಕಪ್ ಅನ್ನು ಏಳೆಂಟು ವರ್ಷಗಳವರೆಗೆ ಉಪಯೋಗಿಸಬಹುದಾಗಿರುವುದರಿಂದ ಪರಿಸರ ನೈರ್ಮಲ್ಯ ತಪ್ಪಲಿದೆ.

**-ಸುನಂದ, ಮಂಡ್ಯ**

ಸರ್ಕಾರ ಸುಗಮವಾಗಿ ನಡೆಯಲು ಕಾನೂನು ಸುವ್ಯವಸ್ಥೆ ಸರಿಯಾಗಿರಬೇಕು. ಈ ನಿಟ್ಟಿನಲ್ಲಿ ಮಾನ್ಯ ಮುಖ್ಯಮಂತ್ರಿ ಅವರು ಗೃಹ ಇಲಾಖೆಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿದ್ದಾರೆ. ಹಾಗಾಗಿ ಗೃಹ ಇಲಾಖೆಯು ಹಲವು ಹೊಸ ಉಪಕ್ರಮಗಳ ಮೂಲಕ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಮುಂದುವರೆದಿರುವುದು ಸಂತಸದ ಸಂಗತಿಯಾಗಿದೆ. ಒಟ್ಟಿನಲ್ಲಿ ಫೆಬ್ರವರಿಯ ವಾರ್ತಾ ಜನಪದದಲ್ಲಿ ಉತ್ತಮ ಲೇಖನಗಳು ಪ್ರಕಟವಾಗಿವೆ.

**-ಮಂಜುನಾಥ್. ಆರ್.ಟಿ, ತುಮಕೂರು**

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ವಾರ್ಷಿಕ ಚಂದಾದಾರರಾಗಲು ಬಯಸುವವರು ರೂ 25/- ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ **https://sevasindhu.karnataka.gov.in** ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ-ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ-ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೇ,

ಮಾರ್ಚ್ ತಿಂಗಳ ವಾರ್ತಾ ಜನಪದ ಸಂಚಿಕೆ ವೈವಿಧ್ಯಮಯ ಲೇಖನಗಳೊಂದಿಗೆ ನಿಮ್ಮ ಕೈಯಲ್ಲಿದೆ. ರಾಜ್ಯಪಾಲರ ಗಣರಾಜ್ಯೋತ್ಸವ ಸಂದೇಶ, ಪ್ರಸಕ್ತ ಸರ್ಕಾರದ ಸಾಧನೆಗಳ ಮೈಲಿಗಲ್ಲುಗಳನ್ನು ದಾಖಲಿಸಿದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆಬ್ರುವರಿ 8 ರಂದು ವಿಧಾನಸೌಧದ ಮುಂಭಾಗ ನಡೆಸಿದ ಜನಸ್ಪಂದನ ಕಾರ್ಯಕ್ರಮಕ್ಕೆ ಜನರಿಂದ ದೊರೆತ ಅಭೂತಪೂರ್ವ ಸ್ಪಂದನೆ ಸರ್ಕಾರದ ಕುರಿತು ಜನರಿಗಿರುವ ನಿರೀಕ್ಷೆಗಳಿಗೆ ಹಾಗೂ ಸರ್ಕಾರದ ಸ್ಪಂದನಾಶೀಲತೆಗೆ ನಿದರ್ಶನವಾಯಿತು. ವಿಭಾಗ ಮಟ್ಟದಲ್ಲಿ ಜನಸ್ಪಂದನ ನಡೆಸುವ ಇಂಗಿತವನ್ನು ಇದೀಗ ಮುಖ್ಯಮಂತ್ರಿಗಳು ವ್ಯಕ್ತಪಡಿಸಿದ್ದಾರೆ.

ಫೆಬ್ರುವರಿ 16 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ 15ನೇ ಆಯವ್ಯಯ ಮಂಡಿಸಿದ್ದು, ವಿತ್ತೀಯ ಶಿಸ್ತು ಕಾಯ್ದುಕೊಂಡೇ ಗ್ಯಾರಂಟಿ ಯೋಜನೆಗಳು ಮತ್ತು ಅದರಿಂದಾಚೆಗೆ ಅಭಿವೃದ್ಧಿ ಯೋಜನೆಗಳಿಗೆ ಸಂಪನ್ಮೂಲ ಒದಗಿಸಿದ್ದಾರೆ. ಬಸವಣ್ಣನವರ ಕಾಯಕ ಮತ್ತು ದಾಸೋಹ ಸಿದ್ಧಾಂತವನ್ನು ಆಧರಿಸಿದ 3,71,383 ಕೋಟಿ ರೂ ಗಾತ್ರದ ಈ ಆಯವ್ಯಯ ಮುಂದಿನ 10 ವರ್ಷಗಳ ಅಭಿವೃದ್ಧಿಯ ಮುನ್ನೋಟ ನೀಡುವ ದಾಖಲೆಯಾಗಿದೆ. ಶಿಕ್ಷಣ, ಆರೋಗ್ಯ ಕ್ಷೇತ್ರಗಳಿಗೆ ಒತ್ತು ನೀಡಿರುವುದು, ದುರ್ಬಲ ವರ್ಗಗಳ ಯುವಕರ ಶಿಕ್ಷಣ ಮತ್ತು ಉದ್ಯೋಗಕ್ಕೆ ಆದ್ಯತೆ ನೀಡಿರುವುದು ಸಮ ಸಮಾಜ ನಿರ್ಮಾಣದತ್ತ ಸರ್ಕಾರದ ದಿಟ್ಟ ಹೆಜ್ಜೆಯಾಗಲಿದೆ. ಅಂತೆಯೇ ಮೂಲಸೌಕರ್ಯ ಅಭಿವೃದ್ಧಿ, ಇಂಧನ ಉತ್ಪಾದನೆಗೆ ಹಾಗೂ ಆರ್ಥಿಕ ಅಭಿವೃದ್ಧಿಗೆ ಆದ್ಯತೆ ನೀಡಿರುವುದು ಸರ್ಕಾರದ ಅಭಿವೃದ್ಧಿಯ ಚಿಂತನೆ ಗ್ಯಾರಂಟಿ ಯೋಜನೆಗಳು ಹಾಗೂ ಅದರಾಚೆಗೂ ವಿಸ್ತರಿಸಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ.

ಕೃಷಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುವ ಕಾರ್ಯಕ್ರಮಗಳು, ಎಪಿಎಂಸಿಗಳ ಬಲವರ್ಧನೆ, ನೀರಾವರಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದು ಸರ್ಕಾರದ ರೈತಪರ ಕಾಳಜಿಯನ್ನು ದೃಢಪಡಿಸುತ್ತದೆ. ಇದರೊಂದಿಗೆ ಬೆಂಗಳೂರು ಅಭಿವೃದ್ಧಿಗೆ ಮಹತ್ವಾಕಾಂಕ್ಷಿ ಯೋಜನೆಗಳು ಹಾಗೂ ಇದಕ್ಕೆ ಪೂರಕವಾಗಿ ಸಂಪನ್ಮೂಲ ಕ್ರೋಢೀಕರಣಕ್ಕೆ ಒತ್ತು ನೀಡಲಾಗಿದೆ. ರಾಜ್ಯ ಸರ್ಕಾರವು ಈ ಆಯವ್ಯಯದಲ್ಲಿ ಹೆದ್ದಾರಿಗಳು, ಗುಣಮಟ್ಟದ ಗ್ರಾಮೀಣ ರಸ್ತೆಗಳು, ವಿಶ್ವ ದರ್ಜೆಯ ವಿಮಾನ ನಿಲ್ದಾಣಗಳು, ಕೈಗಾರಿಕಾ ಕಾರಿಡಾರ್‌ಗಳು ಮತ್ತು ನಗರ ಸಂಚಾರ ವ್ಯವಸ್ಥೆ ಮೇಲೆ ಹೂಡಿಕೆ ಮಾಡುವ ಮೂಲಕ ಆರ್ಥಿಕ ಬೆಳವಣಿಗೆಯ ವೇಗವನ್ನು ಸಾಧಿಸಲು ಅನುಕೂಲಕರ ವಾತಾವರಣವನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ.

ಗ್ರಾಮೀಣ ಪತ್ರಕರ್ತರಿಗೆ ವೃತ್ತಿ ಸಂಬಂಧಿ ಚಟುವಟಿಕೆಗಳಿಗೆ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಯಾಣಿಸಲು ಉಚಿತ ಬಸ್ ಪಾಸ್ ಸೌಲಭ್ಯ ಘೋಷಣೆ ಮಾಡಿರುವುದು ಮುಖ್ಯಮಂತ್ರಿಯವರ ಸೂಕ್ಷ್ಮ ಸಂವೇದನೆಗೆ ಹಿಡಿದ ಕೈಗನ್ನಡಿಯಾಗಿದೆ.

ಕರ್ನಾಟಕ ಚಲನಚಿತ್ರ ಅಕಾಡೆಮಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ 15ನೇ ಆವೃತ್ತಿ ಫೆಬ್ರುವರಿ 29ರಂದು ಪ್ರಾರಂಭವಾಗಲಿದೆ. ಚಿತ್ರಪ್ರೇಮಿಗಳಿಗೆ, ಅಧ್ಯಯನಾಸಕ್ತರಿಗೆ ಒಂದು ವಾರ ಕಾಲ ಜಗತ್ತಿನ ವಿವಿಧ ದೇಶಗಳ ಅತ್ಯುತ್ತಮ ಚಿತ್ರಗಳನ್ನು ಒಂದೇ ಸೂರಿನಡಿ ವೀಕ್ಷಿಸುವ ಅವಕಾಶ. ಶಾಂತಿ, ಸೌಹಾರ್ದತೆ, ಸಮಾನತೆ, ಲಿಂಗ ಸಮಾನತೆ ಮೊದಲಾದ ಮಾನವೀಯ ವಿಚಾರಗಳು ಈ ಚಿತ್ರೋತ್ಸವದ ಸೆಲೆಯಾಗಿದೆ.

ಗಣರಾಜ್ಯೋತ್ಸವದ ಅಮೃತ ಮಹೋತ್ಸವ ವರ್ಷಾಚರಣೆಯ ಅಂಗವಾಗಿ ಸಮಾಜ ಕಲ್ಯಾಣ ಇಲಾಖೆ ಏರ್ಪಡಿಸಿದ್ದ ಸಂವಿಧಾನ ಮತ್ತು ರಾಷ್ಟ್ರೀಯ ಐಕ್ಯತೆ ಸಮಾವೇಶ ಫೆಬ್ರುವರಿ 24 ಹಾಗೂ 25 ರಂದು ಬೆಂಗಳೂರಿನಲ್ಲಿ ಯಶಸ್ವಿಯಾಗಿ ನಡೆಯಿತು. ಸಂವಿಧಾನದ ಮಹತ್ವ, ಸಂವಿಧಾನದ ಕುರಿತು ಅರಿವು ಮೂಡಿಸುವ ಕುರಿತ ಗೋಷ್ಠಿಗಳು ಯುವಜನರ ಮನ ಸೆಳೆದವು. ಇದಕ್ಕೂ ಮುನ್ನ ರಾಜ್ಯಾದ್ಯಂತ ನಡೆದ ಸಂವಿಧಾನ ಜಾಗೃತಿ ಜಾಥಾ ಹಳ್ಳಿ- ಹಳ್ಳಿಗಳಲ್ಲಿ ಸಂಚರಿಸಿ ಜನಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದೆ.

ಇದೇ ಸಂದರ್ಭದಲ್ಲಿ ಲೋಕಸಭಾ ಚುನಾವಣೆ ಸಿದ್ಧತೆಗಳೂ ಭರದಿಂದ ಸಾಗಿದ್ದು, ನಾಡಿನ ಜವಾಬ್ದಾರಿಯುತ ಪ್ರಜೆಯಾಗಿ ನಮ್ಮ ಮತದಾನದ ಹಕ್ಕನ್ನು ತಪ್ಪದೇ ಚಲಾಯಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಇದನ್ನು ಯಶಸ್ವಿಯಾಗಿ ನಿಭಾಯಿಸೋಣ ಎಂದು ಆಶಿಸುತ್ತೇನೆ.

**ಹೇಮಂತ್ ಎಂ ನಿಂಬಾಳ್ಕರ್, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From:www.kpscvaani.com



# ಕಾಯಕ ಮತ್ತು ದಾಸೋಹ ತತ್ವದ ಬಜೆಟ್

ಹರತೀಸುತ

ಸರ್ವೋದಯ ದೃಷ್ಟಿ ಮತ್ತು ಸಮನ್ವಯ ದೃಷ್ಟಿ ಎಲ್ಲೆಲ್ಲೂ ತಾಂಡವವಾಡಬೇಕು. ಮತ ಮತಗಳಲ್ಲಿ, ಸಾಹಿತ್ಯ ಸಾಹಿತ್ಯಗಳಲ್ಲಿ ಸಮಾಜ ಸಮಾಜಗಳಲ್ಲಿ–ಅಷ್ಟೇ ಏಕೆ? ರಾಜಕೀಯ ಕ್ಷೇತ್ರದಲ್ಲಿ, ಆರ್ಥಿಕ ಕ್ಷೇತ್ರದಲ್ಲಿ, ಸರ್ವತ್ರ ಅದು ವ್ಯಾಪಿಸಬೇಕು. ಅತ್ಯಂತ ಕೀಳಾದವನಿಗೂ ಮೇಲಾಗುವ ಅವಕಾಶವಾಗಬೇಕು, ಇವೆರಡನ್ನೂ ಒಳಗೊಂಡ ಆಧ್ಯಾತ್ಮಿಕ ದೃಷ್ಟಿಯೇ ಪೂರ್ವದೃಷ್ಟಿ ಎಂಬ ಕುವೆಂಪು ಅವರ ಮಾತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹದಿನೈದನೇ ಬಜೆಟ್‌ಗೆ ತಕ್ಕದಾಗಿದೆ.

ಹಿರಿಯ ಅಭಿವೃದ್ಧಿ ಚಿಂತಕರಾದ ಪ್ರೊ. ಚಂದ್ರ ಪೂಜಾರಿ ಅವರು ಅಭಿವೃದ್ಧಿ ಎಂಬುದು ಬಡವರನ್ನು ಹೊರಗಿಡುವುದಲ್ಲ, ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಅಭಿವೃದ್ಧಿ ಎಂಬುದನ್ನು ಜೊತೆಜೊತೆ ಒಯ್ಯಬಹುದೆನ್ನುವುದನ್ನು ಈ ಬಜೆಟ್ ಸಾಧಿಸಿದೆ. ತಳಸ್ತರ ಜನರ ಸಾಮಾಜಿಕ ಅಭಿವೃದ್ಧಿ ದೃಷ್ಟಿಯಿಂದ ಈ ಬಜೆಟ್‌ನ್ನು ನೋಡಿದರೆ ಬಜೆಟ್‌ನ ಪ್ರಾಮುಖ್ಯತೆ ಅರ್ಥವಾಗಬಹುದು ಎಂಬ ಮಾತನ್ನು ಹೇಳಿದ್ದಾರೆ. ಅದನ್ನು ಅರ್ಥ ಮಾಡಿಕೊಂಡು ಬಜೆಟ್ ನೋಡಿದರೆ ಹೇಗೆ ಅಭಿವೃದ್ಧಿಗೆ ಪೂರಕವಾಗಿದೆ, ಹೇಗೆ ದೂರದೃಷ್ಟಿಯನ್ನು ಹೊಂದಿದೆ. ಬದುಕನ್ನು ಹೇಗೆ ಕಟ್ಟಿಕೊಡುತ್ತದೆ ಎಂಬುದು ಅರ್ಥವಾಗುತ್ತದೆ.

ಎಲ್ಲ ವರ್ಗಗಳನ್ನು ಮುಟ್ಟುವ ಸಮತೋಲಿತ ಬಜೆಟ್ ಅನ್ನು ಸಿದ್ದರಾಮಯ್ಯ ಅವರು ಮಂಡಿಸಿರುವುದರಿಂದಲೇ ಅದು ತಾಯ್ತನದ ಬಜೆಟ್ ಆಗಿದೆ. ತಾಯಿಯಾದವಳಿಗೆ ತನ್ನ ಮಕ್ಕಳಿಗೆ



Downloaded From:www.kpscvaani.com

ಏನು ಬೇಕು, ಹೇಗೆ ಬೆಳೆಸಬೇಕು ಎಂಬುದು ಚೆನ್ನಾಗಿ ಗೊತ್ತಿರುತ್ತದೆ. ಸಿದ್ದರಾಮಯ್ಯ ಅವರ ತಾಯ್ತನದ ಹೃದಯ ವಿಶಿಷ್ಟವಾದ ಬಜೆಟ್ ರೂಪುಗೊಳ್ಳುವಂತೆ ಮಾಡಲಾಗಿದೆ ಎಂಬುದು ಆರ್ಥಿಕ ತಜ್ಞರ ಅಭಿಪ್ರಾಯವೂ ಆಗಿದೆ.

ರಾಜ್ಯವನ್ನು ಮುನ್ನಡೆಸುವ ನಾಯಕನೊಬ್ಬನಿಗೆ ದೂರದೃಷ್ಟಿ, ಸಮಷ್ಟಿ ಪ್ರಜ್ಞೆ ಇದ್ದರೆ ಸರಿಯಾದ ನಿಟ್ಟಿನಲ್ಲಿ ಆಡಳಿತವನ್ನು ತೆಗೆದುಕೊಂಡು ಹೋಗಲು ಸಾಧ್ಯವಾಗುತ್ತದೆ. ಮುತ್ಸದ್ದಿ ರಾಜಕಾರಣಿಯಾಗಿರುವ ಸಿದ್ದರಾಮಯ್ಯ ಅವರು ಪರಿಪೂರ್ಣ ನಾಯಕತ್ವವನ್ನು ಹೊಂದಿರುವುದರಿಂದಲೇ ಎಲ್ಲ ವಲಯಗಳ ಅಭಿವೃದ್ಧಿಗೆ ದೂರದೃಷ್ಟಿಯನ್ನಿಟ್ಟುಕೊಂಡು 2024–25ನೇ ಸಾಲಿನ ಬಜೆಟ್ ರೂಪಿಸಿದ್ದಾರೆ.

ಗ್ಯಾರಂಟಿಗಳಿಗೆ ಹಣ ಹೊಂದಾಣಿಕೆಯ ಜತೆಗೆ ಅಭಿವೃದ್ಧಿ ಕಡೆ ಲಕ್ಷ್ಯ ಹರಿಸುವುದಿಲ್ಲವೆಂಬ ಟೀಕಾಕಾರರಿಗೆ ಉತ್ತರ ನೀಡುವ ರೀತಿಯಲ್ಲಿ ಸವಾಲುಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 3.71 ಲಕ್ಷ ಕೋಟಿ ರೂ.ಗಳ ಬಜೆಟ್‌ನಲ್ಲಿ ಎದುರಿಸುವ ಛಲ ತೋರಿಸಿದ್ದಾರೆ.

ಕಳೆದ ವರ್ಷ ಗ್ಯಾರಂಟಿಗಳಿಂದ 7 ಕೋಟಿ ಜನರಿಗೆ ಅನುಕೂಲವಾಗಿದ್ದರೆ, 1.2 ಕೋಟಿ ಜನ ಬಡತನ ರೇಖೆಯಿಂದ ಮೇಲಕ್ಕೆ ಬಂದಿದ್ದಾರೆ. ಈ ವರ್ಷ ಗ್ಯಾರಂಟಿಗಳನ್ನು ಮುಂದುವರೆಸುತ್ತಲೇ ಬದ್ಧವೆಚ್ಚಗಳ ದೊಡ್ಡ ಸವಾಲನ್ನು ಮೆಟ್ಟಿ ನಿಂತಿದ್ದಾರೆ. ವೇತನ, ಪಿಂಚಣಿ, ಬಡ್ಡಿ, ಆಡಳಿತ ಸೇರಿ 1.59 ಲಕ್ಷ ಕೋಟಿ ರೂ.ಗಳ ಬದ್ಧವೆಚ್ಚಗಳ ಜತೆಗೆ ವಿವಿಧ ವಲಯಗಳಲ್ಲಿ ಮೂಲಸೌಕರ್ಯ ಒದಗಿಸುವ ಮೂಲಕ ಅಭಿವೃದ್ಧಿಗೆ ಹೊಸ ಭಾಷೆ ಬರೆಯಲು ಮುಂದಾಗಿದ್ದಾರೆ.

**ಬಸವ ತತ್ವವೇ ಆಧಾರ:**

ಬರ, ಕೇಂದ್ರದ ಅಸಹಕಾರಗಳ ನಡುವೆ ಆರ್ಥಿಕ ಸಂಕಷ್ಟ ಇರುವುದರಿಂದಲೇ ಬಸವಣ್ಣ ಅವರ ಕಾಯಕ ಹಾಗೂ ದಾಸೋಹ ತತ್ವವನ್ನು ಅಳವಡಿಸಿಕೊಳ್ಳಲಾಗಿದೆ. ಉತ್ಪಾದನೆ ಮತ್ತು ಹಂಚಿಕೆ ಎಂಬುದು ಕಾಯಕ ಮತ್ತು ದಾಸೋಹದ ಮೂಲ ಆಶಯ. ಸಮ ಸಮಾಜದ ನಿರ್ಮಾಣದಲ್ಲಿ ಕಾಯಕ ಮತ್ತು ದಾಸೋಹ ತತ್ವಗಳ ಪ್ರೇರಣೆಯಲ್ಲಿ



ಆಡಳಿತ ನಡೆಸುವ ಸಂಕಲ್ಪದ ಭಾಗವಾಗಿ ಸಮಾಜದಲ್ಲಿ ಸಂಪತ್ತಿನ ನ್ಯಾಯಯುತ ಹಂಚಿಕೆ ಮಾಡುವ ಆಶಯಕ್ಕೆ ಪೂರಕವಾಗಿ ಬಜೆಟ್ ಪ್ರಸ್ತುತಗೊಂಡಿದೆ. ಈ ಬಜೆಟ್ ರಾಜ್ಯದ ಸಾಮಾಜಿಕ ಅಭಿವೃದ್ಧಿ, ಆರ್ಥಿಕ ಅಭಿವೃದ್ಧಿ ಹಾಗೂ ರಾಜಕೀಯ ಅಭಿವೃದ್ಧಿಯನ್ನು ಒಟ್ಟಾಗಿಸಿದೆ.

ಇದೇ ಮೊದಲ ಬಾರಿಗೆ ಬಜೆಟ್‌ನ ಶೇ.15ರಷ್ಟು ಬಡವರಿಗೆ ಹಂಚಿಕೆಯಾಗಿರುವುದು ವಿಶೇಷ. ಇದುವರೆಗೂ ಶೇ.4 ರಿಂದ 5 ರಷ್ಟು ಮಾತ್ರ ಹಂಚಿಕೆಯಾಗುತ್ತಿತ್ತು. ಇದರಿಂದ ಬಡವರ ಬದುಕು ಸುಧಾರಿಸುವುದರಲ್ಲಿ ಯಾವುದೇ ಅನುಮಾನವಿಲ್ಲ. ಇದರಿಂದ ಇದೊಂದು ಬಡವರ ಬಜೆಟ್ ಎಂದೇ ಅರ್ಥಶಾಸ್ತ್ರಜ್ಞರು ವ್ಯಾಖ್ಯಾನಿಸುತ್ತಾರೆ.

**ಬಡವರ ಬಜೆಟ್**

ಬಜೆಟ್‌ನ ಶೇ.15ರಷ್ಟು ಬಡವರಿಗೆ ಹಂಚಿಕೆಯಾಗಿರುವುದು ವಿಶೇಷ. ಇದುವರೆಗೂ ಶೇ.4 ರಿಂದ 5 ರಷ್ಟು ಮಾತ್ರ ಹಂಚಿಕೆಯಾಗುತ್ತಿತ್ತು. ಇದರಿಂದ ಬಡವರ ಬದುಕು ಸುಧಾರಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.

**ಬಂಡವಾಳ ವೆಚ್ಚ**

ಬಂಡವಾಳ ವೆಚ್ಚಕ್ಕೆ ಹಣವಿಲ್ಲವೆಂಬುದು ಕೆಲವರ ಅನಿಸಿಕೆ. ಆದರೆ ಕಳೆದ ವರ್ಷಕ್ಕಿಂತ ಸುಮಾರು 1,000 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ನೀಡುವ ಮೂಲಕ ರಾಜ್ಯದ ಅಭಿವೃದ್ಧಿಗೆ ತಮ್ಮ ಬದ್ಧತೆಯನ್ನು ತೋರಿಸಿದ್ದಾರೆ. 52902.96 ಕೋಟಿ ರೂ.ಗಳನ್ನು ತೆಗೆದಿರಿಸಿದ್ದಾರೆ. ಸಿದ್ದರಾಮಯ್ಯ ಅವರು 3.71 ಲಕ್ಷ ಕೋಟಿ ರೂ.ಗಳ ಬಜೆಟ್ ಮಂಡಿಸಿದ್ದು, ಕಳೆದ ಬಜೆಟ್‌ಗೆ ಹೋಲಿಕೆ ಮಾಡಿದರೆ ಸುಮಾರು 53 ಕೋಟಿ ರೂ.ಗಳ ಹೆಚ್ಚಿನ ಗಾತ್ರದ ಬಜೆಟ್ ಇದಾಗಿದೆ.

**ಶ್ವೇತಪತ್ರದ ಮಾದರಿ**

ಸಿದ್ದರಾಮಯ್ಯ ಅವರು ತಮ್ಮ ಎರಡನೇ ಅವಧಿಯ ಮೊದಲ ಬಜೆಟ್ ರಾಜ್ಯದ ಹಣಕಾಸು ಸ್ಥಿತಿಯನ್ನು ವಿವರಿಸುವ ಶ್ವೇತಪತ್ರದ ಮಾದರಿಯಲ್ಲಿ ರೂಪಿಸಿದ್ದರು. ಈ ಬಜೆಟ್ ಸಹ ಬಹುತೇಕ ಇದೇ ಮಾದರಿಯನ್ನು ಒಳಗೊಂಡಿರುವ ಸಾಧ್ಯತೆಗಳಿವೆ. ರಾಜ್ಯದ ಆರ್ಥಿಕ ಸ್ಥಿತಿಯ ಜತೆಗೆ ಕೇಂದ್ರ ಸರ್ಕಾರ



Downloaded From:www.kpscvaani.com



ತೆರಿಗೆ ಹಂಚಿಕೆ, ಅನುದಾನಗಳನ್ನು ಒದಗಿಸಿಲ್ಲದಿರುವುದು, ಬರಕ್ಕೆ ನೆರವಾಗದಿರುವ ಬಗ್ಗೆ ಅಂಕಿಅಂಶಗಳ ಸಹಿತ ವಿವರಿಸಿದ್ದಾರೆ. ಆ ಮೂಲಕ ರಾಜ್ಯದ ಜನರೆದುರು ಆರ್ಥಿಕ ಸ್ಥಿತಿಯನ್ನು ವಿವರಿಸುವ ಮೂಲಕ ಪಾರದರ್ಶಕತೆ ತೋರಿಸುವುದರ ಜತೆಗೆ ಜನರಿಗೆ ಉತ್ತರದಾಯಿಯೂ ಆದರೂ.

### ಗ್ಯಾರಂಟಿಗಳಿಗೆ ವೆಚ್ಚ

ಕಳೆದ ಬಜೆಟ್‌ನಲ್ಲಿ ಗ್ಯಾರಂಟಿಗಳಿಗೆ ಒಂಭತ್ತು ತಿಂಗಳಿಗೆ ಆಗುವಷ್ಟು ಮೊತ್ತ ಕ್ರೋಢೀಕರಿಸಬೇಕಾಗಿತ್ತು. ಆದ್ದರಿಂದ ಸುಮಾರು 38 ಸಾವಿರ ಕೋಟಿ ರೂ.ಗಳು ವೆಚ್ಚವಾಗಿತ್ತು. ಆದರೆ ಮುಂದಿನ ವರ್ಷದ ಬಜೆಟ್‌ನಲ್ಲಿ ಐದು ಗ್ಯಾರಂಟಿಗಳಿಗೆ ಅಂದಾಜು 52000 ಕೋಟಿ ರೂ.ಗಳ ಅಗತ್ಯ ಬೀಳಲಿದೆ. ಇಷ್ಟು ಬೃಹತ್ ಮೊತ್ತವನ್ನು ತೆಗೆದಿರಿಸುವ ಮೂಲಕವೇ ಬಜೆಟ್‌ನಲ್ಲಿ ಉಳಿದ ಯೋಜನೆಗಳಿಗೆ ಹಣ ಒದಗಿಸಲಾಗಿದೆ.

### ನಾಲ್ಕು ಆರೋಗ್ಯ ಕಾಪಾಡುವ ಉದ್ದೇಶ

ಈ ಬಾರಿಯ ಬಜೆಟ್‌ನ ವಿಶೇಷ ಎಂದರೆ ಸಮಾಜದಲ್ಲಿ ನಾಲ್ಕು ರೀತಿಯ ಆರೋಗ್ಯವನ್ನು ಕಾಪಾಡುತ್ತಿರುವುದು. ಮೊದಲನೆಯದು ಆರ್ಥಿಕ ಆರೋಗ್ಯ. ವಿತ್ತೀಯ ಶಿಸ್ತು ಕಾಪಾಡುವ ಮೂಲಕ ರಾಜ್ಯದ ಹಣಕಾಸು ಸ್ಥಿತಿ ಎಲ್ಲಿಯೂ ಹಾಳಾಗದಂತೆ ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗಿದೆ. ಎರಡನೆಯದು ಆಧ್ಯಾತ್ಮಿಕ ಅಥವಾ ಧಾರ್ಮಿಕ ಆರೋಗ್ಯ. ಬಸವಣ್ಣ, ಪಂಪ, ಕುವೆಂಪು ಹೀಗೆ ಅನೇಕರ ಆಶಯಗಳನ್ನು ಹೇಳುವ ಮೂಲಕ ಧಾರ್ಮಿಕ ಜಾಗೃತಿಗೆ ಹೊಸ ಭಾಷೆ ಬರೆಯಲಾಗಿದೆ. ಮೂರನೆಯದು ದೈಹಿಕ ಆರೋಗ್ಯ. ಅಪೌಷ್ಠಿಕತೆ ನಿವಾರಣೆ ಸೇರಿ ಮನುಷ್ಯರ ಆರೋಗ್ಯ ಕಾಪಾಡಲು ಯೋಜನೆಗಳು ರೂಪುಗೊಂಡಿವೆ. ನಾಲ್ಕನೆಯದು ಮಾನಸಿಕ ಆರೋಗ್ಯ. ಮಕ್ಕಳಿಗೆ ಶಾಲೆಗಳ ಹಂತದಲ್ಲಿಯೇ ನಾವು ಮನುಜರು ಎಂಬ ಯೋಜನೆಯ ಮೂಲಕ ಅವರ ಹೃದಯಕ್ಕೆ ವಿಷ ಬಿತ್ತುವುದನ್ನು ತಡೆಯುವ ಕೆಲಸ ಮಾಡುವುದಾಗಿದೆ.

### ಮಹಿಳಾ ಶಕ್ತಿ ಬಳಕೆ

ಪೌರಸಂಸ್ಥೆಗಳನ್ನು ಸ್ವಾವಲಂಬಿ ಮಾಡಬೇಕೆಂದರೆ ಅಲ್ಲಿ ತೆರಿಗೆ ವಸೂಲಿಯಾಗಬೇಕು. ಆ ರೀತಿ ಮಾಡಲು ತೆರಿಗೆ ವಸೂಲಿಯನ್ನು ಮಹಿಳಾ ಸಂಘಗಳಿಗೆ ವಹಿಸಲು ನಿರ್ಧರಿಸಲಾಗಿದೆ. ಇದು ಉದ್ಯೋಗ ಸೃಷ್ಠಿಯ ಜತೆಗೆ ಆರ್ಥಿಕ ಅಭಿವೃದ್ಧಿಗೂ ಸಹಕಾರಿಯಾಗುತ್ತದೆ. ಜತೆಗೆ ಸ್ಥಳೀಯ ಸಂಸ್ಥೆಗಳ ಬಲವರ್ಧನೆಗೂ ಅನುಕೂಲಕರವಾಗಿದೆ.

### ಸಮಪಾಲು–ಸಮಬಾಳು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತುಳಿತಕ್ಕೆ ಒಳಗಾದ ಜನರಿಗೆ ದನಿಯಾಗುವ ಮೂಲಕ ಸಮಪಾಲು–ಸಮಬಾಳು ತತ್ವವನ್ನು ಅನುಸರಿಸಿದ್ದಾರೆ. ದನಿ ಇಲ್ಲದ ಸಮುದಾಯಗಳಿಗೆ ಇದೇ ಮೊದಲ ಬಾರಿಗೆ ದನಿಯಾಗಿದ್ದಾರೆ. ಸಣ್ಣ ಪುಟ್ಟ ಸಮಾಜಗಳಿಗೂ ಬಜೆಟ್‌ನಲ್ಲಿ ಒಂದಲ್ಲ ಒಂದು ಯೋಜನೆ ಲಭ್ಯವಾಗುವಂತೆ ಮಾಡಲಾಗಿದೆ.

ಇದುವರೆಗೂ ಬಜೆಟ್ ಮುಟ್ಟದ ಪರಿಶಿಷ್ಟ ಪಂಗಡದ ಕೊರಗ, ಜೇನುಕುರುಬ, ಯರವ, ಕಾಡುಕುರುಬ, ಸೋಲಿಗ, ಗೊಂಡ, ಸಿದ್ದಿ, ಮಲೈಕುಡಿ, ಕುಡಿಯ, ಹಸಲರು, ಗೌಡಲು, ಬೆಟ್ಟಕುರುಬ, ಹಕ್ಕಿ–ಪಿಕ್ಕಿ, ಇರುಳಿಗ, ರಾಜಗೊಂಡ ಹರಿಣಿಶಿಕಾರಿ ಮುಂತಾದ 23 ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಸಮಗ್ರ ಅಭಿವೃದ್ಧಿಗಾಗಿ


Downloaded From:www.kpscvaani.com

ಏಕಲವ್ಯ ಮಾದರಿಯ ಪ್ರತಿ ವಸತಿ ಶಾಲೆಯಲ್ಲಿ 20 ಸೀಟುಗಳನ್ನು ಮೀಸಲಿರಿಸಿ, ಅವರುಗಳಿಗೆ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ನೀಡಿ ನೇರ ಪ್ರವೇಶ ಕಲ್ಪಿಸುವಂತ ಮಹತ್ವದ ತೀರ್ಮಾನ ತೆಗೆದುಕೊಳ್ಳಲಾಗಿದೆ. ಶಿಕ್ಷಣ ಅನ್ನುವುದು ಮನುಷ್ಯನಲ್ಲಿ ಅನೇಕ ಬದಲಾವಣೆ ತರುತ್ತದೆ. ಆದ್ದರಿಂದಲೇ ಈ ಸಮುದಾಯಗಳು ನಿರಂತರ ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ ಕಳಕಳಿ ಸರ್ಕಾರದ್ದಾಗಿದೆ.

ಅಲೆಮಾರಿಗಳಿಗಾಗಿಯೇ ಪಡಿತರ ಚೀಟಿ ಮುಂತಾದ ಸರ್ಕಾರಿ ದಾಖಲೆಗಳನ್ನು ಒದಗಿಸಲು ವಿಶೇಷ ಕೋಶವನ್ನು 3 ಕೋಟಿ ರೂ.ಗಳ ಅನುದಾನದಲ್ಲಿ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಸ್ಥಾಪಿಸಲಾಗುತ್ತಿದೆ. ಅಷ್ಟೆ ಅಲ್ಲ, ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡಲು ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಆಯೋಗ ರಚನೆ ಮಾಡಲಾಗಿದೆ. ಅಂಗನವಾಡಿ ಸಹಾಯಕಿಯರು ಮತ್ತು ಕಾರ್ಯಕರ್ತೆಯರಿಗೆ ಗ್ರಾಚ್ಯುಯಿಟಿ ನೀಡಿರುವುದು ಯಾವುದೇ ವರ್ಗವನ್ನು ಮರೆತಿಲ್ಲವೆಂಬುದನ್ನು ತೋರಿಸುತ್ತದೆ.

**ಸಾಮಾಜಿಕ ಬದಲಾವಣೆ**

ದೇಶದ ಪ್ರಸಿದ್ಧ ಸಾಮಾಜಿಕ ಹರಿಕಾರರು ಮತ್ತು ರಾಜಕೀಯ ಚಿಂತಕರಾದ ನಾರಾಯಣಗುರು, ಜ್ಯೋತಿಬಾಪುಲೆ, ಪೆರೆಯಾರ್ ರಾಮಸ್ವಾಮಿ, ರಾಮಮನೋಹರ ಲೋಹಿಯಾ ಹಾಗೂ ಬಾಬು ಜಗಜ್ಜೀವನರಾಮ್ ಅವರ ಬರಹಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಲು ಇದೇ ಮೊಟ್ಟ ಮೊದಲ ಬಾರಿಗೆ ಕ್ರಮ ಕೈಗೊಂಡಿದ್ದಾರೆ. ಆ ಮೂಲಕ ಆದರ್ಶ ಸಮಾಜದ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿರುವುದು ಬಜೆಟ್‌ನಲ್ಲಿ ಸ್ಪಷ್ಟವಾಗಿದೆ.

ಸಂತ ಕವಿ ಕನಕದಾಸ ಅಧ್ಯಯನ ಕೇಂದ್ರದ ಮೂಲಕ ತತ್ವಪದ, ಕೀರ್ತನ ಸಾಹಿತ್ಯ ಮತ್ತು ಭಕ್ತಿ ಚಳವಳಿ ಸೇರಿದಂತೆ ಸಾಹಿತ್ಯ ಸಮೀಕ್ಷೆ ಸಂಗ್ರಹಣೆ, ಪ್ರಕಟಣೆ ಮತ್ತು ಪ್ರಸಾರ ಕಾರ್ಯಗಳಿಗೂ ಒತ್ತು ನೀಡಲಾಗಿದೆ. ತತ್ವಪದಕಾರರು ಹಾಗೂ ಸೂಫಿಗಳ ಬದುಕು ಮತ್ತು ಸಂದೇಶಗಳ ಅಧ್ಯಯನಕ್ಕಾಗಿ ಕಲಬುರ್ಗಿ ವಿವಿಯಲ್ಲಿ ಅಧ್ಯಯನ ಪೀಠ, ಶಿವಯೋಗಿ ಸಿದ್ದರಾಮೇಶ್ವರರ ಬದುಕು ಬರಹ ಕುರಿತ ಅಕ್ಕಮಹಾದೇವಿ ವಿವಿಯಲ್ಲಿ ಅಧ್ಯಯನ ಪೀಠ ಸ್ಥಾಪಿಸಲು ಕ್ರಮ ಕೈಗೊಂಡಿರುವುದು ಕೂಡ ಬಸವ ತತ್ವದ ಆಡಳಿತಕ್ಕೆ ಮುನ್ನುಡಿ.

**ತೆರಿಗೆ ವಿಧಿಸಿಲ್ಲ**

ಈಗಾಗಲೇ ಹೆಚ್ಚಿನ ತೆರಿಗೆಯ ರಾಜ್ಯ ಎಂಬ ಹೆಸರು ಇರುವುದರಿಂದ ಜನರ ಮೇಲೆ ಮತ್ತಷ್ಟು ತೆರಿಗೆ ವಿಧಿಸದೇ ಸಂಪನ್ಮೂಲಕ್ಕೆ ಪರ್ಯಾಯ ಮೂಲಗಳನ್ನು ಹುಡುಕುವ ದೊಡ್ಡ ಸವಾಲಿನ ಕೆಲಸ ಮಾಡಲಾಗಿದೆ. ಇದರ ಜತೆಜತೆಗೆ ವಿತ್ತೀಯ ಕೊರತೆಯನ್ನು ತಗ್ಗಿಸುವುದು ಬಹುದೊಡ್ಡ ಸವಾಲಿದೆ. 2022–23 ರಲ್ಲಿ ಶೇ.2.8 ಇದ್ದ ವಿತ್ತೀಯ ಕೊರತೆಯನ್ನು 2023–24ಕ್ಕೆ ಶೇ.2.6ಕ್ಕೆ ಇಳಿಸಲಾಗಿತ್ತು. ಈ ಬಜೆಟ್‌ನಲ್ಲಿಯೂ ಶೇ.3ರ ಮಿತಿಯಲ್ಲಿಯೇ ಇರುವಂತೆ ನೋಡಿಕೊಳ್ಳಲಾಗಿದೆ. ಸಾಲ ಮಾಡಿದ್ದರೂ ಸಹ ಜಿಎಸ್‌ಡಿಪಿಯ ಶೇ.25ರ ಮಿತಿಯೊಳಗೆ ಇರುವುದು ಆರ್ಥಿಕ ಶಿಸ್ತು ತಂದಿರುವುದನ್ನು ಸಾಬೀತು ಮಾಡಿದೆ.

ಯಾವುದೇ ಬಜೆಟ್‌ನಲ್ಲಿ ರಾಜಸ್ವ ಉಳಿತಾಯ ಇರಬೇಕಾಗುತ್ತದೆ. ಆದರೆ ಕೇಂದ್ರದ ಅಸಹಕಾರದಿಂದಾಗಿ ರಾಜಸ್ವ ಉಳಿತಾಯ ಸಾಧನೆ ಸಾಧ್ಯವಾಗಿಲ್ಲ ಎಂಬುದನ್ನು ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿಯೇ ಹೇಳಿದ್ದಾರೆ. ಜನ ಸಂಕಷ್ಟದಲ್ಲಿರುವಾಗ ರಾಜಸ್ವ ಉಳಿತಾಯ ಮಾಡುವುದಕ್ಕಿಂತ ಹಸಿದವರಿಗೆ ಅನ್ನ ಹಾಕುವುದು ಮಾನವೀಯತೆ ಆಗುತ್ತದೆ. 2027–28ಕ್ಕೆ ರಾಜಸ್ವ ಉಳಿತಾಯ ಸಾಧಿಸುವ ಗುರಿಯನ್ನು ಹಾಕಿಕೊಳ್ಳಲಾಗಿದೆ.

ಕಲ್ಯಾಣ ಕಾರ್ಯಕ್ರಮಗಳು ಸೇರಿದಂತೆ ರಾಜ್ಯದ ಅಭಿವೃದ್ಧಿಯನ್ನು ಅವರು ನಿರ್ಲಕ್ಷಿಸಿಲ್ಲ. ಹೆಚ್ಚುತ್ತಿರುವ ಯೋಜನೆ, ಯೋಜನೇತರ ಬದ್ಧತಾ ವೆಚ್ಚಗಳು, ಜನರ ನಿರೀಕ್ಷೆಗಳು, ಸಾಮಾಜಿಕ ನ್ಯಾಯ ಹಾಗೂ ಆರ್ಥಿಕ ಸಮಾನತೆ ಸೂತ್ರದ ಕಲ್ಯಾಣ ಕಾರ್ಯಕ್ರಮಗಳ ವೆಚ್ಚವನ್ನು ಸರಿದೂಗಿಸುವ ಸವಾಲಿನ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ.

ವಿತ್ತೀಯ ಯೋಜನೆಯಲ್ಲಿ ಉಲ್ಲೇಖಿಸಿದಂತೆ 2024–25ರಲ್ಲಿ ವೇತನ, ಪಿಂಚಣಿ, ಬಡ್ಡಿ ಪಾವತಿ, ಆಡಳಿತಾತ್ಮಕ ವೆಚ್ಚವೂ ಸೇರಿ ಯೋಜನೇತರ 1,59,526 ಕೋಟಿ ರೂ., ಯೋಜನೆಗಳ ಆಧಾರಿತ ಬದ್ಧ ವೆಚ್ಚಗಳ ಮೊತ್ತ 1,10,957 ಕೋಟಿ ರೂ.ಗಳಿಗೆ ಹೆಚ್ಚಳವಾಗುವ ಅಂದಾಜಿದೆ. ಯೋಜನೆ, ಯೋಜನೇತರ ವೆಚ್ಚಗಳ ಏರಿಕೆಯನ್ನು ಗಮನಿಸಿ ಕೆಲವೊಂದು ಸುಧಾರಣೆ ತರಲಾಗುತ್ತಿದೆ.

**ಆದಾಯದ ಹೊಸ ಮೂಲಗಳು**

ತೆರಿಗೆಯೇತರ ಆದಾಯ ಮೂಲಗಳನ್ನು ಗುರುತಿಸಲಾಗಿದೆ. ಮೂಲ ಸೌಕರ್ಯಗಳ ಅಭಿವೃದ್ಧಿಗೆ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಒಲವು ವ್ಯಕ್ತವಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ನಗರಾಭಿವೃದ್ಧಿ ಸಹಿತ





Downloaded From:www.kpscvaani.com



ವಿವಿಧ ಇಲಾಖೆಗಳ ಆಸ್ತಿ ನಗದೀಕರಣಕ್ಕೆ ತಜ್ಞರ ಸಮಿತಿ ರಚಿಸಲಾಗುತ್ತಿದೆ. ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಸ್ಥಿರ ಆಸ್ತಿಗಳಿಂದ ಸಂಪನ್ಮೂಲ ಕ್ರೋಢೀಕರಣ, ವಸತಿ ಸೆಸ್, ವಿವಿಧ ಶುಲ್ಕಗಳನ್ನು ಪರಿಷ್ಕರಿಸಿ ಆದಾಯ ಸಂಗ್ರಹಿಸಲು ಕರ್ನಾಟಕ ಕೈಗೆಟುಕುವ ವಸತಿ ನಿಧಿ ಸ್ಥಾಪನೆ, ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆಯಡಿ ಕೊಳೆಗೇರಿ ಸೆಸ್ ದರ ಪರಿಷ್ಕರಣೆ ಮಾಡಲಾಗುತ್ತಿದೆ.

**ಉದ್ಯಮ ದೃಷ್ಟಿ, ಉದ್ಯೋಗಗಳ ಸೃಷ್ಟಿ**

ನಿರುದ್ಯೋಗದ ಸಮಸ್ಯೆ ಬಹುದೊಡ್ಡ ಪಿಡುಗು. ಅದನ್ನು ನಿವಾರಣೆ ಮಾಡಲು ಅನೇಕ ಮಾರ್ಗಗಳನ್ನು ಹುಡುಕಲಾಗಿದೆ. ಪ್ರಮುಖವಾಗಿ ಡ್ರೋನ್ ಆಧಾರಿತ ಫೋಟೋಗ್ರಫಿ ಮತ್ತು ವಿಡಿಯೋಗ್ರಫಿಗಾಗಿ ಪರಿಶಿಷ್ಟ ಪಂಗಡದ ಯುವಕ/ಯುವತಿಯರಿಗೆ ಡ್ರೋನ್ ತರಬೇತಿ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಅವರನ್ನು ಸ್ವಯಂ ಉದ್ಯೋಗಿಗಳನ್ನಾಗಿ ಮಾಡಲು ಕ್ರಮ ವಹಿಸಲಾಗಿರುವುದು ಕೂಡ ಸಾಮಾಜಿಕ ಬದಲಾವಣೆಯ ಹೆಜ್ಜೆ.

ಐದು ಗ್ಯಾರಂಟಿ ಯೋಜನೆಗಳು, ಜನಪ್ರಿಯ ಹಾಗೂ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳಿಗೆ ಬಜೆಟ್ ಘೋಷಣೆಗಳು ಸೀಮಿತವಾಗಿಲ್ಲ. ಉದ್ಯಮ ಬೆಳೆಸುವುದರ ಜತೆಗೆ ಉದ್ಯೋಗಾವಕಾಶಗಳಿಗೂ ಒತ್ತು ನೀಡಲಾಗಿದೆ. ಆ ಮೂಲಕ ಎಲ್ಲ ವಲಯ, ವರ್ಗ, ಪ್ರದೇಶಗಳ ಸುಸ್ಥಿರ ಅಭಿವೃದ್ಧಿಗೆ ಚಿತ್ತ ನೆಟ್ಟಿದ್ದಾರೆ. ಜನರಲ್ಲಿ ಕೊಂಡುಕೊಳ್ಳುವ ಶಕ್ತಿ ಹೆಚ್ಚಳಕ್ಕೆ ಆದ್ಯತೆ ನೀಡಿದ್ದೇವೆ ಎಂದು ಹೇಳಿರುವುದು ಆರ್ಥಿಕತೆ ವೃದ್ಧಿಗೆ ದಿಕ್ಸೂಚಿಯಾಗಿದೆ.

ಆರ್ಥಿಕ ಚಾಲನಾಶಕ್ತಿಗಳಾದ ಕೃಷಿ ಕೂಲಿಕಾರರು, ಕಾರ್ಮಿಕರು, ದುಡಿಯುವ ವರ್ಗಗಳಿಗೆ ಹೆಚ್ಚು ಒಲವು ತೋರುತ್ತಲೇ ಆರ್ಥಿಕತೆ ಬಲವರ್ಧನೆಗೆ ಒತ್ತು ನೀಡಿ, ಅಭಿವೃದ್ಧಿಹೊಂದಿದ ಪಥದ ಮೇಲೆ ರಾಜ್ಯವನ್ನು ಮುನ್ನಡೆಸುವ ಆಶಯ ಬಜೆಟ್‌ನಲ್ಲಿ ವ್ಯಕ್ತವಾಗಿದೆ. ಮಂಗಳೂರಿನಿಂದ ಬೆಂಗಳೂರು, ಬೀದರ್‌ನಿಂದ ಬೆಂಗಳೂರು ಆರ್ಥಿಕ ಕಾರಿಡಾರ್ ನಿರ್ಮಾಣ ಯೋಜನೆಯು ಆರ್ಥಿಕತೆಗೆ ಉತ್ತೇಜನ ನೀಡುವ ಬಹುದೊಡ್ಡ ಗುರಿಯಾಗಿದೆ.


**ಗ್ರಾಮೀಣ ಆರ್ಥಿಕತೆ**

ಗ್ರಾಮೀಣ ಜನರಲ್ಲಿ ಆರ್ಥಿಕ ಶಿಸ್ತು ಮತ್ತು ಉಳಿತಾಯ ಮನೋಭಾವವನ್ನು ಉತ್ತೇಜಿಸಲು ಎಂಎಸ್‌ಐಎಲ್ ವತಿಯಿಂದ ಚಿಟ್‌ಫಂಡ್‌ನ್ನು ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸಲಾಗುವುದು. ಗ್ಯಾರಂಟಿಗಳಿಂದ ಬರುವ ಆದಾಯವನ್ನು ಚಿಟ್‌ಫಂಡ್‌ಗಳಲ್ಲಿ ತೊಡಗಿಸುವ ಮೂಲಕ ಆರ್ಥಿಕತೆ ಬೆಳೆಸಲು ಮಾರ್ಗ ಹುಡುಕಲಾಗಿದೆ.





Downloaded From:www.kpscvaani.com



**ಪ್ರತಿ ಜಿಲ್ಲೆಗೂ ಆದ್ಯತೆ**

ಬಜೆಟ್‌ನಲ್ಲಿ ಪ್ರತಿ ಜಿಲ್ಲೆಗೂ ಆದ್ಯತೆ ನೀಡಲಾಗಿದೆ. ಕಲಬುರಗಿಯಲ್ಲಿ ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಪಿಪಿಪಿ ಮಾದರಿ ಮೆಗಾ ಜವಳಿ ಪಾರ್ಕ್ ಸ್ಥಾಪಿಸುತ್ತಿದ್ದು, ಇದರಿಂದ ಒಂದು ಲಕ್ಷ ಜನರಿಗೆ ನೇರವಾಗಿ ಮತ್ತು ಎರಡು ಜನರಿಗೆ ಪರೋಕ್ಷ ಉದ್ಯೋಗ ಅವಕಾಶ ಲಭಿಸುವ ನಿರೀಕ್ಷೆ ಮಾಡಲಾಗಿದೆ.

ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ, ಮೈಸೂರು ವಿಭಾಗದಲ್ಲಿ ನೂತನ ಜವಳಿ ಪಾರ್ಕ್‌ಗಳನ್ನು ಸಾರ್ವಜನಿಕ-ಸಹಭಾಗಿತ್ವದಲ್ಲಿ ಅಭಿವೃದ್ಧಿ, ಬಳ್ಳಾರಿಯ ಜೀನ್ಸ್ ಉದ್ದಿಮೆ ವಿಶ್ವದರ್ಜೆಗೇರಿಸಲು ಜೀನ್ಸ್ ಅಪಾರೆಲ್ ಪಾರ್ಕ್, ಕೈಗಾರಿಕೆ ಅಭಿವೃದ್ಧಿಗೆ ಒತ್ತು ನೀಡುವ ಸಂಬಂಧ ಧಾರವಾಡ ಸಮೀಪ ಆರು ಸಾವಿರ ಎಕರೆ ಪ್ರದೇಶದಲ್ಲಿ ಕೈಗಾರಿಕಾ ನೋಡ್ ಸ್ಥಾಪನೆ, ಎಂಎಸ್‌ಎಂಇಗಳಿಗೆ ಟ್ರೇಡ್ಸ್ ವೇದಿಕೆ ಹೀಗೆ ಉದ್ಯಮ-ವ್ಯಾಪಾರ ವೃದ್ಧಿ, ಉದ್ಯೋಗ ಸೃಷ್ಟಿ, ಆರ್ಥಿಕತೆಗೆ ಚೈತನ್ಯ ತುಂಬುವ ದೂರದೃಷ್ಟಿ ಬಜೆಟ್‌ನಲ್ಲಿದೆ.

> **ಜಿಮ್‌ಗೆ ದಿನಾಂಕ ನಿಗದಿ**
>
> ಕೈಗಾರಿಕಾ ಅಭಿವೃದ್ಧಿಯಲ್ಲಿ ಕರ್ನಾಟಕದ ಉನ್ನತ ಸ್ಥಾನ ಉಳಿಸಿಕೊಳ್ಳಲು, ಹೆಚ್ಚು ಬಂಡವಾಳ ಹೂಡಿಕೆ ಆಕರ್ಷಿಸಲು ಹೊಸ ಕೈಗಾರಿಕಾ ನೀತಿ ಜಾರಿ, 2025ರ ಫೆಬ್ರವರಿಯಲ್ಲಿ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಆಯೋಜಿಸಲು ನಿರ್ಧರಿಸಲಾಗಿದೆ.

**ತಂತ್ರಜ್ಞಾನ ಸಮರ್ಥ ಬಳಕೆ**

ಇತ್ತೀಚಿನ ದಿನಗಳಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಕೃತಕ ಬುದ್ಧಿಮತ್ತೆ, ಮಷಿನ್ ಲರ್ನಿಂಗ್, ಕ್ಲೌಡ್ ಕಂಪ್ಯೂಟಿಂಗ್ ಇತ್ಯಾದಿ ತಂತ್ರಜ್ಞಾನ ಬಳಕೆಯ ಮೂಲಕ ಪ್ರತಿಭಾವಂತರಿಗೆ ಆದ್ಯತೆ ನೀಡುವುದು ಹಾಗೂ ಆರ್ಥಿಕ ಸಬಲೀಕರಣಕ್ಕೆ ಬಳಕೆ ಮಾಡುವ ಕಡೆ ಗಮನ ಹರಿಸಿದ್ದಾರೆ.

ಹೊಸ ಜಾಗತಿಕ ಸಾಮರ್ಥ್ಯ ಕೇಂದ್ರಗಳ ನೀತಿ ಜಾರಿ, 30 ಸಾವಿರ ಹೊಸ ಉದ್ಯೋಗ ಸೃಜನೆ ಗುರಿಯೊಂದಿಗೆ ಎವಿಜಿಸಿ-ಎಕ್ಸ್‌ಆರ್ 3.0 ನೀತಿ ಜಾರಿ, ಜಿನೋಮಿಕ್ಸ್‌ನಲ್ಲಿ ಅಧ್ಯಯನ ಮತ್ತು ಸಂಶೋಧನೆಗೆ ಉತ್ತೇಜಿಸಿ ಸುಧಾರಿತ ಜಿನೋಮ್ ಎಡಿಟಿಂಗ್ ಮತ್ತು ಜೀನ್ ಥೆರಪಿ ಕೇಂದ್ರ ಸ್ಥಾಪನೆ. ಬೆಂಗಳೂರಿನಾಚೆಗೂ ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ಯುವಜನರ ಕೌಶಲ್ಯಾಭಿವೃದ್ಧಿಗೆ ಕಲಬುರಗಿ, ಶಿವಮೊಗ್ಗ, ಹುಬ್ಬಳ್ಳಿ, ತುಮಕೂರಿನಲ್ಲಿ ಕೌಶಲ್ಯ ಮತ್ತು ನಾವೀನ್ಯತಾ ಕೇಂದ್ರ, ಉದ್ಯಮಗಳಿಗೆ ಅವಶ್ಯಕತೆಗೆ ತಕ್ಕಂತೆ ಕೌಶಲ್ಯಪೂರ್ಣ ಮಾನವ ಸಂಪನ್ಮೂಲ ಸೃಜನೆಗೆ ಸ್ಕಿಲ್ ಅಕಾಡೆಮಿ ಸ್ಥಾಪನೆ ಉದ್ದೇಶವನ್ನು ಬಜೆಟ್ ಹೊಂದಿದೆ.

**ಬರ ನಿರ್ವಹಣೆಯ ದೂರದೃಷ್ಟಿ**

ಕೃಷಿಗೆ ಹೆಚ್ಚಿನ ಆದ್ಯತೆ ನೀಡಿರುವುದು ಬಜೆಟ್‌ನ ವಿಶೇಷ. ಈ ರೀತಿ ನೀಡುವಲ್ಲಿ ಎದುರಾಗಬಹುದಾದ ಸಾಂಭವ್ಯ ಬರ ನಿರ್ವಹಣೆಯ ಉದ್ದೇಶವನ್ನೂ ಸರ್ಕಾರ ಹೊಂದಿದೆ. ಸಮಗ್ರ ಕೃಷಿ ಪದ್ಧತಿಯನ್ನು ಅತೀವೃಷ್ಟಿ, ಅನಾವೃಷ್ಟಿಗೆ ರೈತ ಪದೇ ಪದೆ ಸಿಲುಕಿ ಸಂಕಷ್ಟ ಅನುಭವಿಸುತ್ತಿರುವುದನ್ನು ತಪ್ಪಿಸಲು ಆದ್ಯತೆ ನೀಡಿದೆ. ಜತೆಗೆ ಕುರಿ, ಕೋಳಿ, ಹೈನುಗಾರಿಕೆಯನ್ನು ಜತೆ ಜತೆಯಲ್ಲೇ ತೆಗೆದುಕೊಂಡು ಹೋಗುವುದರಿಂದ ರೈತ ನಷ್ಟಕ್ಕೆ ಒಳಗಾಗುವುದು ತಪ್ಪುತ್ತದೆ.

**ನಮ್ಮ ಮಿಲೆಟ್**

ಕಿರುಧಾನ್ಯಗಳ ಉತ್ಪಾದನೆ ಹಾಗೂ ಬಳಕೆ ಹೆಚ್ಚಿಸಲು ಆದ್ಯತೆ ನೀಡಲು ನಮ್ಮ ಮಿಲೆಟ್ ಎಂಬ ಪರಿಕಲ್ಪನೆ ಪರಿಚಯಿಸುತ್ತಿರುವುದು ಸಿದ್ದರಾಮಯ್ಯ ಅವರಿಗೆ ಇರುವ ದೂರದೃಷ್ಟಿ. ಸಿರಿಧಾನ್ಯಗಳು ಹೆಚ್ಚು ನೀರಿನ ಅಗತ್ಯವಿಲ್ಲದೇ ಬೆಳೆಯುತ್ತವೆ. ಪೌಷ್ಠಿಕ ಹಾಗೂ ಆರೋಗ್ಯಯುತ ಆಹಾರವೂ ಆಗಿವೆ. ಬರ ಎದುರಿಸಲು ರೈತರಿಗೆ



Downloaded From:www.kpscvaani.com



ಸಿರಿಧಾನ್ಯಗಳು ವರವೇ ಆಗಿವೆ. ಅವುಗಳ ಮಾರಾಟಕ್ಕೆ ನಮ್ಮ ಮಿಲೆಟ್ ಎಂಬ ಮಾಲ್‌ಗಳನ್ನು ಆರಂಭಿಸಲಾಗುತ್ತಿದೆ.

ಅದೇ ರೀತಿಯಲ್ಲಿ ತೋಟಗಾರಿಕೆ ಉತ್ಪನ್ನಗಳ ಮಾರಾಟಕ್ಕೆ ಕಿಸಾನ್ ಮಾಲ್ ಸ್ಥಾಪಿಸುತ್ತಿರುವುದು ಸಹ ರೈತರಿಗೆ ಪ್ರೋತ್ಸಾಹ ನೀಡಲು. ಹಾಗೆಯೇ ಗ್ರಾಹಕರಿಗೆ ಉತ್ತಮ ಹಣ್ಣು, ತರಕಾರಿ ಲಭ್ಯವಾಗುತ್ತದೆ. 80 ವರ್ಷ ದಾಟಿದ ವೃದ್ಧರ ಮನೆ ಬಾಗಿಲಿಗೆ ಆಹಾರಧಾನ್ಯಗಳನ್ನು ತಲುಪಿಸುವ ಅನ್ನ ಸುವಿಧಾದಂತಹ ಯೋಜನೆಯನ್ನು ನೀಡುವ ಮೂಲಕ ಯಾರನ್ನು ಮರೆತಿಲ್ಲ.

**ರೈತರ ಆದಾಯ ಹೆಚ್ಚಳ**

ಜಾಗತಿಕ ತಾಪಮಾನದಲ್ಲಿನ ಬದಲಾವಣೆಯನ್ನು ನಿಯಂತ್ರಿಸಲು ಕಾರ್ಬನ್ ಕ್ರೆಡಿಟ್ ಹೊಸ ಪರಿಕಲ್ಪನೆ. ಇದರ ಮಾರಾಟ ರೈತರ ಆದಾಯವನ್ನು ದ್ವಿಗುಣ ಮಾಡುವುದರಲ್ಲಿ ಅನುಮಾನವಿಲ್ಲ. ಆ ನಿಟ್ಟಿನಲ್ಲಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಪ್ರಯತ್ನ ಮಾಡಿದ್ದಾರೆ. ವಾತಾವರಣದಲ್ಲಿ ಸೇರ್ಪಡೆಯಾಗುವ ಕಾರ್ಬನ್ ಡೈ ಆಕ್ಸೈಡ್ ಹೊರ ಸೂಸುವಿಕೆ ಕಡಿಮೆ ಮಾಡಲು ಹೊಸ ಮಾರ್ಗವೊಂದನ್ನು ಹುಡುಕಲಾಗಿದೆ. ರೈತರಿಗೆ ಲಾಭವೂ ಆಗಬೇಕು, ಪರಿಸರ ಪ್ರದೂಷಣೆಯನ್ನೂ ತಗ್ಗಿಸುವ ನಿಟ್ಟಿನಲ್ಲಿ ಬಜೆಟ್‌ನಲ್ಲಿ ಕಾರ್ಬನ್ ಕ್ರೆಡಿಟ್ ಪರಿಕಲ್ಪನೆ ಘೋಷಿಸಲಾಗಿದೆ.

ಕೃಷಿ, ತೋಟಗಾರಿಕೆ, ಅರಣ್ಯ ಬೆಳೆಗಳಲ್ಲಿ ಹೆಚ್ಚು ಇಂಗಾಲ ಹಿಡಿದಿಟ್ಟುಕೊಳ್ಳುವ ಬೆಳೆಗಳನ್ನು ಗುರುತಿಸಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಾರ್ಬನ್ ಕ್ರೆಡಿಟ್ ರೂಪದಲ್ಲಿ ಮಾರಾಟ ಮಾಡುವ ಮೂಲಕ ರೈತರು ಹೆಚ್ಚಿನ ಆದಾಯಗಳಿಸಲು ಅನುಕೂಲವಾಗುವಂತೆ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಕೈಗಾರಿಕೆಗಳು, ಕಂಪನಿಗಳು, ವ್ಯಕ್ತಿಗಳು ಹಾಗೂ ಸರ್ಕಾರಗಳು ಸಸ್ಯಗಳನ್ನು ನೆಡಲು ಅಥವಾ ಅರಣ್ಯವನ್ನು ಸಂರಕ್ಷಿಸಲು ಈ ಯೋಜನೆ ಸಹಕಾರಿಯಾಗಿದೆ.

**ಸ್ಥಳೀಯ ಸರ್ಕಾರಗಳ ಬಲವರ್ಧನೆ**

ಸಿದ್ದರಾಮಯ್ಯ ಅವರ ದೂರದೃಷ್ಟಿಗೆ ಮತ್ತೊಂದು ಉದಾಹರಣೆ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ಪಾರದರ್ಶಕತೆ ಮತ್ತು ಅದರ ಮೂಲಕ ಉತ್ತರದಾಯಿತ್ವ ತರಲು ಮುಂದಾಗಿರುವುದು. ಪಂಚಾಯಿತಿಗಳಲ್ಲಿ ಸಾಮಾನ್ಯ ಸಭೆ ಹಾಗೂ ಗ್ರಾಮಸಭೆಗಳ ಕಲಾಪ ನೇರ ಪ್ರಸಾರ ಮಾಡುವುದು. ಅದೇ ರೀತಿ ಪೌರಸಂಸ್ಥೆಗಳಲ್ಲಿ ಸಹ ಅದೇ ಮಾನದಂಡ ಅನುಸರಿಸಲಾಗುತ್ತಿದೆ. ಇದರಿಂದ ಬಹುದೊಡ್ಡ ಬದಲಾವಣೆ ನಿರೀಕ್ಷೆ ಮಾಡಬಹುದಾಗಿದೆ.

**ಶಿಕ್ಷಣ, ಆರೋಗ್ಯಕ್ಕೆ ಒತ್ತು**

ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಮೂಲಸೌಕರ್ಯ ಕಲ್ಪಿಸುವ ಕಡೆ ಮುಖ್ಯಮಂತ್ರಿ ಅವರು ಗಮನ ಹರಿಸಿದ್ದಾರೆ. ಶಾಲಾ, ಕಾಲೇಜು ಕೊಠಡಿ ನಿರ್ಮಾಣ, ದುರಸ್ತಿ, ಶೌಚಾಲಯ ನಿರ್ಮಾಣಕ್ಕೆ ದೊಡ್ಡ ಮೊತ್ತ ಮೀಸಲಿಡುವ ಮೂಲಕ ಪರಿಣಾಮಕಾರಿ ಬದಲಾವಣೆಗೆ ಸಹಕಾರಿಯಾಗಲಿದೆ. ದ್ವಿಭಾಷಾ ಮಾಧ್ಯಮ, ಮಕ್ಕಳಲ್ಲಿ ಸಾಮರಸ್ಯ, ವೈಜ್ಞಾನಿಕ ಮನೋಭಾವ ಕಲಿಸಲು ನಾವು ಮನುಜರು ಹೆಸರಿನ ವಿಚಾರ ವಿಮರ್ಶೆ, ಸಂವಾದ ಚಟುವಟಿಕೆ ಬಹಳ ಮುಖ್ಯವಾದ ಕ್ರಾಂತಿಕಾರಕ ನಿರ್ಧಾರವಾಗಿದೆ. ಆರೋಗ್ಯ ಕ್ಷೇತ್ರದಲ್ಲಿ ಲ್ಯಾಬ್‌ಗಳ ಸ್ಥಾಪನೆ, ಆಧುನಿಕ ಉಪಕರಣಗಳ ಖರೀದಿಯಂತಹ ತೀರ್ಮಾನ ಸರ್ಕಾರಿ ಆರೋಗ್ಯ ಸೇವೆಗೆ ದೊಡ್ಡ ಕೊಡುಗೆ ನೀಡಲಿದೆ.

**ಹೊಸ ಹೊಸ ನೀತಿಗಳು**

ವಿವಿಧ ವಲಯಗಳಲ್ಲಿ ಹೊಸತನ ಸಾಧಿಸಲು ಹೊಸ ಹತ್ತು ನೀತಿಗಳನ್ನು ಪ್ರಕಟಿಸಲಾಗಿದೆ. ಕೈಗಾರಿಕೆ ಬೆಳವಣಿಗೆ ಹಾಗೂ ಹೂಡಿಕೆ ಆಹ್ವಾನಕ್ಕೆ ಕೈಗಾರಿಕಾ ನೀತಿ. ಖಾಸಗಿ ಬಂಡವಾಳ ಆಕರ್ಷಣೆಗೆ ಪಿಪಿಪಿ ನೀತಿ. ಗ್ರೀನ್ ಹೈಡ್ರೋಜನ್ ನೀತಿ. ಕೆರೆ, ಉದ್ಯಾನಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಗೆ ಪ್ರತ್ಯೇಕ ನೀತಿ. ಜಾಹೀರಾತು ನೀತಿ, ಎಫ್‌ಎಆರ್ ನೀತಿ, ಗ್ರಾಪಂಗಳಲ್ಲಿ ಆಸ್ತಿ ನಗದೀಕರಣ ನೀತಿ, ಕೌಶಲ್ಯ ನೀತಿ ಸೇರಿ ಬೇರೆ ಬೇರೆ ನೀತಿಗಳಿವೆ. ಸಿದ್ದರಾಮಯ್ಯ ಅವರಿಗೆ ರಾಜ್ಯದ ಸಮಗ್ರ ಅಭಿವೃದ್ಧಿಯ ಕನಸಿಗೆ ಪೂರಕವಾಗಿ ಹೊಸ ನೀತಿಗಳು ಘೋಷಣೆಯಾಗಿವೆ.

ಪ್ರವಾಸೋದ್ಯಮ ನೀತಿ 2024–29 ಜಾರಿ. ಜವಳಿ ಮತ್ತು ನೇಕಾರಿಕೆ ಅಭಿವೃದ್ಧಿಗೆ 2024–29ರ ಅವಧಿಗೆ 10 ಸಾವಿರ ಕೋಟಿ ರೂ. ಬಂಡವಾಳ ಹೂಡಿಕೆ, ಎರಡು ಲಕ್ಷ ಉದ್ಯೋಗಗಳ ಸೃಜನೆ ಗುರಿಯೊಂದಿಗೆ ಹೊಸ ನೀತಿ ಜಾರಿಯಾಗಲಿದೆ.

ಸಿದ್ದರಾಮಯ್ಯ ಅವರು ಹದಿನೈದು ಬಜೆಟ್ ಮಂಡಿಸಿ ರಾಜ್ಯದ ಮಟ್ಟಿಗೆ ಸಾಧನೆ ಮಾಡಿರುವಂತೆಯೇ ಬಜೆಟ್ ಸಹ ಒಂದು ದಾಖಲೆಯಾಗಿದೆ. ಅವರೇ ಹೇಳಿರುವಂತೆ ಡೇರ್ ಡೆವಿಲ್ ಮುಸ್ತಫಾ ಚಿತ್ರದ 'ಒಂದು ತೋಟದಲ್ಲಿ ನೂರು ಹೂವು ಅರಳಲಿ, ಎಲ್ಲ ಕೂಡಿ ಆಡುವಂತ ಗಾಳಿ ಬೀಸಲಿ' ಎಂಬ ಸಾಲುಗಳು ರಾಜ್ಯದ ಸಮಗ್ರ ಅಭಿವೃದ್ಧಿಯ ಆಶಯವನ್ನು ಬಿಂಬಿಸುತ್ತವೆ.

ಗ್ಯಾರಂಟಿ ಮಾತ್ರವೆಂದು ಕೂತಿದ್ದರೆ ಯಾವುದೇ ಸಾಧನೆ ಆಗುತ್ತಿರಲಿಲ್ಲ. 'ಆಗದು ಎಂದು ಕೈಲಾಗದು ಎಂದು ಕೈ ಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ, ಮನಸೊಂದಿದ್ದರೆ ಮಾರ್ಗವು ಉಂಟು ಕೆಚ್ಚೆದೆ ಇರಬೇಕೆಂದು' ಎಂಬ ಡಾ. ರಾಜಕುಮಾರ್ ಅಭಿನಯದ ಬಂಗಾರದ ಮನುಷ್ಯ ಚಿತ್ರಗೀತೆಯ ಸಾಲಿನಂತೆ ಎಲ್ಲ ಕ್ಷೇತ್ರ, ವರ್ಗ, ಸಮುದಾಯಗಳ ಅಭಿವೃದ್ಧಿಗೆ ಬಜೆಟ್ ಮೂಲಕ ಮನಸ್ಸು ಮಾಡಿದ್ದಾರೆ. ಜನರ ಬದುಕನ್ನು ಕಟ್ಟಿಕೊಡುವ ಪ್ರಯತ್ನ ಮಾಡಿರುವುದು ಬಜೆಟ್‌ನಲ್ಲಿ ಕಂಡು ಬರುತ್ತಿದೆ. ಒಟ್ಟಿನಲ್ಲಿ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಜೊತೆಜೊತೆ ಒಯ್ಯಬಹುದೆನ್ನುವುದನ್ನು ಈ ಬಜೆಟ್ ಸಾಧಿಸಿದೆ.



Downloaded From:www.kpscvaani.com



# ಜನಸ್ಪಂದನ:

## ಜನರ ಮನದ ಮಾತಿಗೆ ಕಿವಿಯಾದ ಮುಖ್ಯಮಂತ್ರಿಗಳು

**ರಾಜ್ಯ ರಾಜಧಾನಿಯಲ್ಲಿ ಜರುಗಿದ ಎರಡನೇ ರಾಜ್ಯಮಟ್ಟದ ಜನಸ್ಪಂದನ ಕಾರ್ಯಕ್ರಮದ ಒಂದು ಹಿನ್ನೋಟ.**

ನಂಜುಂಡಪ್ಪ. ವಿ.



**ಯಾ**ವುದೇ ಸರ್ಕಾರ ಜನಪರ, ಜನ ಕೇಂದ್ರೀಕೃತವಾಗಿರಬೇಕು. ಆಡಳಿತ ವ್ಯವಸ್ಥೆ ಒನ್ ವೇ ಟ್ರಾಫಿಕ್ ಆಗಲೇಬಾರದು. ಎರಡೂ ಬದಿಯಲ್ಲಿ ಸರಾಗ ಸಂಚಾರ ಇರಬೇಕು. ಜನರ ಮನದ ಮಾತಿಗೆ ಆಡಳಿತಗಾರರು ಕಿವಿಗೊಟ್ಟರೆ ಸಾಕಷ್ಟು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಜನರ ಅಹವಾಲು ಆಲಿಸಿದರಂತೂ ಜನರ ದೃಷ್ಟಿಯಲ್ಲಿ ಆಡಳಿತ ವ್ಯವಸ್ಥೆ ಮತ್ತಷ್ಟು ಮಹತ್ವ ಪಡೆಯುತ್ತದೆ. ಆಡಳಿತಾರೂಢರಲ್ಲಿ ಹೊಣೆಗಾರಿಕೆಯಿದ್ದರೆ ನಂಬಿಕೆ ಆಧಾರಿತ ಆಡಳಿತಕ್ಕೆ ಪುಷ್ಟಿ ದೊರೆಯುತ್ತದೆ. ಜವಾಬ್ದಾರಿತನದಿಂದ ಉತ್ತಮ ಆಡಳಿತ, ಪಾರದರ್ಶಕತೆ ಜೊತೆಗೆ ಸಮುದಾಯದ ಭಾಗವಹಿಸುವಿಕೆ ಹೆಚ್ಚಾಗುತ್ತದೆ. ಇದರಿಂದ ಆಡಳಿತ ಹೆಚ್ಚು ಅರ್ಥಪೂರ್ಣವಾಗುತ್ತದೆ.

ಸಮುದಾಯದ ಸಮಗ್ರ ಅಗತ್ಯತೆಗಳನ್ನು ಸಮಯಕ್ಕೆ ಸರಿಯಾಗಿ ಪೂರೈಸುವ ಪ್ರಕ್ರಿಯೆಯನ್ನು ಜವಾಬ್ದಾರಿ ಎಂದು ಕರೆಯಲಾಗುತ್ತದೆ. ಸರ್ಕಾರದ ಕಾರ್ಯನೀತಿಗಳು, ಅವುಗಳನ್ನು ಅನುಷ್ಠಾನಗೊಳಿಸುವ ಕ್ರಮ, ಸಾರ್ವಜನಿಕರಿಗೆ ಆಗುವ ಲಾಭವನ್ನು ಸಾರ್ವಜನಿಕರ ಮುಂದಿಡುವ, ಸರಿತಪ್ಪುಗಳ ಜವಾಬ್ದಾರಿಯನ್ನು ಹೊರುವುದೇ ನಿಜವಾದ ಹೊಣೆಗಾರಿಕೆಯಾಗಿದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಲ್ಪಾವಧಿಯಲ್ಲಿಯೇ ಎರಡು ರಾಜ್ಯಮಟ್ಟದ ಜನತಾದರ್ಶನ ನಡೆಸಿ ಜನರ ಒಲವಿಗೆ ಪಾತ್ರವಾಗಿದೆ.

ಕಳೆದ ನವೆಂಬರ್ 27 ರಂದು ಮೊದಲ ಜನಸ್ಪಂದನ ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆದಿತ್ತು. ಏಕ ಕಾಲಕ್ಕೆ ವಿವಿಧ ಜಿಲ್ಲೆಗಳ ಜನರ ಅಹವಾಲು ಆಲಿಸಿ ಶೇ 98 ರಷ್ಟು ಪರಿಹಾರ ದೊರಕಿಸಿಕೊಡಲಾಗಿತ್ತು. ನಂತರ ಫೆಬ್ರವರಿ 8 ರಂದು ವಿಧಾನಸೌಧದ ಮುಂಭಾಗ ನಡೆದ ಅತಿ ದೊಡ್ಡ "ಜನಸ್ಪಂದನ"ಕ್ಕೆ ಅಭೂತಪೂರ್ವ ಸ್ಪಂದನೆ ದೊರೆಯಿತು. ರಾಜ್ಯದ ಮೂಲೆ ಮೂಲೆಗಳಿಂದ ಜನ ನಾನಾ ಸಮಸ್ಯೆಗಳನ್ನು ಹೊತ್ತು


Downloaded From:www.kpscvaani.com



**ಶರಣ ಬಸವ ಕುಮಾರ್, ಬಳ್ಳಾರಿ**

ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕಿನ ಶರಣ ಬಸವ ಕುಮಾರ್ ಅವರಿಗೆ ಎರಡೂ ಕಣ್ಣುಗಳು ಕಾಣದಾಗಿದ್ದು, ಸ್ವಂತ ಉದ್ಯೋಗ ಕೈಗೊಳ್ಳು ಆರ್ಥಿಕ ನೆರವು ಕೋರಿದರು. ಅವರ ಮನವಿಯನ್ನು ಆಲಿಸಿದ ಮುಖ್ಯಮಂತ್ರಿಗಳು ಪರಿಹಾರ ನಿಧಿಯಿಂದ ನೆರವು ನೀಡುವುದಾಗಿ ಅಭಯವನ್ನಿತ್ತರು.



**ನಾಗರಾಜಯ್ಯ, ತುಮಕೂರು**

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ನಾಗರಾಜಯ್ಯ ಅವರು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಶಿರಾದಲ್ಲಿ ರೂಢಿದಾರಿಯನ್ನು ಕತ್ತರಿಸಿರುವುದರಿಂದ 5 ಕಿ.ಮೀ ಬಳಸಿಕೊಂಡು ಓಡಾಡಬೇಕಿದೆ. ಇದನ್ನು ಸರಿಪಡಿಸುವಂತೆ ಕೋರಿದರು. ಅವರ ಮನವಿ ಅರ್ಜಿಯನ್ನು ಸ್ವೀಕರಿಸಿದ ಮುಖ್ಯಮಂತ್ರಿಗಳು ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.



**ನೂರ್ ಫಾತಿಮಾ ಬಿನ್ ಇಬ್ರಾಹಿಂ, ಬೆಂಗಳೂರು**

ಬೆಂಗಳೂರಿನ ನೂರ್ ಫಾತಿಮಾ ಬಿನ್ ಇಬ್ರಾಹಿಂ ಇವರಿಗೆ ಅಲ್ಪಸಂಖ್ಯಾತರ ಅಭಿವೃದ್ಧಿ ನಿಮಗದಿಂದ ವಿದ್ಯಾಭ್ಯಾಸಕ್ಕಾಗಿ ಸಾಲ ಯೋಜನೆಯಡಿ ಕಝಾಕಿಸ್ಥಾನದಲ್ಲಿ ಎಂಬಿಬಿಎಸ್ ವಿದ್ಯಾಭ್ಯಾಸಕ್ಕಾಗಿ 10 ಲಕ್ಷ ರೂ.ಗಳ ಮಂಜೂರಾತಿ ಪತ್ರವನ್ನು ಮುಖ್ಯಮಂತ್ರಿಗಳು ಜನಸ್ಪಂದನ ಕಾರ್ಯಕ್ರಮದಲ್ಲಿ ಅವರ ತಂದಯವರಿಗೆ ಹಸ್ತಾಂತರ ಮಾಡಿದರು.

**ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದ ಜನರು**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನಸೌಧದಲ್ಲಿ ನಡೆಸಿದ ರಾಜ್ಯಮಟ್ಟದ ಜನಸ್ಪಂದನ ವೇಳೆ ಜನಸಾಮಾನ್ಯರು ವಿಧಾನಸೌಧ ನೋಡಿ ಸಂಭ್ರಮಿಸಿದರು. ಶಕ್ತಿ ಸೌಧದ ಮುಂದೆ ಸೆಲ್ಫಿ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು. ಬಹಳಷ್ಟು ಮಂದಿ ಮೊದಲ ಬಾರಿಗೆ ವಿಧಾನಸೌಧಕ್ಕೆ ಆಗಮಿಸಿದ್ದು, ತಮ್ಮ ಜೀವಮಾನದಲ್ಲಿ ಇದು ಮರೆಯಲಾಗದ ಕ್ಷಣ ಎಂದು ಹೇಳಿಕೊಳ್ಳುತ್ತಿದ್ದದ್ದು ಕಂಡು ಬಂತು. ವಿಧಾನಸೌಧ ಇವರೆಲ್ಲರಿಗೂ ಅತ್ಯಂತ ಆಪ್ಯಾಯಮಾನವಾಗಿತ್ತು.

ತಂದಿದ್ದರು. ವಿಧಾನಸೌಧದ ಆವರಣದಲ್ಲಿ ಇಡೀ ಆಡಳಿತ ವ್ಯವಸ್ಥೆ ಬಿಡಾರ ಹೂಡಿತ್ತು. ವಿವಿಧ ಇಲಾಖೆಗಳ 29 ಕೌಂಟರ್‌ಗಳನ್ನು ತೆರೆಯಲಾಗಿತ್ತು. ಹಿಂದೆಂದೂ ಕಂಡರಿಯದ ಅತಿ ದೊಡ್ಡ ಜನತಾದರ್ಶನ ಇದಾಗಿತ್ತು. ವಿಧಾನಸೌಧದ ಪೂರ್ವದ್ವಾರದಲ್ಲಿ ಸಕಲ ವ್ಯವಸ್ಥೆ ಮಾಡಲಾಗಿತ್ತು. ಜನ ಸಾಮಾನ್ಯರಿಗಾಗಿ ವಿಧಾನಸೌಧದ ಪೂರ್ವ ಹೆಬ್ಬಾಗಿಲನ್ನು ಮುಕ್ತಗೊಳಿಸಲಾಗಿತ್ತು. ಬೆಂಗಳೂರು ಕೇಂದ್ರ ಡಿಸಿಪಿ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಬಹುತೇಕ ಸಚಿವರು, ಎಲ್ಲಾ ಇಲಾಖೆಯ ಉನ್ನತ ಮತ್ತು ಕಿರಿಯ ಅಧಿಕಾರಿಗಳು ಜನರ ಸಮಸ್ಯೆಗಳನ್ನು ಸಮಾಧಾನದಿಂದ ಆಲಿಸಿದರು. ಕೆಲವರಿಗೆ ಸ್ಥಳದಲ್ಲೇ ಪರಿಹಾರ ದೊರೆತರೆ, ಇನ್ನೂ ಕೆಲವರಿಗೆ ವಾಗ್ದಾನ ಲಭಿಸಿತು. ಶಕ್ತಿ ಕೇಂದ್ರ ವಿಧಾನಸೌಧದ ಬಳಿ ಪ್ರಜಾತಂತ್ರದ ಹಬ್ಬದಂತೆ ಜನಸ್ಪಂದನ ಕಾರ್ಯಕ್ರಮ ನಡೆಯಿತು. ವಿಶೇಷಚೇತನರು, ತೀವ್ರ ಅನಾರೋಗ್ಯಕ್ಕೊಳಗಾದವರು, ಹಿರಿಯ ನಾಗರಿಕರು, ಬಡವರು, ಗರ್ಭಿಣಿಯರು, ಬಾಣಂತಿಯರು, ಜನ ಸಾಮಾನ್ಯರು ಅಷ್ಟೇ ಏಕೆ ಸಾಧು ಸಂತರನ್ನೊಳಗೊಂಡಂತೆ ಎಲ್ಲಾ ವಲಯಗಳಿಂದ ಮನವಿಗಳು ಬಂದಿದ್ದವು.

ನಮ್ಮ ಊರಿಗೆ ಸರ್ಕಾರಿ ಶಾಲೆ ತೆರೆಯಬೇಕು ಎಂದು ವಿದ್ಯಾರ್ಥಿ ಸಮೂಹ ಮುಖ್ಯಮಂತ್ರಿಯವರಲ್ಲಿ ಭಿನ್ನವಿಸಿಕೊಂಡಿತು. ಚಾಮರಾಜನಗರದಿಂದ ಬೀದರ್‌ವರೆಗೆ ವಿವಿಧ ಮೂಲೆಗಳಿಂದ ಅಹವಾಲು ಸಲ್ಲಿಸಲು ಬೆಳಗಿನ ಜಾವದಿಂದಲೇ ಜನರು ಕಾದು ಕುಳಿತಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿವಲಯದಲ್ಲಿ ಮತ್ತಷ್ಟು ಜವಾಬ್ದಾರಿತನ ಮೂಡಿಸುವ ಉದ್ದೇಶದಿಂದಲೇ ಶಕ್ತಿಸೌಧದ ಮುಂದೆ ಜನಸ್ಪಂದನ ಕಾರ್ಯಕ್ರಮ ಆಯೋಜಿಸಿದಂತೆ ಕಂಡು ಬಂತು. ಕುಡಿಯುವ ನೀರು, ಅಶಕ್ತರಿಗೆ ಗಾಲಿ ಖುರ್ಚಿ, ವಿಶೇಷ ಚೇತನರಿಗೆ ಅವರಿದ್ದಲ್ಲಿಗೆ ಊಟದ ವ್ಯವಸ್ಥೆ, ಹೀಗೆ ಪ್ರತಿಯೊಂದು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಲಾಗಿತ್ತು.

ಜನಸ್ಪಂದನದ ಪ್ರತಿಯೊಂದು ವಿಭಾಗಕ್ಕೂ ನೋಡೆಲ್ ಅಧಿಕಾರಿಗಳನ್ನು ನಿಯೋಜಿಸಲಾಗಿತ್ತು. ಹಾಗಾಗಿ ಅಹವಾಲು ನೀಡಲು ಬಂದ ನಾಗರಿಕರಿಗೆ ಎಲ್ಲಿಯೂ ತೊಂದರೆಯಾಗಲಿಲ್ಲ. ಬೆಳಗ್ಗೆಯಿಂದ ಸಂಜೆವರೆಗೆ ನಡೆದ ಕಾರ್ಯಕ್ರಮದ



Downloaded From:www.kpscvaani.com

ಪೂರ್ಣ ಉಸ್ತುವಾರಿ ಮುಖ್ಯಮಂತ್ರಿಯವರದ್ದೇ ಆಗಿತ್ತು. ಆಗಮಿಸಿದ್ದ ಜನಸ್ತೋಮ ನಾಗರಿಕ ಸಮುದಾಯದಿಂದ ಅರ್ಜಿ ಸ್ವೀಕರಿಸಿ, ಅವುಗಳಿಗೆ ಪರಿಹಾರ ಸೂಚಿಸುತ್ತಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಸ್ವತಃ ನಾಗರಿಕರ ಸಮಸ್ಯೆಗಳಿಗೆ, ಸಾಮಾನ್ಯಜನರ ಮನದ ಮಾತುಗಳಿಗೆ ಕಿವಿಯಾದರು. ಪ್ರತಿಯೊಬ್ಬರ ಸಮಸ್ಯೆಗಳನ್ನು ಸಮಚಿತ್ತದಿಂದ ಆಲಿಸಿ ಹೃದಯ ವೈಶಾಲ್ಯತೆ ಮೆರೆದರು. ಅರ್ಜಿ ಸ್ವೀಕರಿಸಿ, ಮನವಿ ಪತ್ರದ ಮೇಲೆ ಷರಾ ಬರೆದು ಆದೇಶಿಸಿದರು. ಜನ ಸಾಮಾನ್ಯರ ಬಗ್ಗೆ ಸದಾ ಅಂತಃಕರಣದಿಂದ ವರ್ತಿಸುವ ಸಿದ್ದರಾಮಯ್ಯ ಅವರು ಅಪ್ಪಟ ಮಾನವೀಯ ವ್ಯಕ್ತಿ. ಸಾಮಾನ್ಯರಿಗೆ ತೊಂದರೆ ಕೊಡುವ ಅಧಿಕಾರಿಗಳನ್ನು ಅವರೆಂದೂ ಕ್ಷಮಿಸಿಲ್ಲ. ಜನಪರವಾಗಿರುವವರನ್ನು ಸದಾ ಗುರುತಿಸಿ ಪ್ರೋತ್ಸಾಹಿಸುವವರು.

ಜನಸ್ಪಂದನ ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರು, ವಿಶೇಷಚೇತನರ ಬಳಿ ತಾವೇ ದೌಡಾಯಿಸಿ "ಏಕೆ ಬಂದಿದ್ದೀರಿ. ನಿಮ್ಮ ಸಮಸ್ಯೆ ಏನು" ಎಂದು ಕೇಳಿದರು. ಕೆಲವರ ತಲೆ ಸವರಿದರು, ಕೈಕುಲುಕಿದರು, ಕೆಲವರ ಬೆನ್ನುತಟ್ಟಿ ಸಾಂತ್ವಾನದ ಜೊತೆಗೆ ಧೈರ್ಯ ಹೇಳಿದರು. ಕೆಲವರ ಮೇಲೆ ಹುಸಿ ಕೋಪ ತೋರಿಸಿದರೆ, ಅಲ್ಲೊಮ್ಮೆ, ಇಲ್ಲೊಮ್ಮೆ ಪ್ರೀತಿಯಿಂದ ಗದರಿ ಅನಗತ್ಯ ಬೇಡಿಕೆ ಇಡುವವರನ್ನು ಕಣ್ಸನ್ನೆಯಲ್ಲೇ ಸುಮ್ಮನಾಗಿಸುತ್ತಿದ್ದರು. ಸಣ್ಣ ಮಕ್ಕಳ ನಡುವೆ ಮಗುವಾದರು, ಜನ ಸಾಮಾನ್ಯರಲ್ಲಿ ಸಾಮಾನ್ಯರಾದರು. ಅನಾರೋಗ್ಯಕ್ಕೆ ಒಳಗಾದವರ ಬಗ್ಗೆ ಮರುಗಿ ಸ್ಥಳದಲ್ಲೇ ಪರಿಹಾರ ಮಂಜೂರು ಮಾಡಿದರು. ಕೆಲವರು ತಮ್ಮ ಕೌಟುಂಬಿಕ ಸಮಸ್ಯೆಗಳನ್ನು ಹೇಳಿಕೊಂಡರು, ವಿಶೇಷವೆಂದರೆ ಜನತಾದರ್ಶನದಲ್ಲಿ ಸಿದ್ದರಾಮಯ್ಯ ಅವರು ರಾಜೀ ಪಂಚಾಯ್ತಿ ಕೆಲಸವನ್ನೂ ಸಹ ಮಾಡಬೇಕಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿಯವರು, ನವೆಂಬರ್ 27 ರಂದು ನಡೆದ ಮೊದಲ ಜನಸ್ಪಂದನದಲ್ಲಿ ಬಹುತೇಕ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡಿ, ಜನರಿಗೆ ಪರಿಹಾರ ಒದಗಿಸಲಾಗಿದೆ. ಸರ್ಕಾರವನ್ನು ಜನರ ಬಳಿಗೇ ಒಯ್ಯಬೇಕೆಂಬುದು ನಮ್ಮ ಮಹತ್ವಾಕಾಂಕ್ಷೆಯಾಗಿದೆ. ಈ ನಿಟ್ಟಿನಲ್ಲಿ ಎಲ್ಲ ಜಿಲ್ಲೆಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಈವರೆಗೆ ಒಟ್ಟು 108 ಜನಸ್ಪಂದನ



**ಎಂ.ಶ್ರೀಧರ್, ಬೆಂಗಳೂರು**

ಬೆಂಗಳೂರಿನ ಜೆ.ಜೆ.ನಗರ ನಿವಾಸಿ ಎಂ.ಶ್ರೀಧರ್ ಅವರ ಎರಡೂ ಮೂತ್ರಪಿಂಡಗಳು ವಿಫಲವಾಗಿದ್ದು, ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಆರ್ಥಿಕ ನೆರವು ಕೋರಿ ಮನವಿ ಸಲ್ಲಿಸಿದರು. ಮುಖ್ಯಮಂತ್ರಿ ಅವರು ಇವರ ಸಮಸ್ಯೆಗೆ ಕೂಡಲೇ ಸ್ಪಂದಿಸಿ, ಪರಿಹಾರ ನೀಡುವ ಭರವಸೆ ನೀಡಿದರು.



**ಚೌಡೇಶ್ವರಿ, ನೆಲಮಂಗಲ**

ಕ್ಯಾನ್ಸರ್ ರೋಗಿಯಾಗಿರುವ ನೆಲಮಂಗಲದ ಚೌಡೇಶ್ವರಿ ಅವರು ಶಸ್ತ್ರಚಿಕಿತ್ಸೆಗೆ ಆರ್ಥಿಕ ನೆರವಿನ ಅಗತ್ಯ ಕೋರಿ ಮನವಿ ಸಲ್ಲಿಸಿದರು. ಅರ್ಜಿ ಸ್ವೀಕರಿಸಿದ ಮುಖ್ಯಮಂತ್ರಿ ಅವರು ಮುಖ್ಯಮಂತ್ರಿಗಳ ಪರಿಹಾರ ನಿಧಿ ಶಾಖೆಯ ಅಧಿಕಾರಿಗಳಿಗೆ ಅರ್ಜಿಯನ್ನು ಹಸ್ತಾಂತರಿಸಿ ಕೂಡಲೇ ಪರಿಹಾರ ಒದಗಿಸುವಂತೆ ಸೂಚಿಸಿದರು.

**ಟೋಲ್ ಫ್ರೀ ನಂಬರ್**

ಜನಸ್ಪಂದನಾ ಎಂಬುದು ಏಕೀಕೃತ ಸಾರ್ವಜನಿಕ ಕುಂದುಕೊರತೆಗಳ ನಿವಾರಣಾ ವ್ಯವಸ್ಥೆಯಾಗಿದ್ದು, ಜನಸ್ಪಂದನದಲ್ಲಿ ತಮ್ಮ ಅಹವಾಲುಗಳ ಸ್ಥಿತಿಗತಿಯನ್ನು ತಿಳಿಯಲು ಟೋಲ್ ಫ್ರೀ ನಂಬರ್ 1902 ಕ್ಕೆ ಕರೆ ಮಾಡಬಹುದು, ಹಾಗೆಯೇ https://ipgrs.karnataka.gov.in / ನಲ್ಲಿ ಲಾಗಿನ್ ಆಗಿ ತಮ್ಮ ಕುಂದುಕೊರತೆಗಳ ಮನವಿಯನ್ನು ಸಲ್ಲಿಸಬಹುದಾಗಿದೆ.



**ನವ್ಯಶ್ರೀ, ಬೆಂಗಳೂರು**

ಡಬ್ಬಲ್ ಡಿಗ್ರಿ ಮುಗಿಸಿರುವ ಬೆಂಗಳೂರಿನ ನಿವಾಸಿ ವಿಶಿಷ್ಠ ಚೇತನ ನವ್ಯಶ್ರೀ ಅವರು ತಾಯಿ ರಮಾಮಣಿ ಅವರ ಜತೆ ಬಂದು ಉದ್ಯೋಗಕ್ಕಾಗಿ ಮುಖ್ಯಮಂತ್ರಿ ಅವರಿಗೆ ಮನವಿ ಮಾಡಿದರು. ಉದ್ಯೋಗ ಮೇಳದ ವೇಳೆ ಈ ಅರ್ಜಿಯನ್ನು ಪರಿಗಣಿಸುವಂತೆ ಮುಖ್ಯಮಂತ್ರಿಗಳು ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.



Downloaded From:www.kpscvaani.com



**ಸುರೇಶ್ ತುಕಾರಾಂ ಪೋಂಡೆ, ಬೆಳಗಾವಿ**

ಬೆಳಗಾವಿ ಜಿಲ್ಲೆಯ ಸುರೇಶ್ ತುಕಾರಾಂ ಪೋಂಡೆ ಅವರು ತಮ್ಮ ಜಮೀನಿನಲ್ಲಿ ದೀಪಕ್ ಪಾಟೀಲ್ ಎಂಬುವರು ಮಣ್ಣು ತೆಗೆಯುತ್ತಿದ್ದು, ಕಳವು ಪ್ರಕರಣ ದಾಖಲಿಸಿಲ್ಲ ಎಂದು ದೂರು ನೀಡಲಾಗಿ, ಮುಖ್ಯಮಂತ್ರಿ ಅವರು ಸ್ಥಳದಲ್ಲಿಯೇ ಪೊಲೀಸ್ ಆಯುಕ್ತ ದಯಾನಂದ್ ಅವರಿಗೆ ಪ್ರಕರಣ ಪರಿಶೀಲಿಸುವಂತೆ ಸೂಚಿಸಿದರು.

ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿಯೂ ಜನಸ್ಪಂದನ ಕಾರ್ಯಕ್ರಮ ಆಯೋಜಿಸಿದ್ದು, ಇಲ್ಲಿ ಬಗೆಹರಿಯದ ಸಮಸ್ಯೆಗಳನ್ನು ರಾಜ್ಯಮಟ್ಟದ ಜನಸ್ಪಂದನದಲ್ಲಿ ಸಲ್ಲಿಸಬಹುದಾಗಿದೆ. ಕಾನೂನುಬದ್ಧ ಸಮಸ್ಯೆಗಳಿಗೂ ಪರಿಹಾರದೊರೆಯಲಿದೆ. ಆದರೆ ಸಮಸ್ಯೆಯನ್ನು ಬಗೆಹರಿಸಲು ಕಾನೂನು ತೊಡಕು ಇದ್ದಲ್ಲಿ, ಈ ಕುರಿತು ಅರ್ಜಿದಾರರಿಗೆ ಕಾರಣ ಸಹಿತ ಹಿಂಬರಹ ನೀಡಲಾಗುವುದು ಎಂದು ಸ್ಪಷ್ಟಪಡಿಸಿದರು.

ಜನಸ್ಪಂದನದಲ್ಲಿ ಸ್ವೀಕರಿಸಲಾದ ಅರ್ಜಿಗಳನ್ನು ಮೂರು ತಿಂಗಳೊಳಗೆ ವಿಲೇವಾರಿ ಮಾಡಿ ಪರಿಹರಿಸಬೇಕೆಂದು ಸ್ಪಷ್ಟ ಸೂಚನೆ ನೀಡಲಾಗಿದೆ. ಆಡಳಿತ ವ್ಯವಸ್ಥೆ ಚುರುಕುಗೊಂಡು ಸಾರ್ವಜನಿಕರಿಗೆ ಸ್ಪಂದನೆ ಬೇಕು ಎನ್ನುವ ಆಶಯದೊಂದಿಗೆ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸರ್ಕಾರ ರೂಪಿಸುವ ಜನಪರ, ಜನೋಪಯೋಗಿ ಕಾರ್ಯಕ್ರಮಗಳು ನೇರವಾಗಿ ಫಲಾನುಭವಿಗಳಿಗೆ ತಲುಪಬೇಕು. ನಮ್ಮ ಸರ್ಕಾರ ಎಂಟು ತಿಂಗಳೊಳಗಾಗಿ ಎಲ್ಲ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಪ್ರತಿಪಕ್ಷದವರು ಗ್ಯಾರಂಟಿ ಯೋಜನೆ ಜಾರಿ ಸಾಧ್ಯವಿಲ್ಲ. ಇದರಿಂದ ಕರ್ನಾಟಕ ದಿವಾಳಿಯಾಗುತ್ತದೆ ಎಂದು ಟೀಕಿಸಿದ್ದರು.



**ಸ್ಥಳದಲ್ಲೇ ಆರ್ಥಿಕ ನೆರವು**

ರಾಮನಗರ ಜಿಲ್ಲೆಯ ವಿಜಯಕುಮಾರ್ ಬಿನ್ ನರಸಿಂಹಮೂರ್ತಿ ಅವರಿಗೆ ಮೂತ್ರಪಿಂಡ ಕಸಿ ಚಿಕಿತ್ಸೆಗಾಗಿ 4 ಲಕ್ಷ ರೂ.ಗಳ ಧನಸಹಾಯ, ವಿಜಯಪುರ ಜಿಲ್ಲೆ ಸಿಂದಗಿ ತಾಲ್ಲೂಕಿನ ಬಸನಗೌಡ ಬಿರಾದಾರ್ ಅವರಿಗೆ ಬೋನ್ ಮ್ಯಾರೋಕ್ಯಾನ್ಸರ್ ಚಿಕಿತ್ಸೆಗಾಗಿ 4 ಲಕ್ಷ ರೂ.ಗಳ ನೆರವು. ತುಮಕೂರು ಜಿಲ್ಲೆಯ 8 ವರ್ಷದ ಶಾಂಭವಿ ಎಂಬ ಮಗುವಿಗೆ ಶ್ರವಣ ಸಾಧನಕ್ಕಾಗಿ 50 ಸಾವಿರ ರೂ, ಬೆಂಗಳೂರಿನ ನೂರ್ ಫಾತಿಮಾ ಬಿನ್ ಇಬ್ರಾಹಿಂ ಇವರಿಗೆ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಕರ್ಝಾಕಿಸ್ಥಾನದಲ್ಲಿ ಎಂಬಿಬಿಎಸ್ ವಿದ್ಯಾಭ್ಯಾಸಕ್ಕಾಗಿ 10 ಲಕ್ಷ ರೂ.ಗಳ ಮಂಜೂರಾತಿ ಪತ್ರವನ್ನು ಮುಖ್ಯಮಂತ್ರಿಗಳು ವಿದ್ಯಾರ್ಥಿನಿಯ ತಂದೆಗೆ ಹಸ್ತಾಂತರ ಮಾಡಿದರು. ಅನಾರೋಗ್ಯಕ್ಕೆ ಒಳಗಾದವರ ಬಗ್ಗೆ ಮುಖ್ಯಮಂತ್ರಿಯವರು ಉದಾರ ನೆರವು ನೀಡುವ ಮೂಲಕ ಹೃದಯ ವೈಶಾಲತೆ ಮೆರೆದರು

ಅಲ್ಲದೆ ಈ ಯೋಜನೆಗಳನ್ನು ಆಮೇಲೆ ನಿಲ್ಲಿಸುತ್ತಾರೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಇದಕ್ಕೆ ಕಿವಿಗೊಡಬಾರದು. ಗ್ಯಾರಂಟಿ ಯೋಜನೆಗಳು ಬಡವರಿಗೆ ಸಂಬಂಧಿಸಿದ್ದು, ಅಸಮಾನತೆ ನಿವಾರಿಸುವ ಕಾರ್ಯಕ್ರಮಗಳಿವು. ನಾವು ಸಂವಿಧಾನದಲ್ಲಿ, ಬಸವಾದಿ ಶರಣರಲ್ಲಿ ನಂಬಿಕೆ ಇಟ್ಟಿರುವವರು. ಸಮಾಜದಲ್ಲಿ ಭ್ರಾತೃತ್ವ ಬೆಳೆಯಬೇಕು. ಸಮಾನತೆ ಮೂಡಬೇಕು. ಆಗ ಮಾತ್ರ ಶಾಂತಿ, ನೆಮ್ಮದಿ ಕಾಪಾಡಲು ಸಾಧ್ಯ ಎಂದು ಮುಖ್ಯಮಂತ್ರಿಗಳು ಪ್ರತಿಪಾದಿಸಿದರು.

ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನರಿಂದ ಸ್ವೀಕರಿಸಿರುವ ಅರ್ಜಿ/ಅಹವಾಲುಗಳನ್ನು ಒಂದು ತಿಂಗಳೊಳಗೆ ಬಗೆಹರಿಸಲಾಗುವುದು. ಆಯಾ ಜಿಲ್ಲೆಗೆ ಸಂಬಂಧಪಟ್ಟ ಅರ್ಜಿಗಳನ್ನು ಆಯಾ ಜಿಲ್ಲಾಧಿಕಾರಿಗಳು ಸಮಯದ ಮಿತಿಯೊಳಗೆ ಬಗೆ ಹರಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಅವರ ವ್ಯಾಪ್ತಿಯ ಅರ್ಜಿಗಳನ್ನು ಆದಷ್ಟು ಬೇಗ ಪರಿಹರಿಸುವಂತೆ ಸೂಚಿಸಲಾಗಿದೆ. ಅಧಿಕಾರಿಗಳು ಕೆಳ ಹಂತದಲ್ಲೇ ಸಮಸ್ಯೆ ಬಗೆಹರಿಸಿದರೆ ಬೆಂಗಳೂರಿಗೆ ಜನ ಬಂದು ಜನ ಅರ್ಜಿ ಕೊಡುವ ಸಂದರ್ಭ ಉದ್ಭವಿಸುವುದಿಲ್ಲ. ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜವಾಬ್ದಾರಿ ಹೆಚ್ಚಿದೆ. ಆಡಳಿತ ಜಡತ್ವದಿಂದ ಕೂಡಿರಬಾರದು. ಸ್ಥಳೀಯ ಹಂತದಲ್ಲೇ ಸಮಸ್ಯೆ ಬಗೆಹರಿಸಬೇಕು. ಜನರನ್ನು ಸರಿಯಾಗಿ ನಡೆಸಿಕೊಳ್ಳದಿದ್ದರೆ ಅಂಥವರ ಮೇಲೆ ಕ್ರಮ ಕೈಗೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಎರಡನೇ 'ಜನಸ್ಪಂದನ' ಕಾರ್ಯಕ್ರಮಕ್ಕೆ ಸಾರ್ವಜನಿಕರಿಂದ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದ್ದು, ಸುಮಾರು 20 ಸಾವಿರ ಮಂದಿ ಈ ಜನಸ್ಪಂದನ ಕಾರ್ಯಕ್ರಮದಲ್ಲಿ ಭಾಗಿ ಆಗಿದ್ದು, 12,372 ಮಂದಿ ಅಹವಾಲು ಸಲ್ಲಿಸಿದ್ದಾರೆ. ಈ ಪೈಕಿ ಸ್ಥಳದಲ್ಲೇ ಮುಖ್ಯಮಂತ್ರಿಗಳು 246 ಅರ್ಜಿಗಳನ್ನು ಇತ್ಯರ್ಥಗೊಳಿಸಿದರು. ವಿಲೇವಾರಿಗೆ ಬಾಕಿ ಇರುವ 12,126 ಅರ್ಜಿಗಳನ್ನು ಒಂದು ತಿಂಗಳ ಒಳಗಾಗಿ ಇತ್ಯರ್ಥಪಡಿಸುವಂತೆ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ರವಾನಿಸಿದ್ದಾರೆ.



Downloaded From:www.kpscvaani.com





ಚಂದ್ರಮುಖಿ

# ಗ್ಯಾರಂಟಿಗಳಿಂದ ಜನರ ಬದುಕು ಗಟ್ಟಿ

"ಸರ್ಕಾರ ಜಾರಿಗೆ ತಂದಿರುವ ಐದು ಗ್ಯಾರಂಟಿಗಳು ರಾಜ್ಯದ ಜನರ ಬದುಕನ್ನು ಸುಧಾರಣೆ ಮಾಡುವಲ್ಲಿ ಯಶಸ್ವಿಯಾಗಿವೆ."

ಹೀಗೆಂದು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ರಾಜ್ಯದ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರಕ್ಕೆ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ. ಜೊತೆಗೆ ಈ ಯೋಜನೆಗಳು ಮಹಿಳಾ ಸಬಲೀಕರಣ ಗೊಳಿಸುವಲ್ಲಿಯೂ ಸಫಲವಾಗಿವೆ ಎಂದು ಅವರು ಪ್ರತಿಪಾದಿಸಿರುವುದು ವಿಶೇಷವಾಗಿದೆ.

ಅಧಿಕಾರಕ್ಕೆ ಬರುವುದಕ್ಕೂ ಮುನ್ನ ರಾಜ್ಯದ ಜನರಿಗೆ ನೀಡಿದ್ದ ಐದೂ ಗ್ಯಾರಂಟಿಗಳನ್ನು ಸರ್ಕಾರ ಕಳೆದ ಎಂಟು ತಿಂಗಳ ಆಡಳಿತ ಅವಧಿಯಲ್ಲಿ ಅಕ್ಷರಶಃ ಜಾರಿಗೆ ತಂದಿದೆ. ಇದರಿಂದಾಗಿ ಜನಸಾಮಾನ್ಯರ ಜೀವನ ಮಟ್ಟದಲ್ಲಿ ಸಾಕಷ್ಟು ಸುಧಾರಣೆ ಕಂಡಿದೆ ಎಂದು ರಾಜ್ಯಪಾಲರು ವಿಶ್ಲೇಷಿಸಿದ್ದಾರೆ.

ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಸರ್ಕಾರದ ಬೆನ್ನು ತಟ್ಟುವ ಕೆಲಸ ಮಾಡಿದ್ದು ಬೆಂಗಳೂರಿನ ಫೀಲ್ಡ್ ಮಾರ್ಷಲ್ ಮಾಣಿಕ್ ಷಾ ಮೈದಾನದಲ್ಲಿ ಏರ್ಪಡಿಸಿದ್ದ 75ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ. ಧ್ವಜಾರೋಹಣ ಮಾಡಿ ಮಾತನಾಡಿದ ಅವರು, ಬರಪರಿಹಾರ, ಮೇಕೆದಾಟು ಯೋಜನೆ, ಬೆಂಗಳೂರಿನ ಸುಗಮ ಸಂಚಾರಕ್ಕೆ ಹಾಕಿಕೊಂಡಿರುವ ಕಾರ್ಯಕ್ರಮಗಳು ಸೇರಿದಂತೆ ರಾಜ್ಯ ಸರ್ಕಾರ ಮಾಡಿದ ಸಾಧನೆಗಳ ಪಟ್ಟಿಯನ್ನು ಒಂದೊಂದಾಗಿ ಪ್ರಸ್ತಾಪ ಮಾಡುತ್ತ ಮೆಚ್ಚುಗೆಯ ಮಾತನಾಡಿದರು.

ಎಲ್ಲಕ್ಕಿಂತ ಮುಖ್ಯವಾಗಿ ರಾಜ್ಯಪಾಲರು ಸರ್ಕಾರದ ಐದು ಗ್ಯಾರಂಟಿ ಯೋಜನೆಗಳನ್ನು ಅತ್ಯಂತ ಕಟ್ಟುನಿಟ್ಟು ಹಾಗೂ ಕರಾರುವಕ್ಕಾಗಿ ಜಾರಿಗೆ ತಂದಿರುವ ಕ್ರಮವನ್ನು ಶ್ಲಾಘಿಸಿದರು. ಶಕ್ತಿ ಯೋಜನೆ, ಅನ್ನ ಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮಿ ಮತ್ತು ಯುವನಿಧಿ ಯೋಜನೆಗಳು ರಾಜ್ಯದ ಎಲ್ಲ ಸ್ಥರದ ಜನರ ಜೀವನವನ್ನು ಮೇಲ್ಮಟ್ಟಕ್ಕೆ ಕೊಂಡೊಯ್ಯುವಲ್ಲಿ ಸಹಕಾರಿಯಾಗಿವೆ ಎಂದು ಅವರು ಹೇಳಿದರು.


Downloaded From:www.kpscvaani.com



**ಬ್ರಾಂಡ್ ಬೆಂಗಳೂರಿಗೆ ಆದ್ಯತೆ**

ಬೆಂಗಳೂರು ನಗರದ ರಸ್ತೆಗಳನ್ನು ಮೇಲ್ದರ್ಜೆಗೆರಿಸಿ, ಸರ್ವತೋಮುಖ ಅಭಿವೃದ್ಧಿ ಮಾಡುವ ಮತ್ತು ನಗರವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವ 'ಬ್ರಾಂಡ್ ಬೆಂಗಳೂರು' ಯೋಜನೆಗೆ ಈಗಾಗಲೇ ಚಾಲನೆ ದೊರೆತಿದೆ. ಇದಕ್ಕಾಗಿ ತಜ್ಞರು ಮತ್ತು ಸಾರ್ವಜನಿಕರಿಂದ ಸಲಹೆ, ಮಾರ್ಗದರ್ಶನಗಳನ್ನು ಪಡೆಯಲಾಗಿದೆ. ನಾಗರಿಕ ಹಿತರಕ್ಷಣಾ ವೇದಿಕೆಗಳು, ಸಾರ್ವಜನಿಕ ಸಂಘಗಳು, ಕೈಗಾರಿಕಾ ವಲಯದ ತಜ್ಞರ ಜೊತೆ ಸಮಾಲೋಚನೆ ನಡೆಸಿ ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಲಾಗುತ್ತಿದೆ.

ರಾಜಧಾನಿ ಬೆಂಗಳೂರಿಗೆ ಬೇಕಾದುದು ಸುಗಮ ಸಂಚಾರ. ಅದರಿಂದ ನಗರದ ಅಭಿವೃದ್ಧಿಗೆ ಹೆಚ್ಚಿನ ವೇಗ ಬರುತ್ತದೆ. ಆ ನಿಟ್ಟಿನಲ್ಲಿ ಇಲ್ಲಿನ ಹಲವು ಮುಖ್ಯ ರಸ್ತೆಗಳ ಸುಸ್ಥಿರ ಅಭಿವೃದ್ಧಿ ಮಾಡಬೇಕಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು 2000 ಕೋಟಿ ರೂ.ಗಳ ಯೋಜನೆ ರೂಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ವೈಟ್‌ಟಾಪಿಂಗ್ ಮಾಡುವ ಕಾಮಗಾರಿಗೆ ಚಾಲನೆ ದೊರೆತಿರುವುದು ಅಭಿವೃದ್ಧಿಯ ಬಗ್ಗೆ ಸರ್ಕಾರಕ್ಕಿರುವ ಕಳಕಳಿಗೆ ಸಾಕ್ಷಿಯಾಗಿದೆ ಎಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರತಿಪಾದಿಸಿದರು.

ಬೆಂಗಳೂರಿನ ಆಯ್ದ ಕಡೆಗಳಲ್ಲಿ ಸುರಂಗ ರಸ್ತೆಗಳನ್ನು ನಿರ್ಮಿಸುವ ಸರ್ಕಾರದ ಯೋಜನೆ ಅನುಷ್ಠಾನಗೊಂಡರೆ ಟ್ರಾಫಿಕ್ ದಟ್ಟಣೆಯ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಶಾಶ್ವತವಾದ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಅಂತಾರಾಷ್ಟ್ರೀಯ ಏಜೆನ್ಸಿಯ ನೆರವಿನಿಂದ ಡಿಪಿಆರ್ ಸಿದ್ಧಪಡಿಸುವ ಕಾರ್ಯ ಪ್ರಗತಿಯಲ್ಲಿರುವುದನ್ನು ರಾಜ್ಯಪಾಲರು ಪ್ರಸ್ತಾಪಿಸಿದರು.

"ದೇಶದ ನಾಗರಿಕರಿಗೆ ಸ್ವಾತಂತ್ರ್ಯ, ನ್ಯಾಯ ಮತ್ತು ಸಮಾನತೆಯನ್ನು ಕೊಟ್ಟಿರುವುದು ಸಂವಿಧಾನ. ಇದರಿಂದ ದೇಶದ ಸಮಗ್ರತೆ, ಏಕತೆಯನ್ನು ಕಾಪಾಡುವುದರ ಜೊತೆಗೆ ಸ್ವಾಭಿಮಾನದ ಜೀವನವನ್ನು ಕಲ್ಪಿಸುವ ಧ್ಯೇಯವನ್ನು ಹೊಂದಿದೆ. ಆ ಮೂಲಕ ನಾಗರಿಕರು ತಮ್ಮ ಏಳಿಗೆಯೊಂದಿಗೆ ರಾಷ್ಟ್ರದ ಪ್ರಗತಿಗೆ ಕೊಡುಗೆ ನೀಡಲು ಸಾಧ್ಯವಾಗುತ್ತದೆ. ಸಂವಿಧಾನದ ಆಶಯಗಳನ್ನು ಸಾಕಾರಗೊಳಿಸುವುದೇ ಸರ್ಕಾರದ ಗುರಿ."

**–ಥಾವರ್ ಚಂದ್ ಗೆಹ್ಲೋಟ್,**
**ರಾಜ್ಯಪಾಲರು**

ರಾಜ್ಯಾದ್ಯಂತ ಸರ್ಕಾರಿ ಬಸ್ಸುಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣವನ್ನು ಕಲ್ಪಿಸುವ ಶಕ್ತಿ ಯೋಜನೆಯನ್ನು ಪ್ರಸ್ತಾಪಿಸಿದ ಅವರು, ಇದರ ಅನುಷ್ಠಾನದಿಂದ ಮಹಿಳಾ ಸಬಲೀಕರಣದತ್ತ ದಿಟ್ಟ ಹೆಜ್ಜೆಯಿಟ್ಟಂತಾಗಿದೆ ಎಂದು ವಿಶ್ಲೇಷಿಸಿದರು. ಯೋಜನೆ ಜಾರಿಯಾದಾಗಿನಿಂದ ಮೂರೂವರೆ ಕೋಟಿಗೂ ಹೆಚ್ಚು ಮಂದಿ ಮಹಿಳೆಯರು ಇದರ ಲಾಭ ಪಡೆಯುತ್ತಿದ್ದಾರೆ. ಇದರಲ್ಲಿ ವಿದ್ಯಾರ್ಥಿನಿಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಕೂಡ ಇದ್ದಾರೆ ಎಂದು ಅವರು ವಿವರಿಸಿದರು.

ರಾಜ್ಯ ಸರ್ಕಾರದ ಇನ್ನೊಂದು ಮಹತ್ವಾಕಾಂಕ್ಷಿ ಯೋಜನೆಯಾದ 'ಗೃಹಲಕ್ಷ್ಮಿ' ಕಾರ್ಯಕ್ರಮದ ಅಡಿಯಲ್ಲಿ ಡಿಬಿಟಿ ಮೂಲಕ ಈವರೆಗೆ 8181 ಕೋಟಿರೂ. ವರ್ಗಾವಣೆ ಮಾಡಿರುವುದು ಹೆಗ್ಗಳಿಕೆಯ ವಿಚಾರ. ರಾಜ್ಯದ ಪ್ರತಿಕುಟುಂಬದ ಅರ್ಹ ಯಜಮಾನಿಗೆ ಪ್ರತಿ ತಿಂಗಳು 2000 ರೂ. ವರ್ಗಾವಣೆ


Downloaded From:www.kpscvaani.com





ಮಾಡುವ ಉದ್ದೇಶದಿಂದ 17500 ಕೋಟಿ ಅನುದಾನವನ್ನು ನಿಗದಿಪಡಿಸಿದ್ದು, 1.17 ಕೋಟಿ ಮಹಿಳೆಯರು ಇದರಲ್ಲಿ ನೋಂದಣಿ ಮಾಡಿಸಿಕೊಂಡಿದ್ದಾರೆ. ಇದರಿಂದ ಸಾಕಷ್ಟು ಬಡ ಹಾಗೂ ಮಧ್ಯಮವರ್ಗದ ಮಹಿಳೆಯರಿಗೆ ಅನುಕೂಲವಾಗಿದೆ. ಅವರು ಸ್ವಾಭಿಮಾನದಿಂದ ಬದುಕಲು ಸಾಧ್ಯವಾಗಿದೆ ಎಂದು ರಾಜ್ಯಪಾಲರು ಬಣ್ಣಿಸಿದರು.

'ಗೃಹಜ್ಯೋತಿ' ಯೋಜನೆಯನ್ನು ಪ್ರಸ್ತಾಪಿಸಿದ ಥಾವರ್ ಚಂದ್ ಗೆಹ್ಲೋಟ್ ಅವರು, ಇದನ್ನು ಜಾರಿಗೆ ತರುವ ನಿಟ್ಟಿನಲ್ಲಿ ರಾಜ್ಯದ ಎಲ್ಲ ಎಸ್ಕಾಂಗಳಿಗೆ ಪ್ರತಿ ತಿಂಗಳು ಸರ್ಕಾರವು ಮುಂಗಡವಾಗಿ 700 ಕೋಟಿ ಬಿಡುಗಡೆ ಮಾಡುತ್ತ ಬಂದಿದೆ. ಇದರಿಂದಾಗಿ ಯೋಜನೆ ಯಾವುದೇ ತೊಂದರೆಯಾಗದಂತೆ ಜಾರಿಗೆ ಬರುವುದು ಸುಲಭವಾಗಿದೆ ಎಂದು ಹೇಳಿದರು. 2023ರ ಜುಲೈ ತಿಂಗಳಿನಿಂದಲೇ ಜಾರಿಗೆ ಬಂದಿರುವ ಈ ಯೋಜನೆಯ ಫಲವಾಗಿ ರಾಜ್ಯದ ಪ್ರತಿ ಮನೆಗೆ ಪ್ರತಿ ತಿಂಗಳಿಗೆ ಗರಿಷ್ಠ 200 ಯೂನಿಟ್ ಬಳಕೆ ಮಿತಿಗೆ ಒಳಪಟ್ಟು ಉಚಿತ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ.

ರಾಜ್ಯ ಸರ್ಕಾರದ ಇನ್ನೊಂದು ಕನಸಿನ ಯೋಜನೆಯಾದ ಅನ್ನಭಾಗ್ಯವನ್ನು ಜನರಿಗೆ ಹೇಗೆ ತಲುಪಿಸಲಾಗುತ್ತಿದೆ ಎಂಬುದನ್ನು ರಾಜ್ಯಪಾಲರು ಇದೇ ಸಂದರ್ಭದಲ್ಲಿ ಮನದಟ್ಟು ಮಾಡಿದರು. ಅಂತ್ಯೋದಯ ಅನ್ನಯೋಜನೆ ಹಾಗೂ ಆದ್ಯತಾ ಪಡಿತರ ಚೀಟಿಗಳ ಫಲಾನುಭವಿಗಳಿಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ ಪ್ರಕಾರ ವಿತರಣೆ ಮಾಡಲಾಗುವ ಐದು ಕೆ.ಜಿ ಆಹಾರಧಾನ್ಯವನ್ನು ಸೇರಿಸಿ ಪ್ರತಿ ಫಲಾನುಭವಿಗೆ ಹತ್ತು ಕೆ.ಜಿ ಆಹಾರಧಾನ್ಯ ವಿತರಿಸುವುದು ಸರ್ಕಾರದ ಗುರಿಯಾಗಿದೆ. ಆದರೆ ಈ ಯೋಜನೆಗೆ ಅಗತ್ಯವಾದ ಆಹಾರಧಾನ್ಯ ಸಕಾಲದಲ್ಲಿ ಲಭ್ಯವಾಗದ ಹಿನ್ನೆಲೆಯಲ್ಲಿ, ಅಲ್ಲಿಯತನಕ ರಾಜ್ಯದ ಪ್ರತಿಯೊಬ್ಬ ಅರ್ಹ ಫಲಾನುಭವಿಗೆ ಪ್ರತಿ ತಿಂಗಳು ಹೆಚ್ಚುವರಿಯಾಗಿ ಐದು ಕೆ.ಜಿ ಆಹಾರಧಾನ್ಯದ ಬದಲಾಗಿ ಪ್ರತಿ ಕೆ.ಜಿಗೆ 34 ರೂ.ಗಳಂತೆ ಕುಟುಂಬ ಸದಸ್ಯರ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲಾಗುತ್ತಿದೆ. ಯೋಜನೆ ಜಾರಿಗೆ ಬಂದಾಗಿನಿಂದ ನವೆಂಬರ್‌ವರೆಗಿನ ಐದು ತಿಂಗಳ ಅವಧಿಯಲ್ಲಿ ಸರ್ಕಾರ 2900 ಕೋಟಿ ಹಣವನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದೆ ಎಂದು ಅವರು ವಿವರಿಸಿದರು.

ಸ್ವಾಮಿ ವಿವೇಕಾನಂದರ ಜಯಂತಿಯಾದ ಜನವರಿ 12ರ ರಾಷ್ಟ್ರೀಯ ಯುವದಿನದ ಸಂದರ್ಭದಲ್ಲಿಯೇ ಮತ್ತೊಂದು ಯೋಜನೆ 'ಯುವನಿಧಿ' ಕೂಡ ಜಾರಿಗೆ ಬಂದುದನ್ನು ರಾಜ್ಯಪಾಲರು ಪ್ರಸ್ತಾಪಿಸಿದರು. 2022-23ರ ಸಾಲಿನಲ್ಲಿ ಪದವಿ ಮತ್ತು ಡಿಪ್ಲೊಮಾ ಗಳಿಸಿ 180 ದಿನಗಳ ತನಕವೂ ಉದ್ಯೋಗ ದೊರಕದೇ ಇರುವ ಯುವಕ-ಯುವತಿಯರಿಗೆ 3000 ಮತ್ತು 1500 ರೂ. ನಿರುದ್ಯೋಗ ಭತ್ಯೆಯನ್ನು ನೀಡುವುದು ಈ ಯೋಜನೆ ಉದ್ದೇಶ.

ಇಷ್ಟೂ ಯೋಜನೆಗಳನ್ನು ಜಾರಿಗೆ ತಂದಿರುವುದರಿಂದ ರಾಜ್ಯ ಸರ್ಕಾರವು ಕೊಟ್ಟ ಮಾತನ್ನು ಉಳಿಸಿಕೊಂಡಿದೆ. ಈ ಕಾರಣದಿಂದಾಗಿ ಜನರ ಬದುಕಿನಲ್ಲೂ ಸುಧಾರಣೆ ಕಂಡಿರುವುದು ಶ್ಲಾಘನೀಯ ಎಂದು ರಾಜ್ಯಪಾಲರು ಹೇಳಿದರು.

ಮಳೆ ಅಭಾವದ ಹಿನ್ನೆಲೆಯಲ್ಲಿ ರಾಜ್ಯದ 196 ತಾಲೂಕುಗಳನ್ನು ತೀವ್ರ ಬರಪೀಡಿತ ಪ್ರದೇಶ ಎಂದು ಘೋಷಿಸಲಾಗಿದೆ. ಈ ತಾಲೂಕುಗಳಲ್ಲಿ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (NDRF)ಯಿಂದ ಅನುದಾನ ನೀಡುವಂತೆ ಮನವಿ ಮಾಡಿಕೊಂಡಿದೆ. ಆದಾಗ್ಯೂ ತಕ್ಷಣದ ಪರಿಹಾರ ನೀಡುವಲ್ಲಿ ಸರ್ಕಾರ ಹಿಂದೆ ಬಿದ್ದಿಲ್ಲ ಎಂಬುದನ್ನು ಒತ್ತಿ ಹೇಳಿದ ರಾಜ್ಯಪಾಲರು, 30 ಲಕ್ಷ ಮಂದಿ ರೈತರಿಗೆ 580 ಕೋಟಿರೂ. ಬಿಡುಗಡೆ ಮಾಡುವ ಪ್ರಕ್ರಿಯೆಯಲ್ಲಿ ಸರ್ಕಾರ ತೊಡಗಿದೆ ಎಂದು ತಿಳಿಸಿದರು.

ಮೇಕೆದಾಟು ಸಮತೋಲನ ಜಲಾಶಯ ಮತ್ತು ಕುಡಿಯುವ ನೀರಿನ ಯೋಜನೆ, ಎತ್ತಿನಹೊಳೆ ಯೋಜನೆಯ ಮೊದಲ ಹಂತದ ಕಾಮಗಾರಿಗಳು, ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದ ಕಾಮಗಾರಿ ಸೇರಿದಂತೆ ರಾಜ್ಯದ ನೀರಾವರಿ ಯೋಜನೆಗಳಿಗೆ 2023ರ ಅಂತ್ಯದವರೆಗೆ 9223 ಕೋಟಿರೂ. ವೆಚ್ಚ ಮಾಡಲಾಗಿದೆ. ಇದು ಸರ್ಕಾರಕ್ಕೆ ನೀರಾವರಿ ಯೋಜನೆಗಳನ್ನು ಜಾರಿಗೆ ತರಲು ಇರುವ ಕಳಕಳಿಯನ್ನು ತೋರಿಸುತ್ತದೆ ಎಂದು ರಾಜ್ಯಪಾಲರು ಅಭಿಪ್ರಾಯಪಟ್ಟರು.

ಹೀಗೆ ರಾಜ್ಯ ಸರ್ಕಾರದ ಐವತ್ತಕ್ಕೂ ಹೆಚ್ಚು ಯೋಜನೆಗಳ ಬಗ್ಗೆ ಪ್ರಸ್ತಾಪ ಮಾಡಿದ ರಾಜ್ಯಪಾಲ ಗೆಹ್ಲೋಟ್ ಅವರು, ಇವೆಲ್ಲವೂ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಸರ್ಕಾರ ಇಟ್ಟ ಹೆಜ್ಜೆಗಳಾಗಿವೆ ಎಂದರು. ಅಭಿವೃದ್ಧಿಯ ಜೊತೆ ಜೊತೆಗೆ ಶಾಂತಿ-ಸಾಮರಸ್ಯ ಕಾಪಾಡುವುದು ಕೂಡ ನಮ್ಮ ಧ್ಯೇಯವಾಗಬೇಕು.ರಾಷ್ಟ್ರೀಯ ಏಕತೆಯೂ ನಮ್ಮ ಕನಸಾಗಬೇಕು. ಅದಕ್ಕೆ ಜನರ ಒಳಗೊಳ್ಳುವಿಕೆಯೂ ಮುಖ್ಯ. ಅದರಿಂದ ಸರ್ಕಾರಕ್ಕೆ ಇನ್ನಷ್ಟು ಶಕ್ತಿ ಬರುತ್ತದೆ ಎಂದು ರಾಜ್ಯಪಾಲರು ಪ್ರತಿಪಾದಿಸಿದರು.


Downloaded From:www.kpscvaani.com



# ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರಿದೆಯೇ?

● ಜಡಿಯಪ್ಪ ಗೆದ್ಲಗಟ್ಟಿ

ಭಾರತದ ಚುನಾವಣಾ ಆಯೋಗದ ಪರಿಷ್ಕರಣೆ ಚಟುವಟಿಕೆಗಳ ವೇಳಾಪಟ್ಟಿಯನ್ವಯ ಅರ್ಹತಾ ದಿನಾಂಕ: 01.01.2024 ರಂತೆ ಮತದಾರರ ಪಟ್ಟಿಗಳ ವಿಶೇಷ ಸಂಕ್ಷಿಪ್ತ ಪರಿಷ್ಕರಣೆಯ ಅಡಿಯಲ್ಲಿ ಆಯೋಗದ ನಿರ್ದೇಶನದಂತೆ ಹಕ್ಕುಗಳು ಮತ್ತು ಆಕ್ಷೇಪಣೆಗಳನ್ನು ವಿಲೇಗೊಳಿಸಿದ ನಂತರ, 24ನೇ ಜನವರಿಯಂದು ರಾಜ್ಯದ 224 ಕ್ಷೇತ್ರಗಳ ಅಂತಿಮ ಮತದಾರರ ಪಟ್ಟಿಯನ್ನು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಮತದಾರರ ನೋಂದಣಾಧಿಕಾರಿಗಳು ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ಹಾಗೂ ಎಲ್ಲಾ ಮತಗಟ್ಟೆಗಳಲ್ಲಿ ಪ್ರಕಟಿಸಲಾಗಿದೆ. ಅದರ ಪ್ರಕಾರ ರಾಜ್ಯದಲ್ಲೀಗ 5,37,85,815 ಮತದಾರರಿದ್ದಾರೆ.

ವಿಧಾನಸಭಾ ಕ್ಷೇತ್ರವಾರು ಮತದಾರರ ಪಟ್ಟಿಗಳು ಕರ್ನಾಟಕ ಮುಖ್ಯ ಚುನಾವಣಾಧಿಕಾರಿಗಳ (https://ceo.karnataka.gov.in/en) ಅಧಿಕೃತ ಜಾಲತಾಣದಲ್ಲಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ಜಾಲತಾಣಗಳಲ್ಲಿ ಪಿಡಿಎಫ್ ರೂಪದಲ್ಲಿ ಲಭ್ಯವಿದೆ. ಸಾರ್ವಜನಿಕರು ತಮ್ಮ ಹೆಸರುಗಳನ್ನು ಸರಿಯಾದ ಮಾಹಿತಿಯೊಂದಿಗೆ ಮತದಾರರ ಪಟ್ಟಿಯಲ್ಲಿ ಸೇರಿಸಲಾಗಿದೆಯೇ ಎಂದು ಪರಿಶೀಲಿಸಲು ವಿನಂತಿಸಲಾಗಿದೆ.

ಮತದಾರರ ಪಟ್ಟಿಗಳ ನಿರಂತರ ಪರಿಷ್ಕರಣೆ ಅವಧಿಯು ಆರಂಭವಾಗಿದ್ದು, ಅರ್ಹತಾ ದಿನಾಂಕ 01.01.2024 ರಂತೆ ಅರ್ಹತೆ ಹೊಂದಿರುವ ಹಾಗೂ ಇದುವರೆಗೆ ನೋಂದಣಿಯಾಗದ ಮತದಾರರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಸೇರಿಸಲು ಆನ್‌ಲೈನ್ ಮೂಲಕ ಮತದಾರರ ಸೇವಾ ಪೋರ್ಟಲ್ (https://voters.eci.gov.in/) ಅಥವಾ ಓಟರ್ ಹೆಲ್ಪ್‌ಲೈನ್ ಮೊಬೈಲ್ ಅಪ್ಲಿಕೇಶನ್ ಬಳಸಿ ತಮ್ಮ ಅರ್ಜಿಗಳನ್ನು ಸಲ್ಲಿಸಲು ತಿಳಿಸಿದೆ.

ಅರ್ಹತಾ ದಿನಾಂಕ: 01.04.2024, 01.07.2024 ಮತ್ತು 01.10.2024 ರಂತೆ ಅರ್ಹತೆ ಹೊಂದುವ ಹೊಸ ಮತದಾರರು ಮುಂಚಿತವಾಗಿ ತಮ್ಮ ಅರ್ಜಿಗಳನ್ನು ಸಲ್ಲಿಸಬಹುದು. ಮತದಾರರು ಮತದಾರರ ಪಟ್ಟಿಯಲ್ಲಿ ತಮ್ಮ ನಮೂದುಗಳ ಮಾರ್ಪಾಡು/ತಿದ್ದುಪಡಿಗಳಿಗಾಗಿ ಸಹ ಮೇಲೆ ತಿಳಿಸಿರುವ ಪೋರ್ಟಲ್ ಮತ್ತು ಅಪ್ಲಿಕೇಶನ್ ಮೂಲಕ ಅರ್ಜಿ ಸಲ್ಲಿಸಬಹುದು.


Downloaded From:www.kpscvaani.com

ಈ ಉದ್ದೇಶಕ್ಕಾಗಿ ಅವರು ಸಂಬಂಧಪಟ್ಟ ಮತಗಟ್ಟೆ ಮಟ್ಟದ ಅಧಿಕಾರಿ, ಮತದಾರರ ನೋಂದಣಾಧಿಕಾರಿ ಹಾಗೂ ಸಹಾಯಕ ಮತದಾರರ ನೋಂದಣಾಧಿಕಾರಿಯವರನ್ನು ಸಂಪರ್ಕಿಸಬಹುದು.

ಅಂತಿಮ ಮತದಾರರ ಪಟ್ಟಿ–2024 ರ ಪ್ರಕಾರ, ರಾಜ್ಯದಲ್ಲಿ ಒಟ್ಟು ಸಾಮಾನ್ಯ ಮತದಾರರ ಸಂಖ್ಯೆ 5,37,85,815 ಕ್ಕೆ ಹೆಚ್ಚಳವಾಗಿದ್ದು, ಇದರಲ್ಲಿ 2,69,33,750 ಪುರುಷ ಮತದಾರರು, 2,68,47,145 ಮಹಿಳಾ ಮತದಾರರು ಮತ್ತು 4,920 ಇತರೆ ಮತದಾರರು ಸೇರಿದ್ದಾರೆ.

ರಾಜ್ಯದ 224 ವಿಧಾನಸಭಾ ಕ್ಷೇತ್ರಗಳ ಪೈಕಿ ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರವು ಅತಿ ಹೆಚ್ಚು ಅಂದರೆ 7,17,201 ಮತದಾರರನ್ನು ಹೊಂದಿದೆ. ವ್ಯತಿರಿಕ್ತವಾಗಿ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಅತಿ ಕಡಿಮೆ ಅಂದರೆ 1,67,556 ಮತದಾರರಿದ್ದಾರೆ.

ಹಿಂದಿನ ಸಾರ್ವತ್ರಿಕ ಚುನಾವಣಾ ವರ್ಷಗಳ 2019, 2023 ಮತ್ತು 2024 ರ ಒಟ್ಟು ಸಾಮಾನ್ಯ ಮತದಾರರ ಪಟ್ಟಿಯ ಹೋಲಿಕೆಯನ್ನು ಕೆಳಗೆ ನೀಡಲಾಗಿದೆ: 2024 ರ ಲೋಕಸಭಾ ಸಾರ್ವತ್ರಿಕ ಚುನಾವಣೆಯ ಸಮಯದಲ್ಲಿ ಬಿಡುಗಡೆಯಾಗುವ ಮತದಾರರ ಪಟ್ಟಿಯಲ್ಲಿ ಅಲ್ಪ ಪ್ರಮಾಣದ ಏರಿಕೆಯನ್ನು ಕಾಣಬಹುದಾಗಿದೆ.

| ಕ್ಯಾಲೆಂಡರ್ ವರ್ಷ | ಲಿಂಗ | ಸಾಮಾನ್ಯ ಮತದಾರರು |
|---|---|---|
| **2019** | | |
| | ಗಂಡು | 2,57,98,590 |
| | ಹೆಣ್ಣು | 2,52,48,016 |
| | ಇತರೆ | 4,826 |
| | **ಒಟ್ಟು** | **5,10,51,432** |
| **2023** | | |
| | ಗಂಡು | 2,66,82,156 |
| | ಹೆಣ್ಣು | 2,63,98,483 |
| | ಇತರೆ | 4,927 |
| | **ಒಟ್ಟು** | **5,30,85,566** |
| 2024 | | |
| | ಗಂಡು | 2,69,33,750 |
| | ಹೆಣ್ಣು | 2,68,47,145 |
| | ಇತರೆ | 4,920 |
| | **ಒಟ್ಟು** | **5,37,85,815** |

ಅಂತಿಮ ಮತದಾರರ ಪಟ್ಟಿ 2024 ರಂತೆ ಲೋಕಸಭಾ ಕ್ಷೇತ್ರವಾರು ಮತದಾರರು ಭಾವಚಿತ್ರ ಅಳವಡಿಕೆ ಹಾಗೂ ಮತದಾರರ ಗುರುತಿನ ಚೀಟಿಗಳ ಹಂಚಿಕೆಯನ್ನು ಶೇಕಡಾ ನೂರಕ್ಕೆ ನೂರರಷ್ಟು ಸಾಧಿಸಲಾಗಿದೆ. ಮತದಾರರ ಗುರುತಿನ ಚೀಟಿಗಳನ್ನು ಮತದಾರರಿಗೆ ತ್ವರಿತ ಅಂಚೆ ಸೇವೆಯ ಮೂಲಕ ಆಯಾ ವಿಳಾಸಗಳಿಗೆ ರವಾನಿಸಲಾಗುತ್ತಿದೆ. ನವೆಂಬರ್ ಅಂತ್ಯದ ವೇಳೆಗೆ 17,47,518 ಮತದಾರರ ಗುರುತಿನ ಚೀಟಿಗಳನ್ನು ಯಶಸ್ವಿಯಾಗಿ ತ್ವರಿತ ಅಂಚೆ ಮೂಲಕ ನೇರವಾಗಿ ಮತದಾರರಿಗೆ ತಲುಪಿಸಲಾಗಿದೆ. ಹೆಚ್ಚುವರಿಯಾಗಿ, ಇನ್ನೂ 10,76,506 ಮತದಾರರ ಗುರುತಿನ ಚೀಟಿಗಳನ್ನು ಮುದ್ರಿಸಿದ್ದು, ಪ್ರಸ್ತುತ




ಮತದಾರರಿಗೆ ರವಾನಿಸುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಜನವರಿ 2024 ರ ಅಂತಿಮ ಮತದಾರರ ಪಟ್ಟಿಯ ಪ್ರಕಾರ ರಾಜ್ಯದಲ್ಲಿ ಒಟ್ಟು 46,501 ಸೇವಾ ಮತದಾರರಿದ್ದು, ಅದರಲ್ಲಿ ಪುರುಷ 44,900 ಹಾಗೂ ಮಹಿಳಾ 1,601 ಮತದಾರರಿದ್ದಾರೆ. 18–19 ವಯಸ್ಸಿನ ಯುವ ಮತದಾರರು ಒಟ್ಟು 10,34,018 ಇದ್ದು ಅದರಲ್ಲಿ ಪುರುಷ 5,57,161 ಹಾಗೂ ಮಹಿಳಾ 4,76,737 ಮತ್ತು ಇತರೆ 120 ಮತದಾರರಿದ್ದಾರೆ. ಸಾಗರೋತ್ತರ ಒಟ್ಟು 3,164 ಮತದಾರರಿದ್ದು ಪುರುಷ 2,270 ಹಾಗೂ ಮಹಿಳಾ 893 ಮತ್ತು ಇತರೆ ಒಬ್ಬ ಮತದಾರರಿದ್ದಾರೆ.

ಎಂಬತ್ತು ವರ್ಷ ಮೇಲ್ಪಟ್ಟ ವಯಸ್ಸಿನ ಮತದಾರರ ಸಂಖ್ಯೆ 12,71,862 ಆಗಿದ್ದು ಪುರುಷ 5,68,435 ಹಾಗೂ ಮಹಿಳಾ 7,03,408 ಮತ್ತು ಇತರೆ 19 ಮತದಾರರಿದ್ದಾರೆ. ನೂರು ವರ್ಷ ಮೇಲ್ಪಟ್ಟ ವಯಸ್ಸಿನ ಶತಾಯುಷಿ ಮತದಾರರ ಸಂಖ್ಯೆ 17,937 ಆಗಿದ್ದು, ಪುರುಷ 7,075 ಹಾಗೂ ಮಹಿಳಾ 10,862 ಮತದಾರರಿದ್ದಾರೆ. ವಿಕಲಚೇತನ ಮತದಾರರ ಸಂಖ್ಯೆ 5,62,890 ಆಗಿದ್ದು, ಪುರುಷ 3,30,197 ಹಾಗೂ ಮಹಿಳಾ 2,32,647 ಮತ್ತು ಇತರೆ 46 ಮತದಾರರಿದ್ದಾರೆ.

ಅಂತಿಮ ಮತದಾರರ ಪಟ್ಟಿ –2024 ರ ಪ್ರಕಾರ ರಾಜ್ಯದಲ್ಲಿ ಒಟ್ಟು ಮತಗಟ್ಟೆಗಳ ಸಂಖ್ಯೆ 58,834 ಆಗಿದೆ. ಮತಗಟ್ಟೆಗಳ ತರ್ಕಬದ್ಧಗೊಳಿಸುವಿಕೆ ಸಮಯದಲ್ಲಿ 845 ಮತಗಟ್ಟೆಗಳನ್ನು ಸೇರ್ಪಡೆಗೊಳಿಸಿದ್ದು, 293 ಮತಗಟ್ಟೆಗಳನ್ನು ವಿಲೀನಗೊಳಿಸಲಾಗಿದೆ. ಅದರಂತೆ 552 ಮತಗಟ್ಟೆಗಳ ನಿವ್ವಳ ಹೆಚ್ಚಳವಾಗಿದೆ. ಅಂತಿಮ ಮತದಾರರ ಪಟ್ಟಿಯ ಪ್ರಕಾರ ಪ್ರತಿ ಮತಗಟ್ಟೆಗೆ ಸರಾಸರಿ 914 ಮತದಾರರಿದ್ದಾರೆ.

ಭಾರತ ಚುನಾವಣಾ ಆಯೋಗದ ನಿರ್ದೇಶನಗಳಿಗೆ ಅನುಗುಣವಾಗಿ, ನೋಂದಾಯಿತ ಮತ್ತು ಮಾನ್ಯತೆ ಪಡೆದ


Downloaded From:www.kpscvaani.com

**2024 ರ ಅಂತಿಮ ಪಟ್ಟಿಯಲ್ಲಿರುವ ಮತದಾರರ ವಿವರಗಳನ್ನು ಲೋಕಸಭಾ ಕ್ಷೇತ್ರವಾರು ಈ ಕೆಳಗಿನಂತೆ ಪ್ರಕಟಿಸಲಾಗಿದೆ.**

| ಕ್ರ.ಸಂ | ಲೋಕಸಭಾ ಕ್ಷೇತ್ರ | ಪುರುಷ | ಮಹಿಳಾ | ಇತರೆ | ಒಟ್ಟು |
|---|---|---|---|---|---|
| 1 | ಬಾಗಲಕೋಟೆ | 883993 | 897306 | 96 | 1781395 |
| 2 | ಬೆಂಗಳೂರು ಕೇಂದ್ರ | 1141044 | 1217779 | 455 | 2359278 |
| 3 | ಬೆಂಗಳೂರು ಉತ್ತರ | 1608571 | 1521038 | 593 | 3130202 |
| 4 | ಬೆಂಗಳೂರು ಗ್ರಾಮಾಂತರ | 1388729 | 1337506 | 321 | 2726556 |
| 5 | ಬೆಂಗಳೂರು ದಕ್ಷಿಣ | 1181582 | 1106586 | 392 | 2288560 |
| 6 | ಬೆಳಗಾವಿ | 942854 | 948472 | 83 | 1891409 |
| 7 | ಬಳ್ಳಾರಿ | 914652 | 937215 | 266 | 1852133 |
| 8 | ಬೀದರ್ | 954449 | 902478 | 98 | 1857025 |
| 9 | ಬಿಜಾಪುರ | 976073 | 942757 | 218 | 1919048 |
| 10 | ಚಾಮರಾಜನಗರ | 869389 | 888113 | 114 | 1757616 |
| 11 | ಚಿಕ್ಕಬಳ್ಳಾಪುರ | 969546 | 980657 | 264 | 1950467 |
| 12 | ಚಿಕ್ಕೋಡಿ | 871484 | 858883 | 75 | 1730442 |
| 13 | ಚಿತ್ರದುರ್ಗ | 919064 | 922769 | 104 | 1841937 |
| 14 | ದಕ್ಷಿಣ ಕನ್ನಡ | 873277 | 915058 | 70 | 1788405 |
| 15 | ದಾವಣಗೆರೆ | 838705 | 840340 | 136 | 1679181 |
| 16 | ಧಾರವಾಡ | 898845 | 891494 | 98 | 1790437 |
| 17 | ಕಲಬುರಗಿ | 1034005 | 1030740 | 273 | 2065018 |
| 18 | ಹಾಸನ | 854184 | 859589 | 39 | 1713812 |
| 19 | ಹಾವೇರಿ | 892447 | 878187 | 88 | 1770722 |
| 20 | ಕೋಲಾರ | 845636 | 862716 | 213 | 1708565 |
| 21 | ಕೊಪ್ಪಳ | 908756 | 932680 | 124 | 1841560 |
| 22 | ಮಂಡ್ಯ | 867593 | 891416 | 166 | 1759175 |
| 23 | ಮೈಸೂರು | 1009385 | 1044975 | 178 | 2054538 |
| 24 | ರಾಯಚೂರು | 979289 | 997371 | 299 | 1976959 |
| 25 | ಶಿವಮೊಗ್ಗ | 847624 | 872125 | 32 | 1719781 |
| 26 | ತುಮಕೂರು | 811120 | 832206 | 72 | 1643398 |
| 27 | ಉಡುಪಿ ಚಿಕ್ಕಮಗಳೂರು | 759120 | 806182 | 37 | 1565339 |
| 28 | ಉತ್ತರ ಕನ್ನಡ | 815599 | 807242 | 16 | 1622857 |
| | **ಒಟ್ಟು** | **26933750** | **26847145** | **4920** | **53785815** |

ರಾಜಕೀಯ ಪಕ್ಷಗಳು ಪ್ರತಿ ವಿಧಾನಸಭಾ ಕ್ಷೇತ್ರದ ಪ್ರತಿ ಮತಗಟ್ಟೆಯಲ್ಲಿ ಮತಗಟ್ಟೆ ಮಟ್ಟದ ಏಜೆಂಟರನ್ನು ನೇಮಿಸುವಂತೆ ಕೋರಲಾಗಿದೆ. ಮುಂದುವರೆದು, ಎಲ್ಲಾ ಅರ್ಹ ಮತದಾರರ ನೋಂದಣಿಗೆ ಅನುಕೂಲವಾಗುವಂತೆ ಮತ್ತು ವಿವಿಧ ಚುನಾವಣಾ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ (ಬಿಎಲ್‌ಒ) ಸಂಪೂರ್ಣ ಸಹಕಾರವನ್ನು ನೀಡಲು ಕೋರಿದೆ.

ಮತದಾರರ ಪಟ್ಟಿಯಲ್ಲಿ ಎಲ್ಲಾ ಅರ್ಹ ಮತದಾರರ ನೋಂದಣಿಯನ್ನು ಖಚಿತ ಪಡಿಸಿಕೊಳ್ಳಲು ಮತ್ತು ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ದೋಷರಹಿತ, ದೃಢವಾದ ಮತದಾರರ ಪಟ್ಟಿಯನ್ನು ರಚಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ. ಅರ್ಹ ಮತದಾರರ ಹೆಸರು ಮತದಾರರ ಪಟ್ಟಿಯಲ್ಲಿ ಇಲ್ಲದಿದ್ದರೆ, ಅವರು ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ತಕ್ಷಣವೇ ನೋಂದಾಯಿಸಲು ಪ್ರೋತ್ಸಾಹಿಸಲಾಗುತ್ತದೆ.



Downloaded From:www.kpscvaani.com



SAKSHAM-ECI
(App for PwD)

Scan Here for Android

Scan Here for iOS

VOTER
HELPLINE APP

Scan Here for Android

Scan Here for iOS

ಮತದಾರರು ಮತದಾನದ ದಿನದಂದು ಮತದಾರರ ಪಟ್ಟಿಯಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಲಾಗುವುದಿಲ್ಲ ಎಂಬುದನ್ನು ಗಮನಿಸುವುದು ಮುಖ್ಯ. ಆದ್ದರಿಂದ, ಮತದಾರರು ವಿಳಂಬವಿಲ್ಲದೆ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ಪರಿಶೀಲಿಸಲು ಮತ್ತು ದೃಢೀಕರಿಸಲು ಸೂಚಿಸಲಾಗಿದೆ.

ಅರ್ಹ ಮತದಾರರು ಅರ್ಜಿಗಳನ್ನು ಸಲ್ಲಿಸಲು ತಮ್ಮ ಮೊಬೈಲ್‌ನಲ್ಲಿ ವೋಟರ್ ಹೆಲ್ಪ್ ಲೈನ್ ಅಪ್ಲಿಕೇಶನ್ ಅಥವಾ ಪರ್ಯಾಯವಾಗಿ https://voterportal.eci.gov.in/ ಪೋರ್ಟಲ್‌ನ ಮೂಲಕವೂ ಅರ್ಜಿಗಳನ್ನು ಸಲ್ಲಿಸಬಹುದು.

ಮತದಾರರಪಟ್ಟಿ, ಮತದಾರರ ಭಾವಚಿತ್ರವಿರುವ ಗುರುತಿನಚೀಟಿ ಮತ್ತು ಅರ್ಜಿಗಳ ಸಲ್ಲಿಕೆಗೆ ಸಂಬಂಧಿಸಿದ ಯಾವುದೇ ಮಾಹಿತಿಗಾಗಿ ಮತದಾರರು ಆಯಾ ಜಿಲ್ಲಾ ಚುನಾವಣಾಧಿಕಾರಿಗಳು, ಮತದಾರರ ನೋಂದಣಾಧಿಕಾರಿಗಳು, ಸಹಾಯಕ ಮತದಾರರ ನೋಂದಣಾಧಿಕಾರಿಗಳು ಮತ್ತು ಮತಗಟ್ಟೆ ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಬಹುದು ಹಾಗೂ ಶುಲ್ಕರಹಿತ ದೂರವಾಣಿ ಸಂಖ್ಯೆ 1950 (180042551950) ಅನ್ನು ಸಹ ಸಂಪರ್ಕಿಸಬಹುದು. ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ಸೇರ್ಪಡೆ ಮಾಡಲು, ವಿಳಾಸ ಬದಲಾವಣೆ, ತಪ್ಪಿದ್ದಲ್ಲಿ ಸರಿ ಪಡಿಸಲು ಹಾಗೂ ಮೃತಪಟ್ಟಲ್ಲಿ ಹೆಸರು ತೆಗೆದು ಹಾಕಲು ಈ ಕೆಳಗಿನ ಅರ್ಜಿ ನಮೂನೆಗಳನ್ನು ಬಳಸಬಹುದಾಗಿದೆ.

**ನಮೂನೆ 1** – ಘೋಷಿತ ಕಚೇರಿಯನ್ನು ಹೊಂದಿರುವ ವ್ಯಕ್ತಿಯಿಂದ ಸಾಮಾನ್ಯ ನಿವಾಸದ ಸ್ಥಳದ ಹೇಳಿಕೆ.

**ನಮೂನೆ 2** – ಸಶಸ್ತ್ರ ಪಡೆಗಳ ಸದಸ್ಯರಿಂದ ಸಾಮಾನ್ಯ ನಿವಾಸದ ಸ್ಥಳದ ಹೇಳಿಕೆ.

**ನಮೂನೆ 2ಎ** – ಆ ರಾಜ್ಯದ ಹೊರಗೆ ಸೇವೆ ಸಲ್ಲಿಸುತ್ತಿರುವ ರಾಜ್ಯದ ಸಶಸ್ತ್ರ ಪೊಲೀಸ್ ಪಡೆಯ ಸದಸ್ಯರಿಂದ ಸಾಮಾನ್ಯ ನಿವಾಸದ ಸ್ಥಳದ ಹೇಳಿಕೆ.

**ನಮೂನೆ 3** – ಭಾರತದ ಹೊರಗಿನ ಪೋಸ್ಟ್‌ನಲ್ಲಿ ಭಾರತ ಸರ್ಕಾರದ ಅಡಿಯಲ್ಲಿ ಉದ್ಯೋಗದಲ್ಲಿರುವ ವ್ಯಕ್ತಿಯಿಂದ ಸಾಮಾನ್ಯ ನಿವಾಸದ ಸ್ಥಳದ ಹೇಳಿಕೆ.

**ನಮೂನೆ 6** – ಹೊಸ ಮತದಾರರಿಗೆ ಅರ್ಜಿ ನಮೂನೆ.

**ನಮೂನೆ 6ಎ** – ಸಾಗರೋತ್ತರ ಭಾರತೀಯ ಮತದಾರರಿಂದ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಲು ಅರ್ಜಿ.

**ನಮೂನೆ 6ಬಿ**– ಮತದಾರರ ಪಟ್ಟಿ ದೃಢೀಕರಣದ ಉದ್ದೇಶಕ್ಕಾಗಿ ಆಧಾರ್ ಸಂಖ್ಯೆಯ ಜೋಡಣೆಗಾಗಿ.

**ನಮೂನೆ 7** – ಅಸ್ತಿತ್ವದಲ್ಲಿರುವ ಮತದಾರರ ಪಟ್ಟಿಯಲ್ಲಿ ಪ್ರಸ್ತಾಪಿತ ಸೇರ್ಪಡೆ/ ಹೆಸರು ಅಳಿಸುವಿಕೆಗೆ ಆಕ್ಷೇಪಣೆಗಾಗಿ ಅರ್ಜಿ ನಮೂನೆ.

**ನಮೂನೆ 8** – ವಾಸಸ್ಥಳವನ್ನು ಬದಲಾಯಿಸಲು/ಅಸ್ತಿತ್ವದಲ್ಲಿರುವ ಮತದಾರರ ಪಟ್ಟಿಯಲ್ಲಿನ ನಮೂದುಗಳ ತಿದ್ದುಪಡಿ/ಇಪಿಐಸಿಯನ್ನು ಬದಲಿಸಲು/ಪಿಡಬ್ಲ್ಯೂಡಿ ಗುರುತು ಮಾಡಲು ಅರ್ಜಿ ನಮೂನೆ.

**ಫಾರ್ಮ್–17**–ರಾಜ್ಯ ವಿಧಾನ ಪರಿಷತ್ತಿನ ಸ್ಥಳೀಯ ಅಧಿಕಾರಿಗಳ ಕ್ಷೇತ್ರಕ್ಕೆ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಲು ಅರ್ಜಿ.

**ನಮೂನೆ 18** – ಪದವೀಧರರ ಕ್ಷೇತ್ರಕ್ಕಾಗಿ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಲು.

**ನಮೂನೆ 19** – ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರನ್ನು ಸೇರಿಸಲು.



Downloaded From:www.kpscvaani.com




## ಗಿನ್ನಿಸ್ ದಾಖಲೆ ನಿರ್ಮಿಸಿದ

# ಕಲ್ಪತರು ನಾಡು



ರಿಷಿಕೇಶ್ ಪಿ.ವಿ




**ಸಾ**ರ್ವಜನಿಕರಲ್ಲಿ ಪ್ಲಾಸ್ಟಿಕ್ ಬಳಕೆಯ ಬಗ್ಗೆ ಜಾಗೃತಿ ಮೂಡಿಸಲು ಸರಕಾರ ಸೇರಿದಂತೆ ಹಲವು ಸಂಘ ಸಂಸ್ಥೆಗಳು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಇದೇ ಮಾದರಿಯಲ್ಲಿ ಕಲ್ಪತರು ನಾಡಿನ ತುಮಕೂರು ಮಹಾ ನಗರ ಪಾಲಿಕೆ ಹಾಗೂ ತುಮಕೂರು ಸ್ಮಾರ್ಟ್ ಸಿಟಿ ಸಹಯೋಗದಲ್ಲಿ ಪ್ಲಾಸ್ಟಿಕ್ ಕುರಿತು ವಿಭಿನ್ನವಾಗಿ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಗಿನ್ನಿಸ್ ದಾಖಲೆಯ ಪುಟಕ್ಕೆ ಸೇರುವ ಮೂಲಕ ತುಮಕೂರು ನಗರಕ್ಕೆ ಗರಿಮೆ ಬಂದಿದೆ. ಈ ಹಿಂದೆ ಕತಾರ್ ದೇಶದಲ್ಲಿ 14500 ಪ್ಲಾಸ್ಟಿಕ್ ಬಾಟಲ್ ಬಳಕೆ ಮಾಡಿ ಕತಾರ್ ಎನ್ನುವ ಇಂಗ್ಲೀಷ್ ಪದದ ಕಲಾಕೃತಿ ನಿರ್ಮಿಸಿದ್ದು ಈವರೆಗಿನ ದಾಖಲೆಯಾಗಿತ್ತು. ಆದರೆ ಈಗ ತುಮಕೂರು ಮಹಾನಗರ ಪಾಲಿಕೆ, ಹಾಗೂ ಸ್ಮಾರ್ಟ್ ಸಿಟಿ ತುಮಕೂರು ಸಹಯೋಗದಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಬಾಟಲಿಗಳನ್ನು ಬಳಸಿ ತುಮಕೂರು ನಗರದ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ "ತುಮಕೂರು" ಎಂದು ಮೂಡಿ ಬರುವಂತೆ ಕನ್ನಡ ಪದದ ಕಲಾಕೃತಿ ನಿರ್ಮಿಸಿ, ಕತಾರ್ ದಾಖಲೆಯನ್ನು ಅಳಿಸಿ ಹಾಕಿ ಹೊಸ ದಾಖಲೆಯನ್ನು ಮಾಡಲಾಗಿದೆ.



Downloaded From:www.kpscvaani.com



ಪ್ಲಾಸ್ಟಿಕ್ ಮುಕ್ತ ತುಮಕೂರು ಮಾಡುವುದು ತುಮಕೂರು ಮಹಾನಗರಪಾಲಿಕೆಯ ಸಂಕಲ್ಪ ಆಗಿದೆ. ಹಾಗಾಗಿ ಮಹಾನಗರಪಾಲಿಕೆಯು ವಿದ್ಯಾರ್ಥಿಗಳಲ್ಲಿ ಮತ್ತು ಜನಸಮಾನ್ಯರಲ್ಲಿ ಪ್ಲಾಸ್ಟಿಕ್ ಬಳಕೆಯ ಬಗ್ಗೆ ಅರಿವು ಮೂಡಿಸಲು ಹಲವು ವರ್ಷಗಳಿಂದ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಪ್ಲಾಸ್ಟಿಕ್ ಬಳಕೆ ಹೆಚ್ಚು ಅಪಾಯಕಾರಿ ಎಂಬುದು ಗೊತ್ತಿದ್ದರೂ ಬಳಕೆ ಕಡಿಮೆಯಾಗುತ್ತಿಲ್ಲ. ಹೀಗಾಗಿ ಸಾರ್ವಜನಿಕರಲ್ಲಿ ಪ್ಲಾಸ್ಟಿಕ್ ಬಳಕೆ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಪಾಲಿಕೆ ಆಯುಕ್ತರಾದ ಅಶ್ವಿಜಾ. ಬಿ.ವಿ ಅವರ ನೇತೃತ್ವದಲ್ಲಿ ಒಂದು ತಂಡ ವಿನೂತನ ಕಾರ್ಯಕ್ಕೆ ಕೈ ಹಾಕಿ ಜನರಲ್ಲಿ ಜಾಗೃತಿ ಮೂಡಿಸಿ ವಿಶ್ವದಾಖಲೆ ಮಾಡಿದ್ದಾರೆ.

**ಪ್ಲಾಸ್ಟಿಕ್ ಬಳಕೆ ಬಗ್ಗೆ ಅರಿವು ಮೂಡಿಸುವ ಪ್ರಯತ್ನ:**

ಪಾಲಿಕೆ ಆಯುಕ್ತರಾದ ಅಶ್ವಿಜಾ ಅವರು, ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡಲು ಉತ್ತೇಜಿಸುವ ಮೂಲಕ ಏಕ ಬಳಕೆ ಪ್ಲಾಸ್ಟಿಕ್‌ನಿಂದ ಉಂಟಾಗುವ ದುಷ್ಪರಿಣಾಮ ಹಾಗೂ ಪ್ಲಾಸ್ಟಿಕ್ ತ್ಯಾಜ್ಯದಿಂದ ಸಂಭವಿಸಬಹುದಾದ ಗಾಳಿ, ನೀರು ಮತ್ತು ಮಣ್ಣಿನ ಮಾಲಿನ್ಯತೆ ಕುರಿತು ಸಾರ್ವಜನಿಕರಲ್ಲಿ ಅರಿವು ಜಾಗೃತಿ ಮೂಡಿಸುವುದು ಅಗತ್ಯವಾಗಿದೆ. ಜನಸಾಮಾನ್ಯರು ತಮ್ಮ ದೈನಂದಿನ ಜೀವನದಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ನಿಯಂತ್ರಣ ಮಾಡಬೇಕು. ಸ್ಟೀಲ್ ಅಥವಾ ತಾಮ್ರ (ಕಾಪರ್) ಬಾಟಲ್‌ಗಳನ್ನು ಜನರು ಬಳಕೆ ಮಾಡಬೇಕು. ಆರೋಗ್ಯ ದೃಷ್ಟಿಯಿಂದ ಪ್ರತಿ ಹಂತದಲ್ಲೂ ಅಪಾಯಕಾರಿ ಪ್ಲಾಸ್ಟಿಕ್ ಬಳಕೆಯಿಂದ ದೂರ ಇರುವುದು ಒಳ್ಳೆಯದು ಎಂದು ಅವರು ಅಭಿಪ್ರಾಯ ಪಡುತ್ತಾರೆ.

**ಏಕಬಳಕೆ ಬಾಟಲಿನ ಕಲಾಕೃತಿ**

ಸುಸ್ಥಿರ ಮೂಲ ಸೌಕರ್ಯಗಳ ಅಭಿವೃದ್ಧಿಯನ್ನು ಉತ್ತೇಜಿಸಿ ಪ್ರೋತ್ಸಾಹಿಸಲು ಹಾಗೂ ಪರಿಸರ ಸ್ನೇಹಿ ಸಾಮಾಗ್ರಿಗಳನ್ನು ಬಳಕೆ ಮಾಡುವ ಮೂಲಕ ಪ್ಲಾಸ್ಟಿಕ್ ಮುಕ್ತ ಅಭಿಯಾನವನ್ನು ಸಾರ್ವಜನಿಕರಲ್ಲಿ, ವ್ಯಾಪಾರಿಗಳಲ್ಲಿ, ಶಾಲಾ ಮಕ್ಕಳಲ್ಲಿ, ನಾಗರಿಕರಲ್ಲಿ, ಪ್ರವಾಸಿಗಳಲ್ಲಿ ಹಾಗೂ ಪೌರಕಾರ್ಮಿಕರಲ್ಲಿ ಜನಜಾಗೃತಿ ಮೂಡಿಸುವ ಸಲುವಾಗಿ ಪಾಲಿಕೆ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳ ಮನೆ, ಹೋಟೆಲ್, ರೆಸ್ಟೋರೆಂಟ್, ಫುಡ್ ಸ್ಟ್ರೀಟ್, ಕನ್ವೆನ್ಷನ್ ಹಾಲ್‌ಗಳು ಸೇರಿದಂತೆ ಹಲವು ಕಡೆಗಳಿಂದ ಈ ಖಾಲಿ ಬಾಟಲ್‌ಗಳನ್ನು ಸಂಗ್ರಹಿಸಲಾಗಿತ್ತು. ಹಾಗೆಯೇ ಪಾಲಿಕೆ ಆಯುಕ್ತೆ ಅಶ್ವಿಜಾ ಅವರು ಈ ದಾಖಲೆ ನಿರ್ಮಾಣಕ್ಕೆ ಸಹಕಾರ ನೀಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದ್ದರು.

ಈ ಹಿಂದೆ 14500 ಪ್ಲಾಸ್ಟಿಕ್ ಬಾಟಲಿ ಬಳಸಿ ಕತಾರ್ ದೇಶದಲ್ಲಿ 'ಕತಾರ್' ಎಂಬ ಆಂಗ್ಲ ಪದದ ಕಲಾಕೃತಿ ನಿರ್ಮಿಸಿ ಗಿನ್ನಿಸ್ ದಾಖಲೆಯಾಗಿತ್ತು. ಈ ದಾಖಲೆ ಮುರಿದು ಹೊಸ ದಾಖಲೆ ನಿರ್ಮಿಸಲು ಅರ್ಧ ಲೀಟರ್ ಹಾಗೂ 1 ಲೀಟರ್‌ನ 1.5 ಲಕ್ಷ ಬಾಟಲಿಗಳನ್ನು ಬಳಸಿ ಪೌರಕಾರ್ಮಿಕರು, ವಿದ್ಯಾರ್ಥಿಗಳು ಹಾಗೂ ನಾಗರಿಕರು, ಎನ್‌ಸಿಸಿ, ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಮತ್ತು ಸ್ವತಃ ಪಾಲಿಕೆ ಸದಸ್ಯರು ಪಾಲ್ಗೊಂಡು " ತುಮಕೂರು " ಎಂಬ ಕನ್ನಡ ಪದದ ಕಲಾಕೃತಿ ನಿರ್ಮಿಸುವ ಮೂಲಕ ತುಮಕೂರು ನಗರವನ್ನು ವಿಶ್ವ ಗಿನ್ನಿಸ್ ದಾಖಲೆಗೆ ಸೇರಿಸುವ ಪ್ರಯತ್ನ ಮಾಡಲಾಗಿದೆ. ಈ ಕಲಾಕೃತಿ ನಿರ್ಮಾಣಕ್ಕೆ ಸಮಯದ ಮಿತಿ ನಿಗದಿಗೊಳಿಸಿರಲಿಲ್ಲ, 5 ರಿಂದ 8 ಗಂಟೆ ಸಮಯದಲ್ಲಿ ಕಲಾಕೃತಿ ನಿರ್ಮಿಸಲಾಯಿತು. ಲಂಡನ್ನಿಂದ ಆಗಮಿಸಿದ್ದ ತೀರ್ಪುಗಾರರ ಸಮಕ್ಷಮದಲ್ಲಿ ತುಮಕೂರು ಕಲಾಕೃತಿ ನಿರ್ಮಾಣವಾಯಿತು. ಅಂತಿಮವಾಗಿ ತೀರ್ಪುಗಾರರು ಗಿನ್ನಿಸ್ ದಾಖಲೆಯ ಪ್ರಕ್ರಿಯೆ ನಡೆಸಿ ಅಂತಿಮವಾಗಿ ತುಮಕೂರು ಕಲಾಕೃತಿ ಗಿನ್ನಿಸ್ ದಾಖಲೆಗೆ ಅರ್ಹ ಎಂಬುದನ್ನು ಘೋಷಿಸಿದರು.

ತುಮಕೂರು ನಗರದ ಶಾಸಕರಾದ ಜ್ಯೋತಿ ಗಣೇಶ್ ಕೂಡ ಕಲಾಕೃತಿ ರಚನೆ ವೇಳೆ ಹಾಜರಿದ್ದು ಪ್ರೋತ್ಸಾಹ ನೀಡಿದರು. ಎಲ್ಲರ ಸಹಕಾರದಿಂದ 'ತುಮಕೂರು' ಪದ ಗಿನ್ನಿಸ್ ದಾಖಲೆ ಪುಸ್ತಕ ಸೇರುವಂತಾಗಿದೆ.

ತುಮಕೂರು ನಗರದಲ್ಲಿ ಇತ್ತೀಚಿಗೆ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಅಧಿಕಾರಿಗಳ ತಂಡಕ್ಕೆ ಲಂಡನ್‌ನಿಂದ ಆಗಮಿಸಿದ್ದ ತೀರ್ಪುಗಾರರು ಗಿನ್ನಿಸ್ ದಾಖಲೆಯ ಪ್ರಮಾಣ ಪತ್ರವನ್ನು ನೀಡಿದರು. ಪಾಲಿಕೆ ಆಯುಕ್ತರ ಪರಿಸರ ಕಾಳಜಿ ಮತ್ತು ಗಿನ್ನಿಸ್ ದಾಖಲೆ ಮಾಡಲು ತೆಗೆದುಕೊಂಡ ಮುತುವರ್ಜಿಗೆ ಸಾರ್ವಜನಿಕ ವಲಯದಿಂದ ಪ್ರಶಂಸೆ ವ್ಯಕ್ತವಾಯಿತು.





Downloaded From:www.kpscvaani.com







**ಅಲೆಮಾರಿ ಸಮುದಾಯದವರನ್ನು ಆರ್ಥಿಕ ಸಬಲರನ್ನಾಗಿ ಮಾಡುವ ನಿಟ್ಟಿನಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ ಹಲವು ಯೋಜನೆಗಳನ್ನು ಹಮ್ಮಿಕೊಳ್ಳುತ್ತಿದೆ.**





# ಅಲೆಮಾರಿ ಅಭಿವೃದ್ಧಿ ನಿಗಮದ ಯೋಜನೆಗಳು

ಕೆ. ಎಸ್. ರಾಜಮನ್ನಾರ್

**ಪ**ರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ, ಅರೆಅಲೆಮಾರಿ ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರವು ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದವರು ಒಂದು ಕಡೆ ನೆಲೆ ನಿಲ್ಲದೆ ಜೀವನೋಪಾಯಕ್ಕಾಗಿ ಅಲೆದಾಡುವ ಸಮುದಾಯವಾಗಿದ್ದು, ಸದರಿ ಸಮುದಾಯದ ಫಲಾನುಭವಿಗಳು ಆರ್ಥಿಕ ಅಭಿವೃದ್ಧಿ ಚಟುವಟಿಕೆ ಕೈಗೊಳ್ಳಲು ನಿಗಮವು ವಿವಿಧ ಯೋಜನೆಗಳಡಿಯಲ್ಲಿ ಸಾಲ ಸೌಲಭ್ಯ ಕಲ್ಪಿಸಿ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವ ಉದ್ದೇಶ ಹೊಂದಿದೆ.

**ಸ್ವಯಂ ಉದ್ಯೋಗ ನೇರ ಸಾಲ ಯೋಜನೆ:**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯಕ್ಕೆ ಆರ್ಥಿಕ ಬಲ ತುಂಬಲೆಂದೇ ರೂಪಿಸಲಾದ ಯೋಜನೆಯೇ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ. ಈ ಯೋಜನೆಯ ಅನುಸಾರ ತಮ್ಮ ಪಾರಂಪರಿಕ ವೃತ್ತಿಗೆ ಅನುಗುಣವಾಗಿ ಸ್ವಯಂ ಉದ್ಯೋಗ ಪ್ರಾರಂಭಿಸಲು ಸಾಲ ಸೌಲಭ್ಯ ಪಡೆಯಬಹುದಾಗಿದೆ. ಸ್ವಯಂ ಉದ್ಯೋಗ ಯೋಜನೆ ಅಡಿ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ.

ಇದರಡಿ ಫಲಾನುಭವಿಗಳು ತರಕಾರಿ, ಹಣ್ಣು ಹಂಪಲು, ಮೀನು, ಮಾಂಸ ಮಾರಾಟ, ಕುರಿ ಸಾಕಾಣಿಕೆ, ಕಿರು ಆರ್ಥಿಕ ಚಟುವಟಿಕೆಗಳಿಗೆ ಬಂಡವಾಳ ಸೇರಿದಂತೆ ಗರಿಷ್ಠ ವೆಚ್ಚ 1 ಲಕ್ಷರೂ. ಆಗಿದ್ದು ಇದರಲ್ಲಿ ಶೇಕಡ 50ರಷ್ಟು ಸಹಾಯಧನ ಮತ್ತು ಶೇಕಡ 50ರಷ್ಟು ಬೀಜಧನದಂತೆ ಉಪಯೋಗಿಸಲಾಗುವುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದವರು ನಡೆಸಲು ಇಚ್ಛಿಸುವ ವಿವಿಧ ಉದ್ಯಮಶೀಲತಾ ಚಟುವಟಿಕೆಗಳಿಗೆ ಸಾಲ ಸೌಲಭ್ಯ ನೀಡಲು ಬ್ಯಾಂಕ್ ಸಹಾಯದೊಂದಿಗೆ ರೂಪಿಸಿದ ಯೋಜನೆಯೇ ಉದ್ಯಮಶೀಲತಾ ಯೋಜನೆ. ಈ ಯೋಜನೆ ಅನುಸಾರ ಮೂರು ರೀತಿಯಲ್ಲಿ ಉದ್ಯಮಾನುಸಾರ ಸಹಾಯಧನ ನೀಡಲಾಗುವುದು.

ಒಂದು ಸಣ್ಣಕೈಗಾರಿಕೆ, ವಾಹನಗಳು, ಸೇವಾ ಕ್ಷೇತ್ರ ಮತ್ತು ವ್ಯಾಪಾರಿ ಕ್ಷೇತ್ರಗಳು ಹಾಗೂ ಇತರೆ ಕ್ಷೇತ್ರಗಳಲ್ಲಿ ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸುವ ಉದ್ಯೋಗ ಕಾರ್ಯಕ್ರಮಗಳಿಗೆ 2 ಲಕ್ಷ ರೂಪಾಯಿ ಸಾಲ ಹಾಗೂ ಸರಕು ಸಾಗಾಣಿಕೆ ವಾಹನ ನಡೆಸಲು ಇಚ್ಛಿಸುವವರಿಗೆ 3.5ಲಕ್ಷ ರೂಪಾಯಿ ಸಾಲ ಸೌಲಭ್ಯ ನೀಡಲಾಗುವುದು.

**ದ್ವಿಚಕ್ರ ವಾಹನ ಯೋಜನೆ:**

ಈ ಕಾಮರ್ಸ್ ವ್ಯವಹಾರಕ್ಕೆ ಅನುಕೂಲವಾಗುವಂತೆ ಇನ್ನಿತರ ಸೇವೆಗಳಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಈ ಯೋಜನೆಯನ್ನು ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತದೆ.



Downloaded From:www.kpscvaani.com

**ಯೋಜನೆಗಳ ಸೌಲಭ್ಯ ಪಡೆಯಲು ಇರಬೇಕಾದ ಸಾಮಾನ್ಯ ಅರ್ಹತೆಗಳು:**

- ಅರ್ಜಿದಾರರು ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳಲ್ಲಿ ಬರುವ ಅಲೆಮಾರಿ ಸಮುದಾಯಕ್ಕೆ ಸೇರಿದವರಾಗಿರಬೇಕು.
- ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ಅರ್ಜಿದಾರರು ಹಾಗೂ ಕುಟುಂಬದ ಅವಲಂಬಿತರು ಸರ್ಕಾರಿ ಮತ್ತು ಅರೆ ಸರ್ಕಾರಿ ನೌಕರಿಯಲ್ಲಿ ಇರಬಾರದು.
- ಗಂಗಾ ಕಲ್ಯಾಣ ಯೋಜನೆ ಅಡಿ ಸೌಲಭ್ಯ ಪಡೆಯಲು ಸಣ್ಣ ಮತ್ತು ಅತಿ ಸಣ್ಣ ರೈತರು ಆಗಿರಬೇಕು ಹಾಗೂ ನೀರಾವರಿ ಸೌಲಭ್ಯ ಹೊಂದಿರಬಾರದು.
- ಮೈಕ್ರೋಕ್ರೆಡಿಟ್ ಯೋಜನೆ ಅಡಿ ಅರ್ಜಿದಾರರು ಸ್ವಸಹಾಯ ಸಂಘದ ಭಾಗವಾಗಿರುವ ಬಗ್ಗೆ ಮತ್ತು ಗುಂಪು ಚಟುವಟಿಕೆಗಳಲ್ಲಿ ಭಾಗವಹಿಸಿ ವ್ಯಾಪಾರ ವಹಿವಾಟನ್ನು ನಿರ್ವಹಿಸಿ ಆದಾಯವನ್ನು ಪಡೆಯುವ ಬಗ್ಗೆ ಲಿಖಿತ ಒಪ್ಪಿಗೆ ನೀಡಬೇಕು.
- ಅರ್ಜಿದಾರರ ಕುಟುಂಬ ವಸತಿ ರಹಿತರಾಗಿದ್ದು, ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಪ್ರದೇಶ–ಭಾಗದಲ್ಲಿ ಸ್ವಂತ ಮನೆ ಹೊಂದಿರಬಾರದು. ಶಿಥಿಲಗೊಂಡ ಮನೆ ಅಥವಾ ಗುಡಿಸಿಲಿನಲ್ಲಿ ವಾಸಿಸುತ್ತಿರುವವರು ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.
- ಭೂಒಡೆತನ ಯೋಜನೆಯಡಿ ಸೌಲಭ್ಯ ಪಡೆಯಲು ಫಲಾನುಭವಿ ಭೂರಹಿತ ಮಹಿಳಾ ಕೃಷಿ ಕಾರ್ಮಿಕರಾಗಿರಬೇಕು.
- ವಿಕಲಚೇತನರು ಸೌಲಭ್ಯ ಪಡೆಯಲು ಸಂಬಂಧಪಟ್ಟ ಇಲಾಖೆಯಿಂದ ದೃಢೀಕರಣ ಪತ್ರ ಸಲ್ಲಿಸಬೇಕು.
- ವಾಹನ ಸೌಲಭ್ಯ ಪಡೆಯುವ ಫಲಾನುಭವಿಗಳು ವಾಹನ ಚಾಲನಾ ಪರವಾನಗಿಯನ್ನು ಕಡ್ಡಾಯವಾಗಿ ಹೊಂದಿರಬೇಕು.

**ಷರತ್ತು ಮತ್ತು ಅರ್ಜಿದಾರರು ಸಲ್ಲಿಸಬೇಕಾದ ದಾಖಲಾತಿಗಳು:**

- ಅರ್ಜಿದಾರರು ಭಾವಚಿತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಸಲ್ಲಿಸಬೇಕು.
- ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮೀಣ ಪ್ರದೇಶದಲ್ಲಿ 1.50 ಲಕ್ಷರೂ ಹಾಗೂ ನಗರ ಪ್ರದೇಶದಲ್ಲಿ ಗರಿಷ್ಠ 2 ಲಕ್ಷ ರೂಪಾಯಿ ಮಿತಿಯೊಳಗಿರಬೇಕು.
- ಅರ್ಜಿದಾರರು ಘಟಕ ಸ್ಥಾಪಿಸಲು ಅವಶ್ಯಕತೆ ಇರುವ ಸ್ಥಳಾವಕಾಶವನ್ನು ಹೊಂದಿರಬೇಕು ಮತ್ತು ಅದಕ್ಕೆ ಪೂರಕ ದಾಖಲಾತಿ ಒದಗಿಸಬೇಕು.
- ಅರ್ಜಿದಾರರ ಆಧಾರ್‌ಕಾರ್ಡ್, ಆಹಾರ ಪಡಿತರಚೀಟಿ, ಚುನಾವಣಾ ಗುರುತಿನಚೀಟಿ ಮತ್ತು ಬ್ಯಾಂಕ್ ಪಾಸ್ ಪುಸ್ತಕ ಮುಂತಾದ ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕು.
- ಈ ಹಿಂದೆ ನಿಗಮದ ಯಾವುದೇ ಯೋಜನೆಗಳಲ್ಲಿ ಸೌಲಭ್ಯ ಪಡೆದಿಲ್ಲವೆಂದು ಅರ್ಜಿದಾರರು ಸ್ವಯಂ ಘೋಷಣಾ ಪತ್ರ ಸಲ್ಲಿಸಬೇಕು.
- ಮಂಜೂರಾತಿ ಪಡೆದ ಫಲಾನುಭವಿ ಅನರ್ಹ ಎಂದು ಕಂಡು ಬಂದಲ್ಲಿ ಮಂಜೂರಾತಿಯನ್ನು ಯಾವುದೇ ಹಂತದಲ್ಲಿ ರದ್ದುಪಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

ದ್ವಿಚಕ್ರ ವಾಹನ ಖರೀದಿಗಾಗಿ 50 ಸಾವಿರ ಸಹಾಯಧನ ಹಾಗೂ 20 ಸಾವಿರ ನಿಗಮದಿಂದ ಸಾಲ ನೀಡಲಾಗುವುದು. ಉಳಿದ ಮೊತ್ತವನ್ನು ಫಲಾನುಭವಿಗಳೇ ಸ್ವಂತವಾಗಿ ಬರಿಸಬೇಕು.

**ಮೈಕ್ರೋಕ್ರೆಡಿಟ್ ಪ್ರೇರಣಾ ಯೋಜನೆ:**

ಪರಿಶಿಷ್ಟ ಜಾತಿಯ ಅಲೆಮಾರಿ ಸಮುದಾಯದ ಮಹಿಳಾ ಸ್ವಸಹಾಯ ಸಂಘಗಳ ವಿವಿಧ ಆರ್ಥಿಕ ಚಟುವಟಿಕೆಗಳ ಉತ್ತೇಜನಕ್ಕೆ ರೂಪಿಸಿದ ಯೋಜನೆಯೇ ಮೈಕ್ರೋ ಕ್ರೆಡಿಟ್ ಯೋಜನೆ. ಈ ಯೋಜನೆಯ ಅನುಸಾರ ಸ್ವಸಹಾಯ ಸಂಘವು ಆದಾಯ ಬರುವ ಆರ್ಥಿಕ ಚಟುವಟಿಕೆ ಉತ್ಪಾದನೆ ಮತ್ತು ಸೇವಾ ಘಟಕಗಳಿಗೆ ಸಹಾಯಧನ ಮತ್ತು ಬೀಜಧನದ ರೂಪದಲ್ಲಿ ಸಾಲ ಸೌಲಭ್ಯ ನೀಡುವುದು. ಸ್ವಸಹಾಯ ಸಂಘಗಳ ವಿವಿಧ ಉದ್ದೇಶದ ಆರ್ಥಿಕ ಚಟುವಟಿಕೆಗಳಿಗೆ ಪ್ರತಿ ಮಹಿಳಾ ಸದಸ್ಯರಿಗೆ 25 ಸಾವಿರ ಒದಗಿಸಲಾಗುವುದು. ಇದರಲ್ಲಿ 15 ಸಾವಿರ ಸಹಾಯಧನ, 10 ಸಾವಿರ ಬೀಜಧನ ಇರುತ್ತದೆ. ಕನಿಷ್ಠ 10 ಮಹಿಳಾ ಸದಸ್ಯರು ಇರುವ ಸ್ವಸಹಾಯ ಗುಂಪಿಗೆ ಘಟಕ ವೆಚ್ಚವಾಗಿ 2.50 ಲಕ್ಷ ರೂ. ಹಾಗೂ ಗುಂಪಿಗೆ ಸಾಲ ಸೌಲಭ್ಯ ಒದಗಿಸಲಾಗುವುದು.

**ಭೂ ಒಡೆತನ ಯೋಜನೆ:**

ಅಲೆಮಾರಿ ಸಮುದಾಯ ಒಂದು ಕಡೆ ನೆಲೆಯೂರಿ ಜೀವನ ಸಾಗಿಸಲು ಹಾಗೂ ಭೂ ಮಾಲೀಕರನ್ನಾಗಿ ಮಾಡಲು ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳ ಭೂರೈತ ಮಹಿಳಾ ಅಲೆಮಾರಿ ಸಮುದಾಯದವರಿಗೆ ಕೃಷಿಗೆ ಯೋಗ್ಯವಾದ ಜಮೀನು ಖರೀದಿಸಿ ಮಹಿಳಾ ಫಲಾನುಭವಿಗಳಿಗೆ ನೀಡಲಾಗುವುದು.

**ಸಮಗ್ರ ಗಂಗಾ ಕಲ್ಯಾಣ ಯೋಜನೆ: (ವೈಯಕ್ತಿಕ ನೀರಾವರಿ ಕೊಳವೆಬಾವಿ)**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಣ್ಣ ಮತ್ತು ಅತಿ ಸಣ್ಣ ರೈತರ ಒಂದ ರಿಂದ ಐದು ಎಕರೆ ಜಮೀನಿನಲ್ಲಿ ಕೊಳವೆಬಾವಿ ಕೊರೆಸಿ, ಪಂಪ್ ಸೆಟ್ ಅಳವಡಿಕೆ, ವಿದ್ಯುತ್ ಸೌಲಭ್ಯ ಕಲ್ಪಿಸಿ ನೀರಾವರಿ ಸೌಲಭ್ಯ ಒದಗಿಸಲಾಗುವುದು. ಗರಿಷ್ಠ 3.5 ಲಕ್ಷ ರೂ ಮಿತಿ. ಇದರಲ್ಲಿ ಮೂರು ಲಕ್ಷ ಸಹಾಯಧನವಾಗಿದ್ದು, ಉಳಿದ 50 ಸಾವಿರ ಅವಧಿ ಸಾಲವಾಗಿರುತ್ತದೆ.

**ವಸತಿ ಯೋಜನೆ:**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದ ಕುಟುಂಬಗಳಿಗೆ ವಸತಿ ಸೌಕರ್ಯವನ್ನು ಕಲ್ಪಿಸಲು ವಸತಿ ಯೋಜನೆಯನ್ನು ರಾಜೀವ್‌ಗಾಂಧಿ ವಸತಿ ನಿಗಮದಿಂದ ಅನುಷ್ಠಾನ ಗೊಳಿಸಲಾಗುತ್ತದೆ. ಸದರಿ ಯೋಜನೆ ಗ್ರಾಮೀಣ ಹಾಗೂ ನಗರ ಪ್ರದೇಶದ ಪ್ರತಿ ಫಲಾನುಭವಿಗಳಿಗೆ ಘಟಕ ವೆಚ್ಚವಾಗಿ 2 ಲಕ್ಷ ರೂಪಾಯಿ ನಿಗದಿಪಡಿಸಲಾಗಿದೆ. ಮನೆಗಳ ಪ್ರಗತಿಗೆ ಅನುಗುಣವಾಗಿ ಅನುದಾನವನ್ನು ನೇರವಾಗಿ ಫಲಾನುಭವಿಯ ಬ್ಯಾಂಕ್ ಖಾತೆಗೆ ರಾಜೀವ್‌ಗಾಂಧಿ ವಸತಿ ನಿಗಮದಿಂದ ಬಿಡುಗಡೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಫಲಾನುಭವಿಗಳು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ. 12 ನೇ ಮಹಡಿ, ವಿವಿ ದೊಡ್ಡಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು– 560001 ಇಲ್ಲಿಗೆ ಖುದ್ದು, ಅಥವಾ ದೂರವಾಣಿ ಸಂಖ್ಯೆ: 080 – 2286 8069 ಅನ್ನು ಸಂಪರ್ಕಿಸಬಹುದು. ■



Downloaded From:www.kpscvaani.com

# ಬಂಡೀಪುರ ಸಫಾರಿ ಪ್ರವಾಸಿಗರಿಗೆ ವಿಮಾ ಸೌಲಭ್ಯ



● ಡಾ.ವರ ಪ್ರಸಾದ್ ರಾವ್ ಪಿ ವಿ.




**ಬಂಡೀಪುರ ಹುಲಿ ಯೋಜನೆ 50 ರ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯು ಸಿಬ್ಬಂದಿ ಹಾಗೂ ಪ್ರವಾಸಿಗರಿಗೆ ವಿಮಾ ಸೌಲಭ್ಯವನ್ನು ಜಾರಿಗೊಳಿಸಿದೆ.**

ಬಂಡೀಪುರ ರಾಷ್ಟ್ರೀಯ ಉದ್ಯಾನವನವು ದಕ್ಷಿಣ ಭಾರತದ ಅತಿದೊಡ್ಡ ಸಂರಕ್ಷಿತ ಪ್ರದೇಶವಾಗಿದೆ ಮತ್ತು ದಕ್ಷಿಣ ಏಷ್ಯಾದ ಕಾಡು ಆನೆಗಳ ಅತಿದೊಡ್ಡ ಆವಾಸಸ್ಥಾನವಾಗಿದೆ. ಹುಲಿ ಸಂರಕ್ಷಿತ ಅಭಯಾರಣ್ಯವಾಗಿರುವುದಲ್ಲದೆ, ಸಫಾರಿಗೆ ಹೇಳಿ ಮಾಡಿಸಿದ ತಾಣ. ಹಾಗಾಗಿ ಸಫಾರಿಗೆ ಆಗಮಿಸುವ ಪ್ರವಾಸಿಗರಿಗೆ ಒಂದು ಕೋಟಿ ಮೌಲ್ಯದ ವಿಮಾ ಯೋಜನೆಯನ್ನು ಅರಣ್ಯ ಇಲಾಖೆಯು ಪ್ರಾರಂಭಿಸಿದೆ.

ಬಂಡೀಪುರ ಎಂದ ಕೂಡಲೇ ನಮ್ಮ ಕಣ್ಣಮುಂದೆ ಬರುವುದು ಹುಲಿ ಸಂರಕ್ಷಿತ ಪ್ರದೇಶ. ಬಂಡೀಪುರ ರಾಷ್ಟ್ರೀಯ ಉದ್ಯಾನ ಹುಲಿ ಸಂರಕ್ಷಿತ ಪ್ರದೇಶವು ದೇಶದ ಪ್ರತಿಷ್ಠಿತ ಹುಲಿ ಸಂರಕ್ಷಿತ ಪ್ರದೇಶ. ಈ ಹುಲಿ ರಕ್ಷಿತಾರಣ್ಯಕ್ಕೆ 50ನೇ ವರ್ಷದ ಸಂಭ್ರಮಾಚರಣೆ. ಬಂಡೀಪುರವು ಹುಲಿ ಸಂರಕ್ಷಿತ ಅಭಯಾರಣ್ಯವಾಗಿರುವುದಲ್ಲದೆ ಸಫಾರಿಗೆ ಹೇಳಿ ಮಾಡಿಸಿದ ತಾಣವಾಗಿದ್ದು, ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ಬ್ರಿಟೀಷರಿಗೂ ಈ ಅರಣ್ಯ ಪ್ರಿಯವಾಗಿತ್ತು ಎಂಬುದಕ್ಕೆ ಇಲ್ಲಿರುವ ಬ್ರಿಟೀಷರ ಕಾಲದ ಅತಿಥಿ ಗೃಹ ಸಾಕ್ಷಿಯಾಗಿದೆ. ಇತ್ತೀಚೆಗೆ ಬಂಡೀಪುರ ಸಫಾರಿಗೆ ಹೊರ ರಾಜ್ಯದ ಪ್ರವಾಸಿಗರ ಸಂಖ್ಯೆಯೂ ಹೆಚ್ಚಿದ್ದು, ಆದಾಯವೂ ಹಿಂದಿಗಿಂತಲೂ ದುಪ್ಪಟ್ಟು ಆಗುತ್ತಿದೆ.

ಬ್ರಿಟೀಷರು ಕೂಡ ಬಂಡೀಪುರ ಅರಣ್ಯದ ಸೌಂದರ್ಯವನ್ನು ಇಷ್ಟಪಟ್ಟಿದ್ದರು. ಅರಣ್ಯದಲ್ಲಿ ಉಳಿದುಕೊಳ್ಳುವ ಸಲುವಾಗಿಯೇ ಬಂಗಲೆಯನ್ನು 1917ರಲ್ಲಿ ಕಲ್ಲು, ಇಟ್ಟಿಗೆ, ಗಾರೆಯಿಂದ ನಿರ್ಮಿಸಿದ್ದರು. ಇವತ್ತಿಗೂ ಆ ಬಂಗಲೆ ಇರುವುದು ವಿಶೇಷವಾಗಿದೆ. ಈ ಕಟ್ಟಡ ಅಂದಿನ ಬ್ರಿಟೀಷ್ ಅಧಿಕಾರಿಗಳು ಮತ್ತು ಮೈಸೂರು ಅರಸರು ಊಟಿಗೆ ತೆರಳಿ ಮೈಸೂರಿಗೆ ಹಿಂತಿರುಗುವಾಗ ವಿಶ್ರಾಂತಿ ಪಡೆಯಲು



Downloaded From:www.kpscvaani.com




ಅನುಕೂಲವಾಗಲೆಂದು ಕಟ್ಟಿದರೆಂಬುದಾಗಿ ಇತಿಹಾಸ ಹೇಳುತ್ತದೆ.

ದೇಶದಲ್ಲಿ ಕ್ಷೀಣಿಸುತ್ತಿರುವ ಹುಲಿಗಳ ಸಂಖ್ಯೆಯನ್ನು ಹೆಚ್ಚಿಸಲು ಮತ್ತು ಭಾರತದಲ್ಲಿ ಅವುಗಳ ಸಂರಕ್ಷಣೆಯನ್ನು ಉತ್ತೇಜಿಸಲು ಏಪ್ರಿಲ್ 1, 1973 ರಂದು ಅಂದಿನ ಪ್ರಧಾನಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾ ಗಾಂಧಿ ಅವರು ಬಂಡಿಪುರ ಟೈಗರ್ ರಿಸರ್ವ್ ಪ್ರಾಜೆಕ್ಟ್‌ಗೆ ಚಾಲನೆ ನೀಡಿದರು. ಇದೀಗಾ ದೇಶದ ಪ್ರತಿಷ್ಠಿತ ಹುಲಿ ಸಂರಕ್ಷಿತಾರಣ್ಯವಾಗಿ, 50 ವರ್ಷದ ಸಂಭ್ರಮಾಚರಣೆಯಲ್ಲಿದೆ.

ಅಂದಿನ ದಿನಗಳಲ್ಲಿ ಬಂಡೀಪುರ ಅರಣ್ಯವು ಮೈಸೂರು ಸಾಮ್ರಾಜ್ಯದ ಮಹಾರಾಜರಿಗೆ ಖಾಸಗಿ ಬೇಟೆಯಾಡಲು ಮೀಸಲಾಗಿತ್ತು. ಮೈಸೂರು ಸಾಮ್ರಾಜ್ಯದ ಮಹಾರಾಜ 1931 ರಲ್ಲಿ 90 ಕಿ.ಮೀ. (35 ಚ.ಮೀ.) ನ ಅಭಯಾರಣ್ಯವನ್ನು ನಿರ್ಮಿಸಿ, ಅದನ್ನು ವೇಣುಗೋಪಾಲ ವನ್ಯಜೀವಿ ಉದ್ಯಾನ ಎಂದು ಹೆಸರಿಸಿದರು. 912.04 ಚದರ ಕಿ.ಮೀ ವಿಸ್ತೀರ್ಣದಲ್ಲಿ ವ್ಯಾಪಿಸಿರುವ ಬಂಡೀಪುರ ರಾಷ್ಟ್ರೀಯ ಉದ್ಯಾನ ಮತ್ತು ಹುಲಿ ಮೀಸಲು ಪ್ರದೇಶ ಭಾರತದ ಎರಡನೇ ಅತಿ ದೊಡ್ಡ ಹುಲಿ ಸಂರಕ್ಷಣಾ ನೆಲೆಯಾಗಿದ್ದು, ದಕ್ಷಿಣ ಭಾರತದ ಅತಿದೊಡ್ಡ ಸಂರಕ್ಷಿತ ಪ್ರದೇಶಗಳಲ್ಲಿ ಒಂದಾಗಿದೆ ಮತ್ತು ದಕ್ಷಿಣ ಏಷ್ಯಾದ ಕಾಡು ಆನೆಗಳ ಅತಿದೊಡ್ಡ ವಾಸಸ್ಥಾನವಾಗಿದೆ. ಮೈಸೂರಿಗೆ ಬರುವ ಬಹುತೇಕ ಪ್ರವಾಸಿಗರು ಬಂಡಿಪುರಕ್ಕೆ ಭೇಟಿ ನೀಡುತ್ತಾರೆ. ಬಂಡೀಪುರವು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿದೆ. ಬಂಡೀಪುರ ರಾಷ್ಟ್ರೀಯ ಉದ್ಯಾನವು ವಯನಾಡ್ (ವನ್ಯಜೀವಿ ಅಭಯಾರಣ್ಯ), ಮುದುಮಲೈ ಮತ್ತು ನಾಗರಹೊಳೆಗಳೊಂದಿಗೆ ಗಡಿಯನ್ನು ಹಂಚಿಕೊಂಡಿದೆ. ಬಂಡೀಪುರದ ಮೂಲಕ ಕಬಿನಿ ನದಿ, ಮೊಯಾರ್ ನದಿ ಮತ್ತು ನುಗು ನದಿಯನ್ನು ಒಳಗೊಂಡಿರುವ ಉಪ ನದಿಗಳು ಹರಿಯುತ್ತವೆ.



ಉದ್ಯಾನವನದ ಅತ್ಯಂತ ಎತ್ತರದ ಸ್ಥಳವೆಂದರೆ ಹಿಮವದ್ ಗೋಪಾಲಸ್ವಾಮಿ ಬೆಟ್ಟ. ಈ ಬೆಟ್ಟದ ಮೇಲೆ ಗೋಪಾಲಸ್ವಾಮಿ ದೇವಸ್ಥಾನವಿದೆ. ಬೆಂಗಳೂರು ಅಥವಾ ಮೈಸೂರು ಸುತ್ತಮುತ್ತ ಇರುವವರಿಗೆ ಇದು ವಾರಾಂತ್ಯದ ವಿಹಾರ ತಾಣವಾಗಿದೆ. ನಿಸರ್ಗವನ್ನು ಅನ್ವೇಷಿಸಲು ಮತ್ತು ವನ್ಯಜೀವಿಗಳ ನೋಡ ಬಯಸುವವರು ಮತ್ತು ಮೀಸಲು ಪ್ರದೇಶದಲ್ಲಿರುವ ಪಕ್ಷಿಗಳನ್ನು ವೀಕ್ಷಿಸಲು ಬಯಸುವವರು


Downloaded From:www.kpscvaani.com







ಈ ಸ್ಥಳಕ್ಕೆ ಭೇಟಿ ನೀಡಬಹುದು. ಬಂಡೀಪುರ ರಾಷ್ಟ್ರೀಯ ಉದ್ಯಾನವನ ಮತ್ತು ಹುಲಿ ಸಂರಕ್ಷಿತ ಪ್ರದೇಶದಲ್ಲಿ ಟ್ರೆಕ್ಕಿಂಗ್ ಮತ್ತು ಕ್ಯಾಂಪಿಂಗ್ ಮಾಡಲು ಹಲವು ಸ್ಥಳಗಳಿವೆ. ಕಣ್ಣು ಹಾಯಿಸಿದುದ್ದಕ್ಕೂ ಹಸಿರು ತುಂಬಿದ ನಿಸರ್ಗ. ಬಂಡೀಪುರ ಹುಲಿಗಳ ಆವಾಸ ಸ್ಥಾನ. ಇವುಗಳನ್ನು ಹೊರತು ಪಡಿಸಿದರೆ ಕಾಡಾನೆ, ಕಾಡುಕೋಣ, ಗುಂಪುಗುಂಪಾಗಿ ಓಡುವ ಜಿಂಕೆಗಳು, ಸಾರಂಗಗಳು, ಕರಡಿ ಸೇರಿದಂತೆ ಹಲವು ಪ್ರಾಣಿಗಳು, ಪಕ್ಷಿಗಳು ಇಲ್ಲಿ ಕಾಣಲು ಸಿಗುತ್ತವೆ. ಅಷ್ಟೇ ಅಲ್ಲದೆ ಅವು ಸ್ವಚ್ಛಂದವಾಗಿ ಓಡಾಡುತ್ತಾ ನೋಡುಗರನ್ನು ರೋಮಾಂಚನಗೊಳಿಸುತ್ತವೆ.

ಪ್ರತಿವರ್ಷ ಅಂದಾಜು 1 ರಿಂದ 1.5 ಲಕ್ಷ ಮಂದಿ ಪ್ರವಾಸಿಗರು ಸಫಾರಿ ಮೂಲಕ ಬಂಡೀಪುರವನ್ನು ವೀಕ್ಷಣೆ ಮಾಡುತ್ತಾರೆ. ಪ್ರವಾಸಿಗರು ಸಫಾರಿಯಲ್ಲಿ ಕಂಡು ಬರುವ ದೃಶ್ಯಗಳನ್ನು ಸೆರೆ ಹಿಡಿದು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡುವುದು ಜನಪ್ರಿಯವಾಗುತ್ತಿರುವುದರಿಂದ ಇಲ್ಲಿಗೆ ಬರುವವರ ಸಂಖ್ಯೆಯೂ ಹೆಚ್ಚಾಗಿದೆ. ಜೊತೆಗೆ ಬಂಡೀಪುರದ ಸುಂದರ ದೃಶ್ಯಗಳನ್ನು ನೋಡಿದವರು ಮತ್ತು ಅರಣ್ಯದಲ್ಲಿ ರಸಮಯ ಕ್ಷಣಗಳನ್ನು ಕಳೆದವರು ತಮ್ಮ ಅನುಭವವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಡುತ್ತಿರುವುದರಿಂದಾಗಿ ಜನ ಆಕರ್ಷಣೆಗೊಳಗಾಗುತ್ತಿದ್ದಾರೆ. ಜತೆಗೆ ವಿದೇಶಿಗರು ಇತ್ತ ಧಾವಿಸುತ್ತಿರುವುದು ಬಂಡೀಪುರದ ಖ್ಯಾತಿಗೆ ಹಿಡಿದ ಕನ್ನಡಿಯಾಗಿದೆ. ವರ್ಷದ ಮೊದಲ ತಿಂಗಳು ಜನವರಿಯಲ್ಲಿ ಸಾಲು ಸಾಲು ರಜೆಗಳಿದ್ದ ಕಾರಣ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದ್ದಾರೆ.

**ಪ್ರವಾಸಿಗರ ಸುರಕ್ಷತೆಗಾಗಿ ಒಂದು ಕೋಟಿ ರೂ. ವಿಮೆ:**

ಸಫಾರಿ ಸಂದರ್ಭದಲ್ಲಿ ಪ್ರವಾಸಿಗರ ವಾಹನದ ಮೇಲೆ ಕಾಡು ಪ್ರಾಣಿಗಳು ದಾಳಿ ನಡೆಸಿ ಅವಘಡ ಸಂಭವಿಸಿದಲ್ಲಿ, ವಿಮೆ ಪರಿಹಾರ ನೀಡಲು ಅರಣ್ಯ ಇಲಾಖೆ ಮುಂದಾಗಿದೆ. ಸಫಾರಿ ಸಂದರ್ಭದಲ್ಲಿ ಆನೆ ವಾಹನವನ್ನು ಹಿಮ್ಮೆಟ್ಟಿಸುವುದು, ಹುಲಿ, ಚಿರತೆ ಇತರೆ ಪ್ರಾಣಿಗಳು ಎದುರುಗೊಳ್ಳುವ ಅಥವಾ ಸಫಾರಿ ವಾಹನಗಳ ಮೇಲೇರುವ ಆಕಸ್ಮಿಕ ಘಟನೆಗಳು ಕೆಲವು ಸಂದರ್ಭದಲ್ಲಿ ನಡೆಯುವ ಸಾಧ್ಯತೆ ಇರುತ್ತದೆ. ಹೀಗಾಗಿ ಅವಘಡ ಸಂಭವಿಸಿದರೆ ವಿಮೆ ಪರಿಹಾರ ನೀಡಲು ಅರಣ್ಯ ಇಲಾಖೆ ನಿರ್ಧಾರ ಮಾಡಿದೆ. ಸಂರಕ್ಷಿತ ಪ್ರದೇಶದ ಆಡಳಿತವು ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿಯಲ್ಲಿ ವಿಮಾ ಪಾಲಿಸಿ ಮಾಡಿಸಿದೆ. ಇದೀಗಾ ವಿಮೆ ಅವಧಿ ಆರಂಭಗೊಂಡಿದ್ದು, 2024ರ ನ.23ಕ್ಕೆ ಅವಧಿ ಮುಗಿಯಲಿದೆ.

ಈಗಾಗಲೇ ಕಳ್ಳಬೇಟೆ ತಡೆ ಶಿಬಿರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ ವಿಮೆ ಸೌಲಭ್ಯ ಕಲ್ಪಿಸಲಾಗಿದೆ. ಕಾಡು ಪ್ರಾಣಿಗಳ ದಾಳಿಯಿಂದ ಸಾವನ್ನಪ್ಪಿದರೆ ಸಿಬ್ಬಂದಿಯ ಕುಟುಂಬಕ್ಕೆ 30 ಲಕ್ಷ ರೂಪಾಯಿ ವಿಮೆ ಪರಿಹಾರವನ್ನು ನೀಡಲಾಗುತ್ತದೆ.

ಬಂಡೀಪುರಕ್ಕೆ ಆಗಮಿಸುವ ಪ್ರವಾಸಿಗರೆಲ್ಲರಿಗೂ ಈ ವಿಮಾ ಸೌಲಭ್ಯ ಅನ್ವಯವಾಗಲಿದೆ. ಈ ಯೋಜನೆಗೆ ಅರ್ಹರಾಗಲು ಪ್ರತ್ಯೇಕ ನೋಂದಣಿ ಅಗತ್ಯ ಇಲ್ಲ. ಸಫಾರಿಗಾಗಿ ಪಡೆದಿರುವ ಟಿಕೆಟ್ ಇದ್ದರೆ ಈ ವಿಮಾ ಸೌಲಭ್ಯಕ್ಕೆ ಪ್ರವಾಸಿಗರು ಅರ್ಹರಾಗುತ್ತಾರೆ. ಕಾಡಿನೊಳಗೆ ಪ್ರಾಣ ಹಾನಿ ಸಂಭವಿಸಿದರೆ ಅರಣ್ಯ ಇಲಾಖೆಯಿಂದ ಆರ್ಥಿಕ ನೆರವು ಸಿಗಲಿದೆ ಎಂದು ಬಂಡೀಪುರದ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕ್ಷೇತ್ರ ನಿರ್ದೇಶಕರಾದ ಡಾ.ಪಿ.ರಮೇಶ್ ಕುಮಾರ್ ಅವರು ತಿಳಿಸಿದ್ದಾರೆ.

ಸಫಾರಿ ಸಂದರ್ಭದಲ್ಲಿ ಅಚಾತುರ್ಯ ಘಟನೆಯಿಂದ ಪ್ರಾಣ ಹಾನಿ ಸಂಭವಿಸಿದರೆ ಅಥವಾ ಸಫಾರಿ ವೇಳೆ ಕಾಡು ಪ್ರಾಣಿಗಳ ದಾಳಿಯಿಂದ ಮೃತಪಟ್ಟರೆ 1 ಕೋಟಿ ರೂಪಾಯಿ ಆರ್ಥಿಕ ನೆರವು ಸಿಗಲಿದೆ.



Downloaded From:www.kpscvaani.com



# ಸಿದ್ದಿ ಮಹಿಳೆಯರ ಹೋಂ ಸ್ಟೇನಲ್ಲಿ ಅರಳಿರುವ ಗುರ್ಗೆಕಟ್ಟೆ ಹೂ

**ಕಾರವಾರ ಜಿಲ್ಲೆಯ ಸಿದ್ದಿ ಮಹಿಳೆಯರೇ ನಡೆಸುವ ರಾಜ್ಯದ ಮೊಟ್ಟ ಮೊದಲ ಹೋಂ ಸ್ಟೇನಲ್ಲಿ ಈಗ 'ಗುರ್ಗೆಕಟ್ಟೆ ಹೂ ಮತ್ತು ಡಮಾಮಿ' ಸಂಸ್ಕೃತಿ ಅರಳಿದೆ.**

ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಈ ಸಲ ಗುರ್ಗೆಕಟ್ಟೆ ಹೂ ಊರಂಚಿನ  ಕಾಡಲ್ಲಿ ಹಾಗೂ ಅರಣ್ಯ ಭಾಗದಲ್ಲಿ ಹೆಚ್ಚು ಅರಳಿದೆ. ಮೂರು ವರ್ಷಗಳಿಗೆ ಒಮ್ಮೆ ಗುರ್ಗೆಕಟ್ಟೆ  ಗಿಡ ಹೂ ಬಿಡುವುದು ವಿಶೇಷ. ಈ ಗುರ್ಗೆ ಹೂ ಜೇನು ಹುಳುವಿಗೆ ತುಂಬಾ ಇಷ್ಟ. ಈ ಹೂವಿಂದ ಮಧು ಸಂಗ್ರಹಿಸುವಲ್ಲಿ ಹೆಜ್ಜೇನು ಮೊದಲ ಸ್ಥಾನದಲ್ಲಿದ್ದರೆ, ತುಡುವೆ ಜೇನುಹುಳುಗಳದು ಎರಡನೇ ಸ್ಥಾನ. ಎರಡೂ ಪ್ರಬೇಧದ ಜೇನುಹುಳುಗಳು  ಗುರ್ಗೆಕಟ್ಟೆ ಹೂ ನಿಂದ ಮಧುವನ್ನು  ಸಂಗ್ರಹಿಸುತ್ತವೆ.

ಈ ಹೂವಿನ ಮಕರಂದದಿಂದ ಬರುವ ಜೇನು ತುಪ್ಪ ಉತ್ಕೃಷ್ಟವಾದುದು ಎಂಬ ನಂಬಿಕೆ ಸಿದ್ದಿ ಸಮುದಾಯದ್ದು. ಡಮಾಮಿ ಸಮುದಾಯದ ಮನೆ, ಗುರ್ಗೆ ಹೂ, ತುಡುವೆ ಜೇನು ಈ  ಮೂರು ಒಂದಡೆ ಇರುವ ಅಪರೂಪದ ದೃಶ್ಯ ನಮಗೆ ಕಾಣಲು ಸಿಕ್ಕಿದ್ದು ಯಲ್ಲಾಪುರ ತಾಲೂಕಿನ ಇಡಗುಂದಿ ಪಂಚಾಯತ್ ವ್ಯಾಪ್ತಿಯ ಲಿಂಗದಳ್ಳಿಯಲ್ಲಿ. ಲಿಂಗದಳ್ಳಿ ಪುಟ್ಟ ಗ್ರಾಮ. ಇಲ್ಲಿನ ನಿಸರ್ಗ ಸ್ಪರ್ಶ ಸ್ತ್ರೀ ಶಕ್ತಿ ಸಂಘ ರಾಜ್ಯದ ಮೊಟ್ಟ ಮೊದಲ ಹೋಂ ಸ್ಟೇ ನಡೆಸಲು ಅಣಿಯಾಗಿದೆ.

ಸಿದ್ದಿ ಸಮುದಾಯದ  ಮಹಿಳೆಯರು ಪ್ರಧಾನವಾಗಿದ್ದುಕೊಂಡು ಸಿದ್ದಿ ಸಮುದಾಯ ಮನೆಯನ್ನು ಎನ್ ಆರ್ ಎಲ್ ಎಮ್ ಯೋಜನೆಯ ಸಹಾಯ ಪಡೆದು, ಪ್ರಕೃತಿ ತಾಣದಲ್ಲಿ ಸಿದ್ದಿ ಸಮುದಾಯದ ಹೋಂ ಸ್ಟೇ

ಚಿತ್ರ – ಲೇಖನ :
ನಾಗರಾಜ್ ಹರಪನಹಳ್ಳಿ

ಪ್ರವಾಸೋದ್ಯಮದ ಹೊಸ ಆಯಾಮವನ್ನು ಸಿದ್ದಿ ಸಮುದಾಯದ ಮಹಿಳಾ ಸದಸ್ಯರ ಕೈಗೆ ಇಡಲಾಗಿದೆ. ಸಿದ್ದಿಗಳ ಆರ್ಥಿಕ ಶಕ್ತಿ ವೃದ್ಧಿಸಿ, ಅವರನ್ನು ಸಬಲೀಕರಣದತ್ತ ಕರೆದೊಯ್ಯಲಾಗುತ್ತಿದೆ.

– ಪ್ರೇಮಾ ಶಾಸ್ತ್ರಿ, ನಿಸರ್ಗ ಸ್ಪರ್ಶ ಸ್ತ್ರೀಶಕ್ತಿ ಒಕ್ಕೂಟದ ಮುಖ್ಯಸ್ಥೆ.


Downloaded From:www.kpscvaani.com






ನಿರ್ಮಾಣವಾಗಿದೆ. 50 ಲಕ್ಷ ರೂ. ಸಹಾಯಧನದಲ್ಲಿ ನಾಲ್ಕು ಕಾಟೇಜ್ ಹಾಗೂ ಒಂದು ಅಡುಗೆ ಮನೆ, ಡೈನಿಂಗ್ ಹಾಲ್ ನಿರ್ಮಿಸಲಾಗಿದೆ. ನರೇಗಾದಲ್ಲಿ ರಸ್ತೆ ಹಾಗೂ ಇತರೆ ಮೂಲಭೂತ ಸೌಕರ್ಯ ಕಲ್ಪಿಸಲಾಗಿದೆ. ತೋಟಗಾರಿಕೆ ಇಲಾಖೆಯ ನೆರವಿನಲ್ಲಿ ಹೂದೋಟ, ಕಾಟೇಜ್ ಸುತ್ತ ಹುಲ್ಲಿನ ಲಾನ್ ಬೆಳಸಿ ಸೌಂದರ್ಯೀಕರಣ ಮಾಡಲಾಗಿದೆ.

ಇದು ಹೋಂ ಸ್ಟೇ ಮಾತ್ರವಲ್ಲ, ಸಂಶೋಧನಾ ಮನಸ್ಸಿನವರಿಗೆ ಮಾಹಿತಿ ಕೇಂದ್ರವು ಆಗಿ ಇದು ಕೆಲಸ ಮಾಡುವಂತೆ ಇದನ್ನು ರೂಪಿಸಲಾಗಿದೆ. ರಾಜ್ಯ, ದೇಶ ಮತ್ತು ಹೊರ ದೇಶಗಳ ಪ್ರವಾಸಿಗರನ್ನು, ಚಾರಣ ಪ್ರಿಯರನ್ನು ಸೆಳೆಯಲು ಯೋಜನೆ ಹಾಗೂ ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಲಾಗಿದ್ದು, ಇಲ್ಲಿನ 15 ಜನರ ಮಹಿಳಾ ತಂಡಕ್ಕೆ ತರಬೇತಿ ಸಹ ನೀಡಲಾಗಿದೆ.

ಸಿದ್ದಿ ಜನಾಂಗದ ಮಾಹಿತಿ, ಅವರ ಹೋರಾಟದ ಬದುಕು, ಅವರಲ್ಲಿ ಮೂಡಿರುವ ಶಿಕ್ಷಣದ ಅರಿವು, ಸರ್ಕಾರದ ನೆರವು, ಸಿದ್ದಿ ಸಮುದಾಯದವರು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿರುವ ಸಾಧನೆ, ಅವರ ಕಾಡಿನ ಸಂಬಂಧ, ಅವರ ಕೃಷಿ ಮಾಹಿತಿ, ಹಾಗೂ ಸಿದ್ದಿ ಸಮುದಾಯದ ಉಡುಗೆ, ತೊಡುಗೆ, ಊಟ, ಹಾಡು, ಅವರ ಡಾಮಾಮಿ ನೃತ್ಯ ಪ್ರದರ್ಶನ ಮಾಡುವ ಮೂಲಕ ಪ್ರವಾಸೋದ್ಯಮದ ಭಿನ್ನ ಆಯಾಮ ಒಂದನ್ನು ಹೊರ ಜಗತ್ತಿಗೆ ದಾಖಲಿಸಲು ಮುಂದಾಗಿದೆ.



ಇತ್ತೀಚೆಗೆ ಪತ್ರಕರ್ತ ಗೆಳೆಯರೊಂದಿಗೆ, ಜಿಲ್ಲೆಯ ವಾರ್ತಾಧಿಕಾರಿ ಶಿವಕುಮಾರ್ ಅವರ ಜೊತೆ ಲಿಂಗದಳ್ಳಿಗೆ ಭೇಟಿ ನೀಡಿದ್ದೆವು. ಆಗ ಸಿದ್ದಿ ಸಮುದಾಯ ಹೊಸ ಲೋಕ ನಮ್ಮೆದರು ತೆರೆದು ಕೊಂಡಿತು. ಮಂಜು ಸಿದ್ದಿ ತುಡುವೆ ಜೇನಿನ ಜೀವನ ಕ್ರಮ ವಿವರಿಸಿ, ಮರದ ಪೊಟರೆಗಳಲ್ಲಿ ಅದು ಜೇನುಗೂಡು ಕಟ್ಟಿ, ಮಧು ಸಂಗ್ರಹಿಸುವ ಬಗೆ ವಿವರಿಸಿದರು. ಲಲಿತಾ ಸಿದ್ದಿ, ವೀಣಾ ಸಿದ್ದಿ ಕಾಡು ಮಲ್ಲಿಗೆ, ಕಾಡು ಕನಕಾಂಬರದ ಮಾಹಿತಿ ನೀಡಿದರು. ಸಂಪಿಗೆ ಮರದ ಕಾಯಿಯನ್ನು ಸಹ ತೋರಿಸಿದ್ರು.

ಚಿಗಳಿ (ಕೆಂಪು ಇರುವೆ) ಗೂಡು ಕಟ್ಟುವ ಬಗೆ ಹಾಗೂ ಅದರ ಚಟ್ನಿ ಮಾಡುವ ವಿಧಾನವನ್ನು ಮಂಜು ಸಿದ್ದಿ, ವೀಣಾ ಸಿದ್ದಿ, ಲಲಿತಾ ಸಿದ್ದಿ ವಿವರಿಸಿದರು. ನಮ್ಮೆದುರೇ ಚಿಗಳಿಯ ಗೂಡು ತೆಗೆದು ತೋರಿಸಿದರು. ಒಂದರೆಡು ಚಿಗಳಿ ಕಚ್ಚಿದರೂ ಅವರು ಏನೂ ಆಗೇ ಇಲ್ಲ ಎಂಬಂತೆ ಇದ್ದರು.

ನಂತರ ಸಿದ್ದಿಗಳ ಸಂಪ್ರದಾಯಿಕ ಊಟವೂ ಅಯಿತು. ಹೇಮಾ ಸಿದ್ದಿ ನಮ್ಮಲ್ಲಿ ವಿಶ್ವಾಸ ತುಂಬಿ ಚಿಗಳಿ ಚಟ್ನಿ ತಿನ್ನಿಸಿದರು. ಅದರ ರುಚಿ ಲೌಲಿಯಾಗಿತ್ತು. ಕೊನೆಗೆ ಡಮಾಮಿ ನೃತ್ಯ ನೋಡಿದೆವು. ಈ ನೃತ್ಯಕ್ಕೆ ಮಂಜು ಸಿದ್ದಿ ವಾದ್ಯ ಬಾರಿಸಿದರೆ, ಸವಿತಾ, ಸುಧಾ, ವತ್ಸಲಾ, ಲಲಿತಾ, ಹೇಮಾ ಮತ್ತು ತ್ರಿವೇಣಿ ಅವರು ನೃತ್ಯದಲ್ಲಿ ಭಾಗವಹಿಸಿದ್ದರು. ಈ ಹೋಂ ಸ್ಟೇಗೆ ಭೇಟಿ ನೀಡಿದ್ದರಿಂದ ನಮಗೆ ಸಿದ್ದಿ ಜನಾಂಗದ ಸಂಪ್ರದಾಯವು ಪರಿಚಯವಾಯಿತು.

ಲಿಂಗದಳ್ಳಿಯಲ್ಲಿ ಇದೀಗ ಸಿದ್ದಿ ಸಮುದಾಯ ಹೊಸ ಲೋಕ ತೆರೆದು ಕೊಂಡಿದೆ. ಮಂಜು ಸಿದ್ದಿ ಅವರು ಡಮಾಮಿ ಸಮುದಾಯದ ಮನೆ (ಕಾಟೇಜ್) ನಿರ್ಮಾಣಕ್ಕೆ ತನ್ನ ಭೂಮಿಯನ್ನು ಎನ್ ಆರ್ ಎಂ ಎಲ್ ಯೋಜನೆಗೆ ಐದು ವರ್ಷ ಲೀಜ್ ಮೇಲೆ ಕೊಟ್ಟಿದ್ದಾರೆ. ಇಲ್ಲಿಗೆ ಬರುವ ಪ್ರವಾಸಿಗರಿಗೆ ಮಂಜು ಸಿದ್ದಿ ಅವರು ಈ ಕಾಡಿನ ಬಗ್ಗೆ ಮತ್ತು 500 ವರ್ಷಗಳ ಹಿಂದೆ ಸಿದ್ದಿಗಳು ದಕ್ಷಿಣ ಆಫ್ರಿಕಾದ ಪೂರ್ವ ಭಾಗದಿಂದ ಗೋವಾ, ಕರ್ನಾಟಕದಲ್ಲಿ ಬಂದು ನೆಲೆ ನಿಂತ ಬಗ್ಗೆ ಮಾಹಿತಿ ನೀಡುತ್ತಾರೆ.

ಯಾವುದಾದರು ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಭೇಟಿ ನೀಡಿದಲ್ಲಿ, ಸಿದ್ದಿ ಮಹಿಳೆಯೇ ನಡೆಸುತ್ತಿರುವ ಹೋಂ ಸ್ಟೇ ನಲ್ಲಿ ಒಂದು ದಿನ ಕಳೆದು ಬನ್ನಿ. ಖಂಡಿತವಾಗಿಯೂ ನಿಮಗೆ ಮತ್ತು ನಿಮ್ಮ ಮಕ್ಕಳಿಗೆ ಸಿದ್ದಿ ಜನಾಂಗದ ಸಂಪ್ರದಾಯ ಪರಿಚಯವಾಗುತ್ತದೆ.



Downloaded From:www.kpscvaani.com



# ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಸಕಲ ಸಿದ್ಧತೆ

**ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟನೆಗೆ ಸರ್ಕಾರದ ವತಿಯಿಂದ ಸಕಲ ಸಿದ್ಧತೆಯನ್ನು ಮಾಡಿಕೊಳ್ಳಲಾಗಿದೆ.**

ಹರೀಶ್ ಬಸವರಾಜ್

15th Biffes

**ಭಾ**ರತದ ಪ್ರತಿಷ್ಠಿತ ಚಿತ್ರೋತ್ಸವಗಳಲ್ಲಿ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವು ಒಂದಾಗಿದೆ. ಕಳೆದ 14 ವರ್ಷಗಳಿಂದ ಯಶಸ್ವಿ ಚಿತ್ರೋತ್ಸವಗಳು ನಡೆದಿದ್ದು, ಈಗ 15ನೇ ಚಿತ್ರೋತ್ಸವಕ್ಕೆ ವೇದಿಕೆ ಸಜ್ಜಾಗಿದೆ. ಇದೇ ಫೆಬ್ರವರಿ 29 ರಿಂದ ಮಾರ್ಚ್ 7 ರವರೆಗೂ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಅದ್ದೂರಿಯಾಗಿ ನಡೆಸಲು ಸರಕಾರವು ತೀರ್ಮಾನಿಸಿದೆ.

ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ಈ ಕುರಿತಂತೆ ಕರ್ನಾಟಕ ಚಲನಚಿತ್ರ ಅಕಾಡೆಮಿ ಸಂಘಟನಾ ಸಮಿತಿ ಸಭೆಯ ನಡೆದಿದ್ದು, ಅಲ್ಲಿಯೇ ಚಿತ್ರೋತ್ಸವದ ಸಂಪೂರ್ಣ ರೂಪು ರೇಷೆಗಳನ್ನು ಸಿದ್ಧಪಡಿಸಲಾಗಿದೆ. ಫೆಬ್ರವರಿ 29 ರ ಸಂಜೆ ಉದ್ಘಾಟನೆಯನ್ನು ವಿಧಾನಸೌಧದ ಮುಂಭಾಗದಲ್ಲಿ ಏರ್ಪಡಿಸಲಾಗಿದ್ದು, ಮುಖ್ಯಮಂತ್ರಿಗಳು ಚಿತ್ರೋತ್ಸವವನ್ನು ನೆರವೇರಿಸಲಿದ್ದಾರೆ.

ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ದೇಶ ವಿದೇಶಗಳಲ್ಲಿ ಮನ್ನಣೆ ಪಡೆದಿರುವ ಚಿತ್ರೋತ್ಸವವಾಗಿದೆ. ಹೆಚ್ಚಾಗಿ ವಿದೇಶಿ ಚಿತ್ರಗಳನ್ನು ಪ್ರದರ್ಶಿಸಲಾಗುವುದಾದರೂ ಕನ್ನಡ ಸೇರಿದಂತೆ ದೇಶದ ವಿವಿಧ ಭಾಷಾ ಚಿತ್ರಗಳಿಗೂ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ. ಮಾರ್ಚ್ 7 ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ಅಂದು ರಾಜ್ಯಪಾಲರು ಪ್ರಶಸ್ತಿಗಳನ್ನು ವಿತರಿಸಲಿದ್ದಾರೆ.

ಬೆಂಗಳೂರು
ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ
Bengaluru
International Film Festival
29 FEB - 07 MAR | 2024



Downloaded From:www.kpscvaani.com



ಕೋಮುವಾದ, ಶಾಂತಿ, ಸಮಾನತೆ, ಲಿಂಗ ಸಮಾನತೆ, ಸೌಹಾರ್ದತೆ, ಮಾನವೀಯತೆಯ ಸಂದೇಶಗಳು ಸಮಾಜಕ್ಕೆ ತಲುಪಬೇಕು. ಬಹುತ್ವಕ್ಕೆ ಹೆಚ್ಚು ಒತ್ತು ಕೊಡುವ ರೀತಿಯಲ್ಲಿ ಈ ಬಾರಿ ಚಲನಚಿತ್ರೋತ್ಸವ ನಡೆಯಲಿದೆ.

**ಓರಾಯನ್ ಮಾಲ್‌ನಲ್ಲಿ ಚಿತ್ರೋತ್ಸವ**

ಬೆಂಗಳೂರಿನ ರಾಜಾಜಿನಗರದ ಓರಾಯಾನ್ ಮಾಲ್‌ನ 'ಪಿವಿಆರ್ ಸಿನಿಮಾ'ದ 11 ಪರದೆಗಳು, ಚಾಮರಾಜಪೇಟೆಯ ಕಲಾವಿದರ ಸಂಘದ ಕಟ್ಟಡದಲ್ಲಿ ಇರುವ ಡಾ. ರಾಜ್‌ಕುಮಾರ್ ಭವನ ಮತ್ತು ಬನಶಂಕರಿ 2ನೇ ಹಂತದ ಸುಚಿತ್ರಾ ಫಿಲ್ಮ್ ಸೊಸೈಟಿಯಲ್ಲಿ ಮಾರ್ಚ್ 1 ರಿಂದ ಸಿನಿಮಾಗಳ ಪ್ರದರ್ಶನ ಆರಂಭವಾಗಲಿದೆ. ಅಂದಾಜು 50ಕ್ಕೂ ಹೆಚ್ಚು ದೇಶಗಳ 200ಕ್ಕೂ ಅಧಿಕ ಸಿನಿಮಾಗಳು ಬೇರೆ ಬೇರೆ ವಿಭಾಗಗಳಲ್ಲಿ ಪ್ರದರ್ಶನ ಆಗಲಿದೆ.

**ಬೆಂಗಳೂರು ಚಲನಚಿತ್ರೋತ್ಸವದ ವಿಭಾಗಗಳು:**

ಸ್ಪರ್ಧಾ ವಿಭಾಗ: ಇದರಲ್ಲಿ ಮೂರು ವಿಭಾಗಗಳು ಇವೆ. ಏಷ್ಯಾ ಸಿನಿಮಾ ವಿಭಾಗ, ಭಾರತೀಯ ಸಿನಿಮಾಗಳ ವಿಭಾಗ ಹಾಗೂ ಕನ್ನಡ ಸಿನಿಮಾ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದೆ. ಉಳಿದಂತೆ, ಸಮಕಾಲೀನ ವಿಶ್ವ ಸಿನಿಮಾ, ಕನ್ನಡ ಜನಪ್ರಿಯ ಮನರಂಜನಾ ಸಿನಿಮಾಗಳು, ವಿಮರ್ಶಕರ ವಾರ (ಅಂತಾರಾಷ್ಟ್ರೀಯ ಚಲನಚಿತ್ರ ವಿಮರ್ಶಕರ ಒಕ್ಕೂಟದ ಆಯ್ಕೆಯ ಸಿನಿಮಾಗಳು), ಬಯೋಪಿಕ್‌ಗಳು, ದೇಶ ಕೇಂದ್ರಿತ ಸಿನಿಮಾ, ದೇಶದಲ್ಲಿ ಹೆಚ್ಚು ಪರಿಚಿತವಲ್ಲದ ಉಪ ಭಾಷೆಗಳಲ್ಲಿ ತಯಾರಾದ ಚಿತ್ರ ಸೇರಿದಂತೆ ಅನೇಕ ವಿಭಾಗಗಳಲ್ಲಿ ಸಿನಿಮಾ ಪ್ರದರ್ಶನ ನಡೆಯಲಿದೆ.




ಪುನರಾವಲೋಕನ ವಿಭಾಗ: ಇದರಲ್ಲಿ ಮೃಣಾಲ್ ಸೇನ್ ಅವರ ಚಿತ್ರಗಳು ಪ್ರದರ್ಶನ ಆಗಲಿದೆ. ಶತಮಾನೋತ್ಸವ ನೆನಪು ಹಾಗೂ ಶ್ರದ್ಧಾಂಜಲಿ ವಿಭಾಗದಲ್ಲಿ ಸಂಗೀತ ನಿರ್ದೇಶಕ ವಿಜಯ್ ಭಾಸ್ಕರ್, ನಟ ಸಾಬು ದಸ್ತಗೀರ್, ನಿರ್ದೇಶಕ ಭಗವಾನ್, ನಟಿ ಲೀಲಾವತಿ, ನಿರ್ಮಾಪಕ ಸಿ.ವಿ.ಶಿವಶಂಕರ ಗಾಯಕಿ ವಾಣಿ ಜಯರಾಂ ಮುಂತಾದವರಿಗೆ ಶ್ರದ್ಧಾಂಜಲಿ ಸಲ್ಲಿಕೆಯಾಗಲಿದ್ದು, ಜತೆಗೆ ಅವರ ಸಿನಿಮಾಗಳ ಪ್ರದರ್ಶನವಾಗಲಿದೆ.

ಹಲವು ಕಾರ್ಯಾಗಾರ, ಉಪನ್ಯಾಸಗಳು'ಕನ್ನಡ ಸಿನಿಮಾ 90', 'ಕರ್ನಾಟಕ 50' ವಿಭಾಗದಲ್ಲಿ ಆಯ್ದ ಚಿತ್ರಗಳ ಪ್ರದರ್ಶನ ನಡೆಯಲಿದೆ.

ಮಾನವ ಹಕ್ಕು ಮತ್ತು ಮೌಲ್ಯಗಳನ್ನು ಪ್ರತಿಪಾದಿಸುವ ಸಾಕ್ಷ್ಯಚಿತ್ರಗಳ ವಿಭಾಗ ಕೂಡ ಇರಲಿದೆ. ಈಗಾಗಲೇ ವಿಶ್ವದ ಪ್ರತಿಷ್ಠಿತ ಅಂತಾರಾಷ್ಟ್ರೀಯ ಸಿನಿಮೋತ್ಸವಗಳಲ್ಲಿ ಪ್ರದರ್ಶನ ಕಂಡಿರುವ ಚಿತ್ರಗಳು 'ಸಮಕಾಲೀನ ವಿಶ್ವ ಸಿನಿಮಾ' ವಿಭಾಗದಲ್ಲಿ ಪ್ರದರ್ಶನವಾಗಲಿವೆ. ವೆಬ್‌ಸೈಟ್ https://www.biffes.org ಮೂಲಕ ಸಿನಿಮಾಗಳ ವಿವರಗಳು ಸಿಗಲಿದೆ.

ಸಿನಿಮಾ ಮಾಧ್ಯಮ ಮತ್ತು ಉದ್ಯಮಕ್ಕೆ ಸಂಬಂಧಿಸಿದ ತಜ್ಞರಿಂದ ಸಂವಾದ, ಉಪನ್ಯಾಸ ಹಾಗೂ ಕಾರ್ಯಾಗಾರಗಳು ಸಹ ಈ ಬಾರಿಯ ಚಿತ್ರೋತ್ಸವದಲ್ಲಿ ಇರಲಿದೆ. ಸಿನಿಮಾ ಸಂಕಲನ ಕಲೆ, ಕನ್ನಡ ಸಿನಿಮಾ–90, ಕರ್ನಾಟಕ–50 ಕುರಿತಂತೆ ಚರ್ಚೆ, ಚಿತ್ರಕಥೆ ರಚಿಸುವ ಸವಾಲುಗಳ ಬಗ್ಗೆ ಕಾರ್ಯಾಗಾರ ನಡೆಯಲಿದೆ. ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತರಾದ ವಿ.ಕೆ. ಮೂರ್ತಿ ಸ್ಮರಣಾರ್ಥ ವಿಶೇಷ ಉಪನ್ಯಾಸವನ್ನು ಇಟ್ಟುಕೊಳ್ಳಲಾಗಿದೆ.

ಸಿನಿಮಾದಲ್ಲಿ ಎಐ ತಂತ್ರಜ್ಞಾನದ ಬಳಕೆಯಿಂದ ಆಗುವ ಅನುಕೂಲ ಮತ್ತು ಅನಾನುಕೂಲದ ಬಗ್ಗೆಯೂ ಒಂದು ಸಂವಾದ ನಡೆಯಲಿದೆ. ಮೃಣಾಲ್ ಸೇನ್ ಜನ್ಮ ಶತಮಾನೋತ್ಸವ ಉಪನ್ಯಾಸ, ಚಲನಚಿತ್ರದಲ್ಲಿ ಸಂಗೀತದ ಕುರಿತು ಸಂವಾದ ನಡೆಯಲಿದೆ. ಸಿನಿಮಾಗಳಲ್ಲಿ ಮಾನವಹಕ್ಕು ಹಾಗೂ ಮೌಲ್ಯ ಪ್ರತಿಪಾದನೆ ಕುರಿತು ಗೋಷ್ಠಿ ಇರಲಿದೆ. ಕಲೆ, ಚಲನಚಿತ್ರ ವಿನ್ಯಾಸ ಕುರಿತ ಕಾರ್ಯಾಗಾರ, ಧ್ವನಿ ವಿನ್ಯಾಸ ಕಾರ್ಯಾಗಾರ, ಸಿನಿಮಾಗಳಲ್ಲಿ ಮಹಿಳಾ ಸಂವೇದನೆ ಕುರಿತು ಚರ್ಚೆ ಹೀಗೆ ಈ ಬಾರಿಯ ಬೆಂಗಳೂರು ಚಿತ್ರೋತ್ಸವದಲ್ಲಿ ವಿವಿಧಿ ಕಾರ್ಯಕ್ರಮಗಳು ನಡೆಯಲಿದೆ.

**ನೋಂದಣಿ ಹೇಗೆ**

ಚಿತ್ರೋತ್ಸವದಲ್ಲಿ ಭಾಗವಹಿಸಲು ಬಯಸುವ ಪ್ರತಿನಿಧಿಗಳ ನೋಂದಣಿ ಕಾರ್ಯ ಫೆಬ್ರವರಿ 15 ರಿಂದ ಚಿತ್ರೋತ್ಸವದ ಜಾಲತಾಣದಲ್ಲಿ ಶುರುವಾಗಿದೆ. ಆಸಕ್ತರು ಚಿತ್ರೋತ್ಸವದ ವೆಬ್‌ಸೈಟ್‌ಗೆ ಹೋಗಿ, ನಿಯಮಗಳ ಪ್ರಕಾರ, ಶುಲ್ಕ ಪಾವತಿಸಿ ನೋಂದಣಿ ಮಾಡಿಕೊಳ್ಳಬಹುದು. ಸಾರ್ವಜನಿಕರಿಗೆ 800 ರೂಪಾಯಿ ಶುಲ್ಕ ಇದೆ. ಚಿತ್ರೋದ್ಯಮದ ಸದಸ್ಯರು, ಚಿತ್ರ ಸಮಾಜಗಳ ಸದಸ್ಯರು, ಹಿರಿಯ ನಾಗರಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ 400 ರೂ. ಶುಲ್ಕವಿದೆ. ನೋಂದಣಿ ಸಹಾಯಕ್ಕೆ 080–23493410 ಅಥವಾ 8904645529 ದೂರವಾಣಿ ಸಂಖ್ಯೆ ಹಾಗೂ biffesblr@gmail.com ಇ–ಮೇಲ್ ಮೂಲಕ ಸಂಪರ್ಕಿಸಬಹುದು. ■



Downloaded From:www.kpscvaani.com



# ರಾಜೇಶ್ವರಿ ಚಟರ್ಜಿ:

## ನಮ್ಮ ರಾಜ್ಯದ ಪ್ರಥಮ ಮಹಿಳಾ ಎಂಜಿನಿಯರ್

**ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಮ್ಮ ರಾಜ್ಯದ ಪ್ರಥಮ ಮಹಿಳಾ ಎಂಜಿನಿಯರ್ ಆದ ರಾಜೇಶ್ವರಿ ಚಟರ್ಜಿ ಅವರ ಸಾಧನೆಯ ಕುರಿತು ಈ ಲೇಖನವನ್ನು ಪ್ರಸ್ತುತ ಪಡಿಸಲಾಗಿದೆ.**

ಕೆ.ಎಸ್.ಸೋಮೇಶ್ವರ

**ಭಾ**ರತೀಯ ಮಹಿಳೆಯರು ಸಮಾಜದ ವಿವಿಧ ಸ್ತರಗಳಲ್ಲಿ ಸಾಧನೆ ಮಾಡಿರುವುದು ಹೊಸತೇನಲ್ಲ. ಈಗಿನ ಕಾಲದಲ್ಲಂತೂ ಇದು ಸಾಮಾನ್ಯವೆನಿಸಬಹುದು. ಆದರೆ, ಸ್ವಲ್ಪ ಅಂದರೆ ಒಂದು ಶತಮಾನಕ್ಕೂ ಹಿಂದೆ ಅವರುಗಳ ವಿಶಿಷ್ಠತೆ ಹೇಳುವಂತಹುದು. ಏಕೆಂದರೆ ಅಂದಿನ ಸಮಾಜ ಅವರ ವಿಷಯದಲ್ಲಿ ಒಂದು ರೀತಿಯ ಚೌಕಟ್ಟಿನಲ್ಲಿ ನೋಡ ಬಯಸುತ್ತಿತ್ತು. ಇದೆಲ್ಲ ಅಡೆ ತಡೆಗಳ ಮಧ್ಯೆ ತಮ್ಮತನವನ್ನು ತೋರಿದ ಅನೇಕ ಮಹಿಳೆಯರಿದ್ದಾರೆ. ಮಾರ್ಚ್ 8 ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಿನ್ನೆಲೆಯಲ್ಲಿ ನಮ್ಮ ರಾಜ್ಯದ ಒಬ್ಬ ಸಾಧಕಿಯ ಬಗೆಗೆ ಹೇಳುವ ಪ್ರಯತ್ನ ಇಲ್ಲಿದೆ. ಇವರ ಸಾಧನೆ ಅವರ ಕಾಲಕ್ಕೇ ಅಲ್ಲದೇ ಎಲ್ಲ ಕಾಲಕ್ಕೂ ಮಾದರಿ.

ಇಲ್ಲಿ ಹೇಳ ಹೊರಟಿರುವುದು ನಮ್ಮ ರಾಜ್ಯದ (ಅಂದಿನ ಮೈಸೂರು ರಾಜ್ಯ) ಪ್ರಥಮ ಮಹಿಳಾ ಎಂಜಿನಿಯರ್ ಎಂಬ ಹೆಗ್ಗಳಿಕೆಯೇ ಅಲ್ಲದೇ ಅನೇಕ ಸಾಧನೆಗಳ ಗರಿ ಮೂಡಿಸಿಕೊಂಡಿರುವ ರಾಜೇಶ್ವರಿ ಚಟರ್ಜಿಯವರ ಬಗೆಗೆ. ಈಕೆಯ ಜನನ 24 ನೇ ಜನವರಿ 1922 ರಲ್ಲಿ. ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಅವರ ಅಜ್ಜಿಯವರ ಒಂದು ವಿಶೇಷ ಆಂಗ್ಲ ಶಾಲೆಯಲ್ಲಿ ಮಾಡಿದರು. ನಂತರದಲ್ಲಿ ಇವರ ವಿದ್ಯಾಭ್ಯಾಸ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ. ಇಲ್ಲಿ ಇವರು ಗಣಿತ ಶಾಸ್ತ್ರದಲ್ಲಿ ಬಿ.ಎಸ್ಸಿ (ಆನರ್ಸ್) ಮತ್ತು ಎಂ. ಎಸ್ಸಿ ಮಾಡಿದ್ದಲ್ಲದೇ ಅದರಲ್ಲಿ ಮೊದಲಿಗರಾಗಿದ್ದರು. ಇವರ ಈ ಉತ್ತಮ ಸಾಧನೆಗೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಮತ್ತು ಎಂ.ಬಿ



Downloaded From:www.kpscvaani.com

ನಾರಾಯಣ ಅಯ್ಯಂಗಾರ್ ಪ್ರಶಸ್ತಿ ಮತ್ತು ವಾಲ್ಟರ ಮೆಮೊರಿಯಲ್ ಪ್ರಶಸ್ತಿಗೆ ಭಾಜನರಾದರು.

ಮುಂದೆ 1943 ರಲ್ಲಿ ಇವರ ಮುಂದಿನ ಹೆಜ್ಜೆ ಇಂಡಿಯನ್ ಇನಸ್ಟಿಟ್ಯೂಟ್ ಆಫ್ ಸೈನ್ಸ್ (ಐ.ಐ.ಎಸ್ ಸಿ) ಬೆಂಗಳೂರಿನಲ್ಲಿ ಅಲ್ಲಿನ ಎಲೆಕ್ಟ್ರಿಕಲ್ ಟೆಕ್ನಾಲಜಿ ವಿಭಾಗದ ಸಂಪರ್ಕ ವಿಭಾಗದಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಅಡಿಯಿರಿಸಿದರು. ನಂತರದಲ್ಲಿ ಸರ್. ಸಿ.ವಿ.ರಾಮನ್‌ರವರ ಕೈಕೆಳಗೆ ಕೆಲಸ ಮಾಡುವ ಅವಕಾಶವೂ ಇವರಿಗೆ ದೊರೆತಿತು. 1946 ರಲ್ಲಿ ಅಂದಿನ ದೆಹಲಿಯ ಕೇಂದ್ರ ಸರ್ಕಾರ ಇವರನ್ನು ಒಬ್ಬ ಉತ್ತಮ ವಿದ್ಯಾಥಿಯಾಗಿ ಗುರುತಿಸಿ ಇವರಿಗೆ ಹೊರ ದೇಶದಲ್ಲಿ ಮುಂದೆ ಓದಲು ಸಹಾಯಕವಾಗುವಂತೆ ಸ್ಕಾಲರ್‌ಶಿಪ್ ದೊರೆಯುವಂತೆ ಮಾಡಿತು. ಇವರು ಅಮೆರಿಕದ ಮಿಚಿಗನ್ ವಿಶ್ವ ವಿದ್ಯಾಲಯದ ಇಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಮಾಸ್ಟರ್ಸ್ ಪದವಿ ಪಡೆದು ಕೊಂಡರು. ಈ ಸಮಯದಲ್ಲಿ ನ್ಯಾಷನಲ್ ಯೂನಿವರ್ಸಿಟಿ ಆಫ್ ಮಿಚಿಗನ್‌ನಲ್ಲಿ ರೇಡಿಯೋ ಫ್ರೀಕ್ವೆನ್ಸಿ ಅಳತೆ ಮಾಡುವ ವಿಶೇಷ ಪ್ರಾಯೋಗಿಕ ತರಬೇತಿಯನ್ನೂ ಕೆಲ ಕಾಲ ಪಡೆದು ಕೊಂಡರು. ಸುಮಾರು 1953 ರಲ್ಲಿ ಪ್ರೊಫೆಸರ್ ವಿಲಿಯಮ್ ಗೌಲ್ಡ್ ಡೌ ಎಂಬುವರ ಮಾರ್ಗದರ್ಶನದಲ್ಲಿ ಪಿ.ಹೆಚ್.ಡಿ ಪದವಿ ಕೂಡ ಪಡೆದುಕೊಂಡರು.

ಭಾರತಕ್ಕೆ ಹಿಂದಿರುಗಿದ ನಂತರ ಐ.ಐ.ಎಸ್.ಸಿ, ಬೆಂಗಳೂರಿನ ಎಲೆಕ್ಟ್ರಿಕ್ ಕಮ್ಯುನಿಕೇಷನ್ ಎಂಜಿನಿಯರಿಂಗ್ ವಿಭಾಗದಲ್ಲಿ ಬೋಧನಾ ವಿಭಾಗದಲ್ಲಿ ಕೆಲಸ ಮಾಡಲು ಆರಂಭಿಸಿದರು. ಇದೇ ಸಮಯದಲ್ಲಿ ಅದೇ ವಿಭಾಗದಲ್ಲಿಯೇ ಕೆಲಸ ಮಾಡುತ್ತಿದ್ದ ಶಿಶಿರ್ ಕುಮಾರ ಚಟರ್ಜಿಯವರೊಂದಿಗೆ ಇವರ ವಿವಾಹವಾಯಿತು. ತದ ನಂತರದಲ್ಲಿ ಇವರಿಬ್ಬರೂ ಜೊತೆಯಾಗಿ ಮೈಕ್ರೋವೇವ್ ಬಗೆಗಿನ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಿದರು. ಇದು ಅವರಿಗಿದ್ದ ನಿಯಮಿತ ಹಣ ಮತ್ತು ದೇಶೀಯ ಉಪಕರಣಗಳ ಬಳಕೆಯಿಂದಲೇ ಇದು ಆರಂಭವಾಯಿತು.

ಮುಂದೆ ಪ್ರಾಧ್ಯಾಪಕಿ ಹುದ್ದೆಗೇರಿದ ಇವರು ಎಲೆಕ್ಟ್ರಿಕಲ್ ಕಮ್ಯುನಿಕೇಷನ್ ವಿಭಾಗದ ಮುಖ್ಯಸ್ಥರಾಗಿಯೂ ಕಾರ್ಯ ನಿರ್ವಹಿಸಿದರು. ಇವರ ಪಠ್ಯದ ಮುಖ್ಯ ವಿಷಯ ಎಲೆಕ್ಟ್ರೋ ಮ್ಯಾಗ್ನೆಟಿಕ್ ಥಿಯರಿ, ಎಲೆಕ್ಟ್ರಾನ್ ಟ್ಯೂಬ್ ಸರ್ಕ್ಯೂಟ್ ಮತ್ತು ಮೈಕ್ರೋವೇವ್ ಟೆಕ್ನಾಲಜಿ ಕುರಿತದ್ದಾಗಿತ್ತು. ಇವರು ತಮ್ಮ ಸಂಶೋಧನಾ ವಿಷಯಗಳಲ್ಲಿ ಬಹಳ ಆಸಕ್ತರಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಸಾಕಷ್ಟು ಪುಸ್ತಕಗಳನ್ನೂ ಬರೆದಿದ್ದಾರೆ.

ರಾಜೇಶ್ವರಿ ಚಟರ್ಜಿಯವರ ರಚನೆಗಳು :

- Elements of Microwave Engineering
- Antenna Theory and Practice
- A Thousand Streams : A Personal History
- Di electric and Di electric Loaded Antenna
- Advance Microwave Engineering - Special Advanced Topics
- Vasudhiva Kutumbakam: The Whole World Is but one Family : Real Stories of some women & men of India
- Antenna for Information Super Skyways : An Exposition on Outdoor & Indoor Wireless Antenna (by Perambur.S.Neelakanta & Rajeswart Chatarjee)



ಸೇವೆಯಿಂದ ನಿವೃತ್ತಿ ಪಡೆದ ನಂತರ ಇವರ ಚಟುವಟಿಕೆ ಭಾರತೀಯ ಮಹಿಳೆಯರ ಕುರಿತಾದ ಸಮಾಜ ಸೇವೆಯಾಗಿತ್ತು. ಇವರ ತಂದೆ ಬಿ.ಎಮ್.ಶಿವರಾಮಯ್ಯನವರು ನಂಜನಗೂಡಿನಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದರು. ತಾಯಿ ಕಮಲಮ್ಮ ದಾಸಪ್ಪ. ಈಕೆ ಕೂಡ ಆ ಕಾಲದಲ್ಲಿ ಮೈಸೂರು ಸಂಸ್ಥಾನದಲ್ಲಿನ ಕೆಲವೇ ಮಹಿಳಾ ಪದವೀಧರರಲ್ಲಿ ಒಬ್ಬರಾಗಿದ್ದರು. ಮಗಳು ಇಂದಿರಾ ಚಟರ್ಜಿಯವರು ಅಮೆರಿಕದ ನೆವಾಡ ವಿಶ್ವವಿದ್ಯಾಲಯದಲ್ಲಿನ ಎಲೆಕ್ಟ್ರಿಕಲ್ ಮತ್ತು ಬಯೋ ಮೆಡಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಪ್ರಾಧ್ಯಾಪಕಿಯಾಗಿ ಕೆಲಸ ಮಾಡುತ್ತಿದ್ದಾರೆ.

ರಾಜೇಶ್ವರಿ ಚಟರ್ಜಿಯವರ ವಿಶಿಷ್ಟ ಸಾಧನೆಗಳಿಗೆ ಕನ್ನಡಿಯಾಗಿ ಹಲವು ಪ್ರಶಸ್ತಿಗಳು ಅವರ ಮುಡಿಗೇರಿವೆ. ಅವುಗಳಲ್ಲಿ ಪ್ರಮುಖವಾದವೆಂದರೆ:

- Mountbaton prize for the best paper from the Institute of Electical & Radio Engineering (US)
- J.C.Bose Memorial award for the best research paper from Institute of Engineers
- Ram Lal Wadhwa Award for the best research & teaching work from Institute of Electronics & Telecommunication Engineering

ಇವರು ತಮ್ಮ ಪತಿಯೊಂದಿಗೆ ಆರಂಭಿಸಿದ ಮೈಕ್ರೋವೇವ್ ಎಂಜಿನಿಯರಿಂಗ್ ಸಂಸ್ಥೆ ಭಾರತದಲ್ಲೇ ಪ್ರಥಮವಾಗಿದೆ. ಇವರಿಬ್ಬರೂ ಮೈಕ್ರೋವೇವ್ ಟೆಕ್ನಾಲಜಿ ಮತ್ತು ಸ್ಯಾಟಲೈಟ್ ಕಮ್ಯುನಿಕೇಷನ್ ಬಗೆಗೆ ಒಂದು ಪಠ್ಯವಾಗಿ ಆರಂಭಿಸಿದರು. ಇದೂ ಸಹ ಭಾರತದಲ್ಲೇ ಮೊದಲನೆಯದಾಗಿದೆ. ಮೂರು ದಶಕಗಳಿಗೂ ಮೀರಿದ ಇವರ ಸೇವೆಯೊಂದಿಗೆ ಮೈಕ್ರೋವೇವ್ ಎಂಜಿನಿಯರಿಂಗ್‌ನಲ್ಲಿ ವಿಶೇಷ ಸ್ಥಾನವನ್ನು ಗಳಿಸಿದ್ದಾರೆ. ಇವರ ಸಂಶೋಧನೆಗಳು ಇಂದಿಗೂ ಸಹ ಪ್ರಸ್ತುತವಾಗಿವೆ. ಇದು ರಾಡಾರ್ ತಂತ್ರಜ್ಞಾನವೇ ಅಲ್ಲದೇ ರಕ್ಷಣಾ ತಂತ್ರಜ್ಞಾನ ಚಟುವಟಿಕೆಗಳಲ್ಲಿ ಡಿ.ಆರ್.ಡಿ.ಓ ಬಳಸಿಕೊಳ್ಳುತ್ತಿದೆ. ಇವರು ಬಿಟ್ಟು ಹೋಗಿರುವ ಸಾಧನೆಗಳನ್ನು ಅನುಕರಿಸಿ ಹಲವಾರು ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ಉತ್ತಮ ಸ್ಥಾನವನ್ನು ಅಲಂಕರಿಸಲು ಸಾಧ್ಯವಾಗಿದೆ. ಇವರ ಥಿಯರಿ ಆಫ್ ಆಂಟೆನ ಪುಸ್ತಕ ಒಂದು ಸಾರ್ವಕಾಲಿಕ ವೈಜ್ಞಾನಿಕ ಗ್ರಂಥದಂತಿದೆ. ಇದು ಇವರ ಕ್ರಿಯಾಶೀಲತೆಗೆ ಸಾಕ್ಷಿ ಎನ್ನಬಹುದು.

ರಾಜೇಶ್ವರಿಯವರು ಭೌತಿಕವಾಗಿ ಈಗ ಇಲ್ಲದಿದ್ದರೂ ಅವರ ಸಾಧನೆಗಳು ಎಲ್ಲ ಕಾಲಕ್ಕೂ ಮೀರಿದ ಜ್ಞಾನವಾಗಿ ನಮ್ಮೊಂದಿಗೆ ಸದಾಕಾಲ ಇರುತ್ತದೆ. ■



Downloaded From:www.kpscvaani.com



# ಬೇಸಿಗೆಯನ್ನು ಎದುರಿಸುವುದು ಹೀಗೆ ?

**ಬೇಸಿಗೆ ಕಾಲ ಬರುತ್ತಿರುವ ಹಿನ್ನೆಲೆಯಲ್ಲಿ ಬಿಸಿಲಿನ ತಾಪದಿಂದ ನಮ್ಮ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬುದರ ಕುರಿತು ಡಾ.ಕೆ.ಎಸ್. ಚೈತ್ರಾ ಅವರು ಸಲಹೆ ನೀಡಿದ್ದಾರೆ.**

ಡಾ.ಕೆ.ಎಸ್.ಚೈತ್ರಾ

Downloaded From:www.kpscvaani.com





ತಿನ್ನಲು ತಣ್ಣಗಿನ ಕಲ್ಲಂಗಡಿಹಣ್ಣು, ಕುಡಿಯಲು ಪಾನಕ, ಪ್ರವಾಸ ಮಾಡಲು ರಜಾ... ನಿಜ, ಬೇಸಿಗೆ ತುಂಬಾ ಮಜಾ. ಆದರೆ ಬೇಸಿಗೆ ಎಂದೊಡನೆ ಬಿಸಿಲು–ಬೇಗೆ–ಬೆವರು ಇವೂ ಇದ್ದದ್ದೇ. ಆಯಾ ಋತುವಿನ ವೈಶಿಷ್ಟ ಸವಿಯುತ್ತಲೇ ಅದರ ಅನಾನುಕೂಲಗಳನ್ನು ಎದುರಿಸುವುದು ಅನಿವಾರ್ಯ. ಅದಕ್ಕಾಗಿ ದೈಹಿಕ ಮತ್ತು ಮಾನಸಿಕವಾಗಿ ನಾವು ಸಜ್ಜಾಗಿ ಆಹಾರ–ವಿಹಾರ–ವಿಚಾರಗಳಲ್ಲಿ ಬದಲಾಗಬೇಕು.

**ಬೆವರಿನಿಂದ ದೂರವಿರಿ**

ಬೇಸಿಗೆ ಬಂದರೆ ದೊಡ್ಡ ರಗಳೆಯೆಂದರೆ ಧಾರಾಕಾರವಾಗಿ ಸುರಿವ ಬೆವರು ಮತ್ತು ಕೆಟ್ಟ ವಾಸನೆ. ಬಿಸಿಲಲ್ಲಿ ಓಡಾಡಿದಾಗ ದೇಹದ ಉಷ್ಣತೆ ಏರಿ, ಎಕ್ರಿನ್ ಮತ್ತು ಎಪೋಕ್ರಿನ್ ಗ್ರಂಥಿಗಳು ದೇಹದೊಳಗಿನಿಂದ ನೀರು ಲವಣಾಂಶವನ್ನು ಹೊರಹಾಕಿ ಬೆವರನ್ನು ಉತ್ಪಾದಿಸುತ್ತವೆ. ಇದರಿಂದ ದೇಹ ತಂಪಾಗುವುದಲ್ಲದೇ ಚರ್ಮವೂ ತೇವಯುಕ್ತವಾಗಿರುತ್ತದೆ. ಹಾಗಾಗಿ ಬೆವರು ಕೆಟ್ಟದಲ್ಲ, ಕೂಲರ್. ಮೂಲತಃ ಬೆವರಿಗೆ ಯಾವುದೇ ವಾಸನೆಯೂ ಇಲ್ಲ.

ಆದರೆ ಇದನ್ನು ದೇಹದ ಸೂಕ್ಷ್ಮಾಣುಜೀವಿಗಳು ತಮ್ಮ ಆಹಾರವನ್ನಾಗಿ ಬಳಸುತ್ತವೆ. ಈ ಕ್ರಿಯೆಯಲ್ಲಿ ಬಿಡುಗಡೆಯಾದ ರಾಸಾಯನಿಕಗಳಿಂದ ವಾಸನೆ ಹೊಮ್ಮುತ್ತದೆ. ಆಂಟಿಪರ್ಸ್ಪಿರೆಂಟ್ ಮತ್ತು ಡಿಯೋಡೆರೆಂಟ್‌ಗಳು ಬೆವರಿನ ಉತ್ಪಾದನೆ ನಿಯಂತ್ರಿಸಿ ಸೂಕ್ಷ್ಮಾಣುಜೀವಿಗಳನ್ನು ಕಡಿಮೆ ಮಾಡಿ ಕಾರ್ಯ ನಿರ್ವಹಿಸುತ್ತವೆ. ಆದರೆ ಇವುಗಳ ಅತಿ ಬಳಕೆಯಿಂದ ದೇಹದ ಸಹಜ ತಂಪಿನ ವ್ಯವಸ್ಥೆಗೆ ಹಾನಿಯಾಗುವ ಸಾಧ್ಯತೆ ಇದೆ. ಹಾಗಾಗಿ ಬೆವರು ದುರ್ವಾಸನೆ ಬೀರದಂತೆ ಈ ವಿಧಾನಗಳನ್ನು ಅನುಸರಿಸಬಹುದು.

- ಬೆವರಿನ ಮೇಲೆ ಪರಿಣಾಮ ಬೀರುವ ಆಹಾರ, ವೈಯಕ್ತಿಕ ಸ್ವಚ್ಛತೆ ಕಡೆ ಕಾಳಜಿ ವಹಿಸಬೇಕು. ದಿನಕ್ಕೆರಡು ಬಾರಿ ರೋಸ್ ವಾಟರ್ ಬೆರೆಸಿದ ಉಗುರು ಬೆಚ್ಚಗಿನ ನೀರಿನಲ್ಲಿ ಸ್ನಾನ ಮಾಡಬೇಕು.
- ಅತಿಹೆಚ್ಚು ಬೆವರುವುದರಿಂದ ಕೂದಲಿನಿಂದ ವಾಸನೆ ಬರುತ್ತದೆ, ಅಂಟುತ್ತದೆ. ಕೂದಲ ಬುಡದಲ್ಲಿ ತಲೆಹೊಟ್ಟಿನ ಸಮಸ್ಯೆಯೂ ಹೆಚ್ಚಾಗುತ್ತದೆ. ಇದನ್ನು ತಡೆಗಟ್ಟಲು ಎರಡುದಿನಗಳಿಗೊಮ್ಮೆ ತಲೆಸ್ನಾನ ಮಾಡಬೇಕು.
- ನಿತ್ಯದ ಆಹಾರದಲ್ಲಿ ಈರುಳ್ಳಿ, ಬೆಳ್ಳುಳ್ಳಿ, ತೀಕ್ಷ್ಣ ಮಸಾಲೆ ಪದಾರ್ಥಗಳು, ಸಂಸ್ಕರಿತ ಆಹಾರದಿಂದ ದೂರವಿದ್ದರೆ ಒಳಿತು.
- ದಿನಕ್ಕೆ ಎಂಟರಿಂದ ಹತ್ತು ಲೋಟ ನೀರಿನ ಸೇವನೆ ಮಾಡಬೇಕು.

**ಸುಡುವ ಬಿಸಿಲು**

ಬೇಸಿಗೆಯ ಬಿರು ಬಿಸಿಲಿನಿಂದ ದೇಹ ಬಳಲಿ ಶಕ್ತಿ ಕಡಿಮೆಯಾಗುತ್ತದೆ. ಇಡೀ ಶರೀರವನ್ನು ಆವರಿಸಿರುವ ಚರ್ಮ ಬೇಸಿಗೆಯಲ್ಲಿ ಅತೀ ಹೆಚ್ಚು ತೊಂದರೆಗೊಳಗಾಗುವ ಅಂಗ. ಬಿಸಿಲು ನಮ್ಮ ಚರ್ಮಕ್ಕೆ, ಆರೋಗ್ಯಕ್ಕೆ ಬೇಕು. ಭಾರತೀಯರಲ್ಲಿ ವಿಟಮಿನ್ 'ಡಿ' ಕೊರತೆ ಹೆಚ್ಚಾಗಿ ಕಂಡುಬರುತ್ತಿರುವುದಕ್ಕೆ ಗಾಢಬಣ್ಣ, ಸಸ್ಯಾಹಾರ, ಅಪೌಷ್ಟಿಕ ಆಹಾರದ ಜತೆ ಕಡಿಮೆ ಸೂರ್ಯ ರಶ್ಮಿಯೂ ಪ್ರಮುಖ ಕಾರಣ. ಹಾಗಾಗಿ ದಿನವೂ ಬೆಳಗ್ಗೆ ಹತ್ತು ಗಂಟೆಗೆ ಮುನ್ನ ಅಥವಾ ಸಂಜೆ ನಾಲ್ಕು ಗಂಟೆ ನಂತರ ಹದಿನೈದರಿಂದ ಇಪ್ಪತ್ತು ನಿಮಿಷಗಳಷ್ಟು ಕಾಲ ಸೂರ್ಯನ ಬಿಸಿಲು ಮೈಗೆ ಬೀಳಬೇಕು. ಆದರೆ ಅತಿನೇರಳೆ ಕಿರಣಗಳಲ್ಲಿ ಒಂದಾದ ಬಿಕಿರಣಗಳು ಬೆಳಗ್ಗೆ ಹನ್ನೊಂದರಿಂದ ಮಧ್ಯಾಹ್ನ ಮೂರು ಗಂಟೆಯವರೆಗೆ ಅತಿ ಹೆಚ್ಚಾಗಿದ್ದು, ತೀರಾ ಅಪಾಯಕಾರಿ. ಅತಿನೇರಳೆ ಕಿರಣಗಳು ಹೆಚ್ಚಾಗಿ ಚರ್ಮದ ಮೇಲೆ ಬಿದ್ದಾಗ ಹಾನಿಕಾರಕ.

ಅವುಗಳಿಂದಾಗುವ ಕಪ್ಪಾಗುವಿಕೆ (ಟ್ಯಾನಿಂಗ್), ಸೂರ್ಯ ಸುಡುವಿಕೆ (ಸನ್‌ಬರ್ನ್) ಮತ್ತು ಬಿಸಿಲುಮುಪ್ಪು (ಫೋಟೋಏಜಿಂಗ್) ಆಗುವ ಸಾಧ್ಯತೆ ಇರುವುದರಿಂದ ಈ ಸಮಯದಲ್ಲಿ ಹೊರಗೆ ಬರದಿರುವುದು ಅಥವಾ ಬರಬೇಕಾದಲ್ಲಿ ಅತ್ಯಂತ ಜಾಗ್ರತೆ ವಹಿಸುವುದು ಒಳ್ಳೆಯದು. ಬಿಸಿಲಿಗೆ ಹೋದಾಗ ಕೈ, ತೋಳು, ಭುಜ ಮುಚ್ಚುವ ಸಡಿಲವಾದ ಗಾಳಿಯಾಡುವ ತಿಳಿಬಣ್ಣದ ಹತ್ತಿಬಟ್ಟೆಯನ್ನು ಧರಿಸುವುದು, ಅಗಲವಾದ ಅಂಚುಳ್ಳ ಟೋಪಿ ಅಥವಾ ಕೊಡೆಯ ಬಳಕೆ, ಹೊರಹೋಗುವ ಮುನ್ನ ಸನ್‌ಸ್ಕ್ರೀನ್, ಸೂರ್ಯ ರಕ್ಷಕ ಕ್ರೀಂ ಬಳಸುವುದು ಉತ್ತಮ ಪರಿಹಾರ.

ಮಕ್ಕಳ ಚರ್ಮ ತುಂಬಾ ಸೂಕ್ಷ್ಮವಾಗಿರುವುದರಿಂದ ಬೇಗ ಸುಡುತ್ತದೆ. ಸೆಕೆ ಗುಳ್ಳೆಯ ಸಮಸ್ಯೆಯೂ ಹೆಚ್ಚು. ಮಕ್ಕಳನ್ನು ಹನ್ನೊಂದರಿಂದ ನಾಲ್ಕು ಗಂಟೆಯವರೆಗೆ ನೇರವಾಗಿ ಬಿಸಿಲಿನಲ್ಲಿ ಆಡಲು ಬಿಡದಿರುವುದೇ ಉತ್ತಮ. ಮಕ್ಕಳಿಗೆ ಬೇಸಿಗೆಯ ದಿನಗಳಲ್ಲಿ





Downloaded From:www.kpscvaani.com

ಬಿಸಿನೀರಿನ ಸ್ನಾನ ಮತ್ತು ತೀಕ್ಷ್ಣ ಸುಗಂಧವಿರುವ ಸಾಬೂನು ಬೇಡ. ದೇಹದ ಉಷ್ಣತೆ ಕಡಿಮೆಯಾಗಲು ತಣ್ಣೀರಿನ ಸ್ನಾನ ಮಾಡಿ, ಒಣಬಟ್ಟೆಯಿಂದ ಒರೆಸಿ, ತೆಳುವಾಗಿ ಮಾಯಿಶ್ಚರೈಸರ್ ಹಚ್ಚಿ, ಪೌಡರ್ ಹಾಕುವುದರಿಂದ ಬೆವರು ಮತ್ತು ಸಂದಿಗಳಲ್ಲಾಗುವ ಸೋಂಕು ಕಡಿಮೆಯಾಗುತ್ತದೆ.

**ನೀರೆಂಬ ಅಮೃತ**

ಜೀವಜಲವೆಂದರೆ ನೀರು. ಶರೀರದೊಳಗೆ ನಿರಂತರವಾಗಿ ನಡೆಯುವ ಜೀವಕ್ರಿಯೆಗಳಿಗೆ ನೀರು ಬೇಕೇ ಬೇಕು. ನೀರು ದೇಹಕ್ಕೆ ಅತ್ಯವಶ್ಯಕವಾದರೂ ಅದರಲ್ಲಿ ಯಾವುದೇ ರೀತಿಯ ಕ್ಯಾಲೋರಿ ಇಲ್ಲ. ಆದ್ದರಿಂದ ಅನಗತ್ಯ ಕೊಬ್ಬು ಶೇಖರಣೆಯಾಗಿ ತೂಕ ಹೆಚ್ಚುವ ಸಂಭವವಿಲ್ಲ. ದಿನನಿತ್ಯ ಬೆವರು, ಮಲಮೂತ್ರ, ಉಸಿರಾಟದ ಮೂಲಕ ನೀರಿನ ಜತೆ ಸೋಡಿಯಂ, ಕ್ಲೋರೈಡ್, ಪೊಟಾಶಿಯಂ ಮುಂತಾದ ಲವಣಗಳೂ ದೇಹದಿಂದ ಹೊರಹೋಗುತ್ತದೆ. ದೇಹದಲ್ಲಿ ನಡೆಯುವ ಕ್ರಿಯೆಗಳಿಗೆ, ಅಂಗಗಳ ನಿರ್ವಹಣೆಗೆ ಲವಣಗಳು ಸರಿಪ್ರಮಾಣದಲ್ಲಿ ಇರಬೇಕು. ನೀರನ್ನು ಆಗಾಗ್ಗೆ ಕುಡಿಯುವುದರ ಮೂಲಕ ಹೊರ ಹೋದ ನಷ್ಟವನ್ನು ತುಂಬಿಕೊಡಬೇಕು. ಯಾವುದೇ ಕಾರಣದಿಂದ ಶರೀರದಲ್ಲಿ ಅಗತ್ಯ ಪ್ರಮಾಣದ ನೀರು, ಲವಣಾಂಶಗಳು ಕಡಿಮೆ ಆದಾಗ ಅದನ್ನು 'ಡಿಹೈಡ್ರೇಶನ್' ಎಂದು ಕರೆಯಲಾಗುತ್ತದೆ. ಮಕ್ಕಳ ಶರೀರದಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದ್ದರೆ ವೃದ್ಧರಲ್ಲಿ ನೀರಿನ ಪ್ರಮಾಣ ಕಡಿಮೆ ಇರುತ್ತದೆ. ಹಾಗಾಗಿ ಮಕ್ಕಳು ಮತ್ತು ವೃದ್ಧರು ವಿಶೇಷವಾಗಿ ಬೇಸಿಗೆಯಲ್ಲಿ ಈ ಅಪಾಯಕಾರಿ ಸ್ಥಿತಿಗೆ ತುತ್ತಾಗುವ ಸಾಧ್ಯತೆ ಹೆಚ್ಚು.

**ಲಕ್ಷಣಗಳು:–** ಬಾಯಿ ಒಣಗುವಿಕೆ, ಗುಳಿಬಿದ್ದ ಕಣ್ಣು, ಸುಕ್ಕುಗಟ್ಟಿದ ಚರ್ಮ, ಅತ್ಯಂತ ಕಡಿಮೆ ಮೂತ್ರ ವಿಸರ್ಜನೆ, ಸ್ನಾಯು ಸೆಳೆತ, ಕಿರಿಕಿರಿ–ಸಿಡುಕು, ನಿಶ್ಶಕ್ತಿ.....ಮುಂತಾದವು. ಈ ಹಂತದಲ್ಲಿ ಸರಿಯಾದ ಚಿಕಿತ್ಸೆ ಸಿಗದೇ, ದೇಹದಲ್ಲಿ ಶೇಕಡಾ ಇಪ್ಪತ್ತರಷ್ಟು ನೀರು ಕಡಿಮೆಯಾದಲ್ಲಿ 'ಕೋಮಾ'ಗೆ ಹೋಗಿ ಪ್ರಾಣಾಪಾಯವೂ ಆಗಬಹುದು. ಹೀಗಾಗುವುದನ್ನು ತಡೆಗಟ್ಟಲು ನೀರಿನ ಸೇವನೆ ಅತ್ಯಂತ ಮುಖ್ಯವಾದುದು. ವ್ಯಕ್ತಿಯ ವಯಸ್ಸು, ಲಿಂಗ, ತೂಕ, ಇರುವ ವಾತಾವರಣ, ಚಟುವಟಿಕೆಯ ಮಟ್ಟ ಇವೆಲ್ಲದರ ಮೇಲೆ ವ್ಯಕ್ತಿಗೆ ಬೇಕಾಗುವ ನೀರಿನ ಪ್ರಮಾಣ ಅವಲಂಬಿತವಾದರೂ ಬೇಸಿಗೆಯಲ್ಲಿ ಎಂದಿಗಿಂತ ಹೆಚ್ಚಿನ ಪ್ರಮಾಣದ ನೀರು ಬೇಕು (ಸುಮಾರು ಮೂರು ಲೀಟರ್).

**ಕೋಲ್ಡ್ ಡ್ರಿಂಕ್ಸ್, ಐಸ್‌ಕ್ರೀಂ ಮತ್ತು ಕರಿದ ತಿಂಡಿ**

ಬೇಸಿಗೆ ಎಂದರೆ ಬಾಯಾರಿಕೆ, ಹಾಗಾಗಿ ಬೇಸಿಗೆಯಲ್ಲಿ ಕೋಲ್ಡ್ ಡ್ರಿಂಕ್ಸ್ ಮತ್ತು ಐಸ್‌ಕ್ರೀಂ ಇವೆಲ್ಲವನ್ನು ಸವಿಯಲು ಪ್ರಶಸ್ತ ಕಾಲ ಬೇಸಿಗೆ ಎಂಬುದು ಸರಿಯಾದರೂ ಬಿರು ಬಿಸಿಲಿನಿಂದ ಕೂಡಲೇ ಅತಿ ತಣ್ಣಗಿನ ಆಹಾರ ಸೇವಿಸುವುದು ಒಳ್ಳೆಯದಲ್ಲ. ಯಾವುದೇ ಜ್ಯೂಸ್ ಕುಡಿಯುವಾಗ ಅದಕ್ಕೆ ಬಳಸಿರುವ ನೀರಿನ ಬಗ್ಗೆ ಕಾಳಜಿ ವಹಿಸಬೇಕು. ಅದರಲ್ಲೂ ಐಸ್ ಮೇಲೆ ತೇಲುವ ರಸಗಳು ನೋಡಲು ಆಕರ್ಷಕವೆನಿಸಿದರೂ ಅಪಾಯಕಾರಿ. ಬೇಸಿಗೆಯಲ್ಲಿ ಆಹಾರ ಬೇಗ ಹಳಸುವ ಸಾಧ್ಯತೆ ಇರುತ್ತದೆ. ಕಲುಷಿತ ಆಹಾರ–ನೀರಿನಿಂದ ಕಾಲರಾ, ವಾಂತಿ–ಬೇಧಿ, ಹೆಪಾಟೈಟಿಸ್ ಎ ಮತ್ತು ವಿಷಮಶೀತ ಜ್ವರದಂಥ ಕಾಯಿಲೆಗಳೂ ಕಾಣಿಸಿಕೊಳ್ಳುವ ಸಂಭವ ಹೆಚ್ಚು.

ಇನ್ನು ಕೆನೆ, ಹಾಲು, ಮೊಟ್ಟೆ, ಸಕ್ಕರೆ ಬೆರೆಸಿ ಮಾಡಿದ ತಣ್ಣಗಿನ ಐಸ್‌ಕ್ರೀಂ ತಿನ್ನುವುದರಿಂದ ಕೂಡಲೇ ತಂಪಿನ ಅನುಭವವಾದರೂ ಒಳ್ಳೆಯದಲ್ಲ. ಏಕೆಂದರೆ ಅದರಲ್ಲಿರುವ ಕೊಬ್ಬಿನಂಶ ಪಚನವಾಗಲು ಜೀರ್ಣಕ್ರಿಯೆ ನಡೆದಾಗ ಹೆಚ್ಚು ಶಾಖ ಉತ್ಪತ್ತಿಯಾಗುತ್ತದೆ. ಇದೇ ರೀತಿ ಎಣ್ಣೆಯಲ್ಲಿ ಕರಿದ ತಿಂಡಿಯಲ್ಲಿ ಪೋಷಕಾಂಶಗಳು ತೀರಾ ಕಡಿಮೆ. ಜಿಡ್ಡಿನಂಶ ಹೆಚ್ಚಾಗಿದ್ದು ಹೊಟ್ಟೆಗೆ ಭಾರವಾಗುತ್ತದೆ. ಈ ರೀತಿ ಹೆಚ್ಚಿನ ಕಾಲೋರಿ ಇರುವ ಆಹಾರ ಸೇವನೆಯಿಂದ ದೇಹದ ಉಷ್ಣತೆ ಹೆಚ್ಚುತ್ತದೆ. ಹಣ್ಣಿನ ರಸ, ಬಾಯಿಗೆ ರುಚಿ ಮತ್ತು ಆರೋಗ್ಯಕರ ಎನಿಸಿದರೂ ಅದರಲ್ಲಿ ಸೇರಿಸಿರುವ ಸಕ್ಕರೆಯ ಅಂಶದ ಬಗ್ಗೆ ಗಮನ ಹರಿಸಬೇಕು.

ಸಿಹಿಯಾಗಲೆಂದು ಸಕ್ಕರೆ ಬೆರೆಸಿದ ಈ ರಸಗಳು ಹಲ್ಲಿನ ಹುಳುಕು ಮತ್ತು ತೂಕ ಹೆಚ್ಚಳಕ್ಕೆ ಕಾರಣವಾಗಬಹುದು. ಇನ್ನು ಎಲ್ಲೆಡೆ ಸಿಗುವ ಆಕರ್ಷಕ ಮತ್ತು ಜನಪ್ರಿಯ ಸೋಡಾಯುಕ್ತ ತಂಪು ಪಾನೀಯ– ಎನರ್ಜಿ ಡ್ರಿಂಕ್‌ಗಳಲ್ಲಿ ಆಮ್ಲೀಯ ಗುಣ ಹೆಚ್ಚಿರುತ್ತದೆ. ಇವುಗಳ ಸತತ ಸೇವನೆಯಿಂದ ಹಲ್ಲಿನ ಹೊರ ಕವಚ ಎನಾಮೆಲ್ ಸವೆದು ಜುಂ ಎನ್ನುವ ಸಂವೇದನೆ ಕಾಣಿಸಿಕೊಳ್ಳುತ್ತದೆ. ಅದೇ ರೀತಿ ವಿಟಮಿನ್ ಸಿ ಹೊಂದಿದ್ದು ದಾಹ ನೀಗಿಸುವಲ್ಲಿ ಒಳ್ಳೆಯದು ಎಂದು ಭಾವಿಸಿರುವ ನಿಂಬೆ ಹಣ್ಣಿನ ಪಾನಕ ಮತ್ತು ಕಿತ್ತಳೆ ಹಣ್ಣಿನ ರಸಗಳು ಕೂಡಾ ಆಮ್ಲೀಯವಾಗಿರುತ್ತದೆ. ಹಾಗಾಗಿ ಇವುಗಳನ್ನು ಅತಿಯಾಗಿ ಸೇವಿಸಿದಲ್ಲಿ, ಹಲ್ಲು ಸವೆಯುವ ಸಂಭವವಿದೆ. ಆದ್ದರಿಂದ ದಾಹ ನೀಗಬೇಕು, ದೇಹವೂ ಆರೋಗ್ಯದಿಂದಿರಬೇಕು ಎಂದರೆ ಕುದಿಸಿ ಆರಿಸಿದ ನೀರಿನ ಸೇವನೆ ಮತ್ತು ಕೊಬ್ಬಿನಂಶ ಕಡಿಮೆ ಇರುವ ತಾಜಾ ಹಣ್ಣು ಸೇರಿಸಿದ ಐಸ್‌ಕ್ರೀಂ, ತಿಳಿ ಮಜ್ಜಿಗೆ, ಎಳನೀರು, ಟೊಮಾಟೋ ಮುಂತಾದ ರಸಭರಿತ ತರಕಾರಿಗಳ ಸೇವನೆ ಉತ್ತಮ.

ಋತುವನ್ನು ನಿಯಂತ್ರಿಸುವ, ಸೂರ್ಯನ ಉರಿಬಿಸಿಲನ್ನು ಕಡಿಮೆ ಮಾಡುವ ಶಕ್ತಿ ನಮಗಿಲ್ಲ ನಿಜ. ಹಾಗಾಗಿ ಪ್ರತೀ ಋತುವನ್ನು ಆನಂದಿಸುತ್ತಲೇ ಅದರಿಂದ ಹಾನಿಯಾಗದಂತೆ ರಕ್ಷಣಾ ವಿಧಾನ ಬಳಸುವುದು ಮಾತ್ರ ನಮ್ಮ ಕೈಯಲ್ಲಿದೆ. ■

**ಬೇಸಿಗೆ ಪ್ರವಾಸ ಪ್ರಯಾಸವಾಗದಿರಲಿ**

ಬೇಸಿಗೆ ರಜೆಯೆಂದರೆ ಕುಟುಂಬದವರೆಲ್ಲಾ ಸೇರಿ ತಂಪಾಗಿರುವ ಗಿರಿಧಾಮಗಳಿಗೆ ಅಥವಾ ಸಮುದ್ರ ತೀರ ಇರುವ ಸ್ಥಳಕ್ಕೆ ಪ್ರವಾಸ ಹೊರಡುವುದು ಸಾಮಾನ್ಯ. ಹೀಗೆ ಪ್ರವಾಸ ಹೊರಟಾಗ ನೆನಪಿನಲ್ಲಿಡಬೇಕಾದ ಅಂಶಗಳು.

ಸಮುದ್ರಮಟ್ಟದಿಂದ ಮೇಲಿರುವ ಎತ್ತರದ ಪ್ರದೇಶದಲ್ಲಿ ವಾಯುಪದರ ಕಡಿಮೆಯಿದ್ದು, ಹೆಚ್ಚಿನ ಅತಿನೇರಳೆ ಕಿರಣಗಳು ಚರ್ಮಕ್ಕೆ ತಾಗುತ್ತವೆ.

ಹಿಮ, ನೀರು, ಮರಳು ಈ ಮೂರೂ ಹಾನಿಕಾರಕ ಅತಿನೇರಳೆ ಕಿರಣಗಳನ್ನು ಪ್ರತಿಫಲಿಸುತ್ತದೆ.

ಅತಿನೇರಳೆ ಕಿರಣಗಳು ಬರೀ ಮೈಯ್ಯನಷ್ಟೇ ಅಲ್ಲ, ಕಣ್ಣುಗಳನ್ನು ಸುಡುತ್ತವೆ. ಕಣ್ಣಿನ ಬಿಳಿಭಾಗ ಕೆಂಪಾಗುವುದು, ಊತ ಕಾಣಬಹುದು. ಕಣ್ಣುರಿ, ಕಾಟರಾಕ್ಟ್ ನಂತಹ ತೊಂದರೆಗೆ ಕಾರಣವಾಗಬಲ್ಲದು.

ಈಜು ಕೊಳದಲ್ಲಿ ನೀರಿಗೆ ಕ್ಲೋರಿನ್ ಬಳಸುವುದರಿಂದ ಈಜಿದ ನಂತರ ದೇಹದ ಮೇಲೆ ಅದು ಉಳಿಯದಂತೆ ಎಚ್ಚರವಹಿಸಬೇಕು.


Downloaded From:www.kpscvaani.com




# ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ "ಪಿಡಿಒ ಆಫ್ ದಿ ಮಂತ್" ಪ್ರಶಸ್ತಿ

**ಅಭಿವೃದ್ಧಿ ಕಾರ್ಯಗಳು ಉತ್ತಮವಾಗಿ ಆಗುವಂತೆ ಮಾಡುವ ಉದ್ದೇಶದಿಂದ ಕಾರವಾರ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ "ಪಿಡಿಒ ಆಫ್ ದಿ ಮಂತ್" ಪ್ರಶಸ್ತಿ ನೀಡಿ ಪ್ರೋತ್ಸಾಹಿಸುತ್ತಿದ್ದಾರೆ.**

ಬಿ. ಶಿವಕುಮಾರ್

ಗ್ರಾಮೀಣ ಪ್ರದೇಶದಲ್ಲಿ ಜನರ ಸಂಕಷ್ಟಗಳಿಗೆ ಸ್ಪಂದಿಸಿ, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಕಾರ್ಯಕ್ಷಮತೆ, ದಕ್ಷತೆ ಹಾಗೂ ವಿವಿಧ ಯೋಜನೆಗಳ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಾಧಿಸಿದ ಪ್ರಗತಿ ಹಾಗೂ ಸಾರ್ವಜನಿಕರಿಗೆ ಸಲ್ಲಿಸಿದ ಸೇವೆಯನ್ನು ಗುರುತಿಸಿ ಪ್ರತಿ ಮಾಹೆ ಜಿಲ್ಲಾ ಮಟ್ಟದಲ್ಲಿ ಒಬ್ಬ ಅತ್ಯುತ್ತಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ "ಪಿಡಿಒ ಆಫ್ ದಿ ಮಂತ್" ಪ್ರಶಸ್ತಿ ನೀಡಿ ಪ್ರೋತ್ಸಾಹಿಸುವ ಮೂಲಕ ಇತರರನ್ನು ಪ್ರೇರೇಪಿಸುವ ಸಲುವಾಗಿ ರಾಜ್ಯದಲ್ಲೇ ಮೊದಲ ಬಾರಿಗೆ ಉತ್ತರ ಕನ್ನಡ ಜಿಲ್ಲಾ ಪಂಚಾಯತ್ ಜಾರಿಗೆ ತಂದಿರುವ ವಿನೂತನ ಪ್ರಶಸ್ತಿ ಹಾಗೂ ಪರಿಕಲ್ಪನೆ ಇದಾಗಿದೆ.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಈಶ್ವರ ಕಾಂದೂ ಅವರ ಮಹತ್ವಾಕಾಂಕ್ಷೆಯ ಆಲೋಚನೆ ಇದಾಗಿದ್ದು, ಈ ಕಾರ್ಯಕ್ಕೆ ಸರಕಾರ ಮಟ್ಟದ ಹಿರಿಯ ಅಧಿಕಾರಿಗಳು ಹಾಗೂ ಜಿಲ್ಲೆಯ ಜನಪ್ರತಿನಿಧಿಗಳಿಂದ ಅತ್ಯುತ್ತಮ ಪ್ರಶಂಸೆ ವ್ಯಕ್ತವಾಗಿದೆ.

ಅತ್ಯುತ್ತಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಎಂದು ಘೋಷಿಸಲು ಕೆಲವು ಮಾನದಂಡಗಳನ್ನು ಅಳವಡಿಸಲಾಗಿದ್ದು, ಒಂದು ತಿಂಗಳಲ್ಲಿ ನಿಗದಿತ ಗುರಿ ಪೂರೈಸಿದ ಒಬ್ಬ ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ಪ್ರತಿ ತಾಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು, ಪರಿಶೀಲಿಸಿ ಒಬ್ಬ ಅತ್ಯುತ್ತಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಪ್ರಸ್ತಾವನೆಯನ್ನು ಪ್ರತಿ



Downloaded From:www.kpscvaani.com

ಅತ್ಯುತ್ತಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪ್ರಶಸ್ತಿಗೆ ಸರಕಾರದ ವಿವಿಧ ಯೋಜನೆಗಳ 9 ವಿಭಾಗಗಳಲ್ಲಿ ವಿಷಯವಾರು ಕೆಲವು ಮಾನದಂಡ ಮತ್ತು 100 ಅಂಕಗಳನ್ನು ನಿಗದಿಪಡಿಸಲಾಗಿದ್ದು ಅವುಗಳು ಈ ರೀತಿಯಾಗಿದೆ.

- ಎಂಜಿಎನ್‌ಆರ್‌ಇಜಿಎ ವಿಭಾಗದಲ್ಲಿ ಮಾನವ ದಿನಗಳ ಸೃಜನೆಗೆ 5 ಅಂಕ, ಕಾಮಗಾರಿ ಪೂರ್ಣಗೊಳಿಸುವಿಕೆಗೆ 5 ಅಂಕ, ಸಕಾಲದಲ್ಲಿ ಕೂಲಿ ಪಾವತಿಗೆ 5 ಅಂಕ, ಕಾಮಗಾರಿಗಳ ಜಿಯೋ ಟ್ಯಾಗಿಂಗ್‌ಗೆ 5 ಅಂಕ, ಮಹಿಳಾ ಮಾನವ ದಿನಗಳ ಸೃಜನೆಗೆ 5 ಅಂಕ, ಆಧಾರ ಸಿಡಿಂಗ್‌ಗೆ 5 ಅಂಕ ಸೇರಿ ಒಟ್ಟು 30 ಅಂಕಗಳು.
- ಎಸ್‌ಬಿಎಂ ವಿಭಾಗದಲ್ಲಿ ಎಸ್‌ಎಲ್‌ಡಬ್ಲ್ಯುಎಂ ಘಟಕ ಕಾರ್ಯನಿರ್ವಹಿಸುತ್ತಿರುವ ಸ್ಥಿತಿಗೆ 5 ಅಂಕ, ಶೌಚಾಲಯ ನಿರ್ಮಾಣ ಸ್ಥಿತಿಗೆ 5 ಅಂಕ, ಮಹಿಳಾ ವಾಹನ ಚಾಲಕರಿಗೆ ತರಬೇತಿ ನೀಡಿರುವ/ ನೀಡದಿದ್ದಲ್ಲಿ ತರಬೇತಿಯ ವೇಳಾಪಟ್ಟಿ ಸಿದ್ಧಪಡಿಸಲು ಕ್ರಮ ಕೈಗೊಂಡಿರುವುದಕ್ಕೆ 5 ಅಂಕ, ಗ್ರಾಮ ಪಂಚಾಯತ್ ಕಟ್ಟಡ ಹಾಗೂ ಆವರಣದಲ್ಲಿ ಶುಚಿತ್ವ ಕಾಪಾಡುವಿಕೆಗೆ 5 ಅಂಕ ಸೇರಿ ಒಟ್ಟು 20 ಅಂಕಗಳು.
- ಸೋಲಾರ್ ಅಳವಡಿಕೆ ವಿಭಾಗದಲ್ಲಿ ಗ್ರಾಮ ಪಂಚಾಯತಿ ಕಟ್ಟಡಕ್ಕೆ ಸೋಲಾರ್ ಅಳವಡಿಕೆಗಾಗಿ 5 ಅಂಕಗಳು.
- ತೆರಿಗೆ ಸಂಗ್ರಹಣೆ ವಿಭಾಗದಲ್ಲಿ ಶೇಕಡಾವಾರು ತೆರಿಗೆ ಸಂಗ್ರಹಣೆ ಹಾಗೂ ಪಂಚತಂತ್ರ–2.0 ಅಪ್‌ಡೇಶನ್‌ಗಾಗಿ 10 ಅಂಕಗಳು.
- ಗ್ರಂಥಾಲಯ ವಿಭಾಗದಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಗ್ರಂಥಾಲಯಗಳ ಡಿಜಿಟಲೀಕರಣ ಹಾಗೂ ಉನ್ನತೀಕರಣಕ್ಕೆ 5 ಅಂಕ, ಗ್ರಂಥಾಲಯಗಳಲ್ಲಿ ಮಕ್ಕಳ ನೋಂದಣಿ ಹಾಗೂ ದಾಖಲಾತಿಗಾಗಿ 5 ಅಂಕ ಸೇರಿಂದೆ ಒಟ್ಟು 10 ಅಂಕಗಳು.
- 15ನೇ ಹಣಕಾಸು ವಿಭಾಗದಲ್ಲಿ ವಾರ್ಷಿಕ ಭರಿಸಲಾದ ವೆಚ್ಚಕ್ಕೆ 5 ಅಂಕಗಳು.
- ವಸತಿ ವಿಭಾಗದಲ್ಲಿ ಎಂಪಿಐಸಿ ಗುರಿ ಹಾಗೂ ಮನೆಗಳ ಜಿಪಿಎಸ್ ಪ್ರಗತಿಗೆ 10 ಅಂಕಗಳು.
- ಸಕಾಲ ವಿಭಾಗದಲ್ಲಿ ಸ್ವೀಕೃತವಾದ ಹಾಗೂ ವಿಲೇವಾರಿ ಮಾಡಿದ ಅರ್ಜಿಗಳ ಸಂಖ್ಯೆಗಾಗಿ 5 ಅಂಕಗಳು.
- ಇಎಸ್‌ಸಿಆರ್‌ಒಡಬ್ಲ್ಯು ವಿಭಾಗದಲ್ಲಿ ಹೆಸ್ಕಾಂ ಕಡಿಮೆ ಬಿಲ್ ಬಾಕಿಗಾಗಿ 5 ಅಂಕಗಳು ಸೇರಿದಂತೆ ಒಟ್ಟರೆಯಾಗಿ 100 ಅಂಕಗಳನ್ನು ನಿಗದಿಪಡಿಸಲಾಗಿದೆ.

ಜಿಲ್ಲಾ ಪಂಚಾಯತ್‌ನಿಂದ ಈವರೆಗೂ 8 ಅತ್ಯುತ್ತಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ "ಪಿಡಿಒ ಆಫ್ ದಿ ಮಂತ್" ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ಉತ್ತಮವಾಗಿ ಕರ್ತವ್ಯ ನಿರ್ವಹಿಸಲು ಪ್ರೇರಣೆ**

ಸರ್ಕಾರದ ವಿವಿಧ ಯೋಜನೆಗಳನ್ನು ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ಯಶಸ್ವಿಯಾಗಿ ಸಾರ್ವಜನಿಕರಿಗೆ ತಲುಪಿಸುವ ಹಾಗೂ ಸಾರ್ವಜನಿಕರು ಮತ್ತು ಸಿಬ್ಬಂದಿಗಳೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಂಡು ಕಾರ್ಯನಿರ್ವಹಿಸುವ ಸಿಬ್ಬಂದಿಗಳನ್ನು ಗುರುತಿಸಿ ಪ್ರೋತ್ಸಾಹಿಸುವುದರಿಂದ ಅವರು ಇನ್ನಷ್ಟು ಉತ್ತಮವಾಗಿ ಕರ್ತವ್ಯ ನಿರ್ವಹಿಸಲು ಬೆಂಬಲ ಹಾಗೂ ಇತರರಿಗೆ ಅವರ ಸಾಧನೆ ಪ್ರೇರಣೆಯಾಗಲಿ ಎಂಬ ಉದ್ದೇಶದಿಂದ "ಪಿಡಿಒ ಆಫ್ ದಿ ಮಂತ್" ಪ್ರಶಸ್ತಿ ನೀಡಲು ಪ್ರಾರಂಭಿಸಲಾಯಿತು.

ಈ ಪ್ರಶಸ್ತಿ ನೀಡುವ ಕಾರ್ಯಕ್ರಮ ಆರಂಭಗೊಂಡ ನಂತರ ಜಿಲ್ಲೆಯ ಪಂಚಾಯತ್‌ಗಳಲ್ಲಿ ಅನೇಕ ಮಹತ್ತರ ಯೋಜನೆಗಳು, ಅಭಿವೃದ್ಧಿ ಕಾರ್ಯಗಳು ಸಕಾಲದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿವೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಲ್ಲಿ ಮತ್ತು ಸಿಬ್ಬಂದಿಗಳಲ್ಲಿ ಸಂಪೂರ್ಣ ಸಮರ್ಪಣಾ ಮನೋಭಾವದಿಂದ ಸಾರ್ವಜನಿಕರಿಗೆ ಸೇವೆ ಒದಗಿಸುವ ಮತ್ತು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವ ಕುರಿತು ಜಾಗೃತಿ ಮೂಡಿದೆ.

**–ಈಶ್ವರ ಕಾಂದೂ, ಉತ್ತರ ಕನ್ನಡ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.**

ಮಾಹೆ ಜಿಲ್ಲಾ ಪಂಚಾಯತ್ ಕಾರ್ಯಾಲಯಕ್ಕೆ ಸಲ್ಲಿಸಲಿದ್ದಾರೆ. ಸದರಿ ಪ್ರಸ್ತಾವನೆಯನ್ನು ಜಿಲ್ಲಾ ಪಂಚಾಯತ್‌ನಲ್ಲಿರುವ ವಿವಿಧ ಶಾಖಾ ಮುಖ್ಯಸ್ಥರಿಂದ ರಚನೆಯಾದ ಸಮಿತಿಯಿಂದ ಪರಿಶೀಲಿಸಿ, ಆಯ್ಕೆ ಮಾಡಿ ಶಿಫಾರಸ್ಸು ಮಾಡಿದ ನಂತರ ಪ್ರತಿ ಮಾಹೆ ಒಬ್ಬ ಅತ್ಯುತ್ತಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯನ್ನು ಆಯ್ಕೆ ಮಾಡಿ ಆಯ್ಕೆ ಸಮಿತಿಯ ಅಧ್ಯಕ್ಷರೂ ಆಗಿರುವಂತಹ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಪ್ರಶಸ್ತಿಯನ್ನು ಘೋಷಿಸಲಾಗುವುದು.

ಆಯ್ಕೆ ಮಾಡಲಾದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ಪ್ರಶಂಸನಾ ಪ್ರಮಾಣ ಪತ್ರ ನೀಡಲಾಗುವುದು. ಜೊತೆಗೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಿದ ಯೋಜನೆಗಳ ಸಾಧನೆಯ ಸಂಕ್ಷಿಪ್ತ ವರದಿ ಹಾಗೂ ಛಾಯಾ ಚಿತ್ರಗಳನ್ನು ಜಿಲ್ಲಾ ಪಂಚಾಯತ್ ಕಾರ್ಯಾಲಯದ ಸೂಚನಾ ಫಲಕದಲ್ಲಿ ಪ್ರದರ್ಶಿಸಲಾಗುವುದು. ಆಯ್ಕೆಗೊಂಡ ಅತ್ಯುತ್ತಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ಜಿಲ್ಲಾ ಪಂಚಾಯತ್‌ನಲ್ಲಿ ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಿ ಗೌರವಿಸಲಾಗುತ್ತದೆ.

ಪ್ರತಿ ಮಾಹೆ ಒಬ್ಬ ಅತ್ಯುತ್ತಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯನ್ನು ಆಯ್ಕೆ ಮಾಡಿ ಆಯ್ಕೆ ಉದ್ದೇಶಕ್ಕಾಗಿ ಜಿಲ್ಲಾ ಪಂಚಾಯತ್ ಕಾರ್ಯಾಲಯದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯಲ್ಲಿ ಜಿಲ್ಲಾ ಪಂಚಾಯತ್‌ನ ಉಪ ಕಾರ್ಯದರ್ಶಿ(ಅಭಿವೃದ್ಧಿ) ಸದಸ್ಯ ಕಾರ್ಯದರ್ಶಿಯಾಗಿದ್ದು, ಉಪ ಕಾರ್ಯದರ್ಶಿ(ಆಡಳಿತ), ಮುಖ್ಯ ಲೆಕ್ಕಾಧಿಕಾರಿ, ಮುಖ್ಯ ಯೋಜನಾಧಿಕಾರಿ, ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಸದಸ್ಯರಾಗಿರುತ್ತಾರೆ.

ಜಿಲ್ಲೆಯ ಎಲ್ಲಾ ತಾಲೂಕು ಪಂಚಾಯತ್‌ನ ಕಾರ್ಯನಿರ್ವಾಹಕ ಅಧಿಕಾರಿಗಳು, ಪ್ರತಿ ಮಾಹೆಯ 5ನೇ ದಿನಾಂಕದೊಳಗೆ ಕಡ್ಡಾಯವಾಗಿ ಒಬ್ಬ ಪಂಚಾಯತ್ ಅಭಿವೃದ್ಧಿ ಅಧಿಕಾರಿಯನ್ನು ಆಯ್ಕೆ ಮಾಡಿ ಅವರ ಪ್ರಸ್ತಾವನೆಯನ್ನು ಜಿಲ್ಲಾ ಪಂಚಾಯತ್‌ನ ಆಯ್ಕೆ ಸಮಿತಿಗೆ ಸಲ್ಲಿಸಲಿದ್ದಾರೆ. ಪ್ರತಿ ಮಾಹೆಯ 7ನೇ ದಿನಾಂಕದಂದು ಜಿಲ್ಲಾ ಪಂಚಾಯತ್‌ನ ಕಾರ್ಯಾಲಯದಿಂದ ಅತ್ಯುತ್ತಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯ ಹೆಸರನ್ನು ಘೋಷಿಸಲಾಗುವುದು. ■


Downloaded From:www.kpscvaani.com



ಪರೀಕ್ಷೆಯ ಸಮಯದಲ್ಲಿ ಮಕ್ಕಳ ದೃಷ್ಟಿಯ ಮೇಲಾಗುವ ಪರಿಣಾಮಗಳ ಕುರಿತು ಬೆಂಗಳೂರಿನ ನಾರಾಯಣ ನೇತ್ರಾಲಯದ ಅಧ್ಯಕ್ಷರು ಮತ್ತು ನೇತ್ರ ತಜ್ಞರಾದ ಡಾ. ರೋಹಿತ್ ಶೆಟ್ಟಿ ಅವರು ಬೆಳಕು ಚೆಲ್ಲಿದ್ದಾರೆ.

ಡಾ. ರೋಹಿತ್ ಶೆಟ್ಟಿ

# ಪರೀಕ್ಷಾ ಸಮಯದಲ್ಲಿ ಮಕ್ಕಳ ದೃಷ್ಟಿಗೆ ಸಂಬಂಧಿಸಿದ ಸವಾಲುಗಳು

ಮಕ್ಕಳು ವಿದ್ಯಾಭ್ಯಾಸಕ್ಕಾಗಿ ಓದುವುದು ಮತ್ತು ಬರೆಯುವುದು ಮಾಡಲೇ ಬೇಕಾಗಿರುತ್ತದೆ. ಎರಡೂ ಪ್ರಕ್ರಿಯೆಗಳಿಂದ ಕಣ್ಣಿಗೆ ಹೆಚ್ಚಿನ ಒತ್ತಡ ಬೀಳುತ್ತದೆ. ಪ್ರೌಢಶಾಲೆಯಲ್ಲಿರುವ ಮಗು ದಿನಕ್ಕೆ ಸರಾಸರಿ 10 ರಿಂದ 14 ಗಂಟೆಗಳ ಕಾಲ ಓದುವುದು ಅಥವಾ ಬರೆಯುವುದರಲ್ಲಿ ಕಳೆಯುತ್ತದೆ. ಅದು ಪರೀಕ್ಷೆಗಳ ಸಮಯದಲ್ಲಿ 16 ಗಂಟೆಗಳವರೆಗೆ ಹೆಚ್ಚಾಗಬಹುದು. ಶೈಕ್ಷಣಿಕ ಯಶಸ್ಸಿಗೆ ಪರಿಪೂರ್ಣ ದೃಷ್ಟಿ ಅತ್ಯಗತ್ಯವಾದರೂ, ಅದು ಏಕೈಕ ಅಂಶವಲ್ಲ.

ಕಣ್ಣಿನಲ್ಲಿರುವ ಅನೇಕ ಅಂಶಗಳಾದ ಗಮನಹರಿಸುವಿಕೆ, ಏಕಾಗ್ರತೆ ಮತ್ತು ವಕ್ರೀಕಾರಕ ದೋಷಗಳನ್ನು ಮೀರಿ ದೃಷ್ಟಿಯ ಮೇಲೆ ಪರಿಣಾಮ ಬೀರಬಹುದು. ಅಕೊಮ್ಮೊಡೇಟಿವ್ ಸ್ಪಾಸಂ, ಅಕೊಮ್ಮೊಡೇಟಿವ್ ಇನ್ಫೆಸಿಲಿಟಿ, ಕನ್ವರ್ಜೆನ್ಸ್ ಇನ್ಸಫಿಷಯನ್ಸಿ, ಸ್ಯೂಡೋಮಯೋಪಿಯಾ ಮತ್ತು ಸಮೀಪ ದೃಷ್ಟಿಯ ಹೆಚ್ಚಳದಂತಹ ಸಾಮಾನ್ಯ ಸಮಸ್ಯೆಗಳು ಮಗುವಿನ ಪರೀಕ್ಷೆಯ ಕಾರ್ಯಕ್ಷಮತೆಯ ಮೇಲೆ ಗಮನಾರ್ಹ ಪರಿಣಾಮ ಬೀರುತ್ತವೆ.

ಈ ಕಣ್ಣಿನ ಸಮಸ್ಯೆಗಳಿರುವ 50%ಕ್ಕಿಂತ ಹೆಚ್ಚು ರೋಗಿಗಳು 10ನೇ ತರಗತಿ/ಪಿ.ಯು.ಸಿ ಅಥವಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವವರಿದ್ದಾರೆ. ದುರದೃಷ್ಟವಶಾತ್, 95% ದೃಷ್ಟಿ ಕೇಂದ್ರೀಕರಿಸುವ ಸಮಸ್ಯೆಗಳು ಅಥವಾ ಬೈನಾಕ್ಯುಲರ್ ದೃಷ್ಟಿ ವೈಪರೀತ್ಯಗಳು ದಿನನಿತ್ಯದ ಕಣ್ಣಿನ ಪರೀಕ್ಷೆಗಳಲ್ಲಿ ರೋಗನಿರ್ಣಯ ಮಾಡಲಾಗುವುದಿಲ್ಲ. ಗಮನಿಸದೆ ಬಿಟ್ಟಲ್ಲಿ, ಈ ಸಮಸ್ಯೆಗಳು ಕಣ್ಣಿನ ಆಯಾಸ, ದೌರ್ಬಲ್ಯ, ಕಳಪೆ ಏಕಾಗ್ರತೆ, ಆಗಾಗ್ಗೆ ತಲೆನೋವು, ಎರಡೆರಡು ದೃಷ್ಟಿ ಮತ್ತು ಮಸುಕಾದ ದೃಷ್ಟಿ ಮುಂತಾದ ರೋಗಲಕ್ಷಣಗಳಿಗೆ ಕಾರಣವಾಗಬಹುದು.



ಕೇಂದ್ರೀಕರಿಸುವ ಸಮಸ್ಯೆಗಳು ಮತ್ತು ಬೈನಾಕ್ಯುಲರ್ ದೃಷ್ಟಿ ವೈಪರೀತ್ಯಗಳ ಜೊತೆಗೆ, ಡಿಜಿಟಲ್ ಪರದೆಗಳ ಅತಿಯಾದ ಬಳಕೆ ಮತ್ತು ಆನ್‌ಲೈನ್ ಅಧ್ಯಯನ ಸಾಮಗ್ರಿಗಳನ್ನು ಓದಲು ಹೆಚ್ಚಿದ ಪರದೆಯ ಸಮಯದಿಂದ ಶುಷ್ಕ ಕಣ್ಣುಗಳು, ಸಮೀಪ ದೃಷ್ಟಿಯ ಹೆಚ್ಚಾಗುವಿಕೆ ಮತ್ತು ನಿದ್ರಾಹೀನತೆಗೆ ಕಾರಣವಾಗಬಹುದು.

ಈ ರೋಗಲಕ್ಷಣಗಳನ್ನು ಸಾಮಾನ್ಯವಾಗಿ ಪೋಷಕರು ಅಥವಾ ಶಿಕ್ಷಕರು ಅಧ್ಯಯನದಲ್ಲಿ ನಿರಾಸಕ್ತಿ ಎಂದು ತಪ್ಪಾಗಿ ಅರ್ಥೈಸುತ್ತಾರೆ, ಇದು ಮಕ್ಕಳಲ್ಲಿ ಆತ್ಮವಿಶ್ವಾಸದ ಕೊರತೆ ಮತ್ತು ಅತಿಯಾದ ಹೊರೆಯ ಭಾವನೆಗೆ ಕಾರಣವಾಗುತ್ತದೆ.



Downloaded From:www.kpscvaani.com



ಸಾಂಪ್ರದಾಯಿಕ ಕಣ್ಣಿನ ತಪಾಸಣೆಗಳು ಸಾಮಾನ್ಯವಾಗಿ ದೂರದ ದೃಷ್ಟಿಯ ಸಮಸ್ಯೆಗಳನ್ನು ಗುರುತಿಸುವುದರ ಮೇಲೆ ಕೇಂದ್ರೀಕರಿಸುತ್ತವೆ.

ಹೀಗಾಗಿ ವಿವರವಾದ ಆರ್ಥೋಪ್ಟಿಕ್ ಮೌಲ್ಯಮಾಪನದ ಅಗತ್ಯವಿರುವ ಕಣ್ಣಿನ ಸಮಸ್ಯೆಗಳ ನಿರ್ಣಾಯಕ ರೋಗನಿರ್ಣಯವನ್ನು ಕಳೆದುಕೊಳ್ಳುತ್ತವೆ. ಈ ಮೌಲ್ಯಮಾಪನವು ಕನ್ನಡಕಗಳು, ನಿಗದಿಪಡಿಸಲಾದ ಕಣ್ಣಿನ ವ್ಯಾಯಾಮಗಳು ಮತ್ತು ಅಪರೂಪದ ಸಂದರ್ಭಗಳಲ್ಲಿ, ಕೆಲವೊಮ್ಮೆ ಅಪರೂಪದ ಪ್ರಕರಣಗಳಲ್ಲಿ ವಿಶೇಷ ಕೇಂದ್ರಗಳಲ್ಲಿ ಮಾತ್ರ ಶಸ್ತ್ರಚಿಕಿತ್ಸೆ ಒಳಗೊಂಡಿರುವ ಸೂಕ್ತವಾದ ಚಿಕಿತ್ಸೆಯನ್ನು ಖಚಿತಪಡಿಸುತ್ತದೆ.

ಮಗುವಿಗೆ ಪ್ರಚೋದಕ ಅಂಶಕ್ಕೆ (ಪರೀಕ್ಷೆಗಳು ಅಥವಾ ಒತ್ತಡ) ಒಡ್ಡಿಕೊಂಡಾಗ ಪ್ರತಿ ಬಾರಿಯೂ ಅಕೊಮ್ಮೊಡೇಟಿವ್ ಸ್ಪಾಸಂ, ಅಕೊಮ್ಮೊಡೇಟಿವ್ ಇನ್ಫೆಸಿಲಿಟಿ, ಕನ್ವರ್ಜೆನ್ಸ್ ಇನ್ಸಫಿಷ್ಯಂನ್ಸಿ ಅಂತಹ ಕಣ್ಣಿನ ಪರಿಸ್ಥಿತಿಗಳು ಮರುಕಳಿಸಬಹುದು. ಹಾಗಾಗಿ ಪರೀಕ್ಷೆಗಳಿಗೆ ಅಧ್ಯಯನ ಮಾಡುವಾಗ ಈ ಕೆಳಕಂಡ ಕೆಲವು ಸಲಹೆಗಳನ್ನು ಅನುಸರಿಸುವುದು ಅತ್ಯಗತ್ಯ:

- ಓದುವಾಗ ಕಣ್ಣು ಹಾಗೂ ಪುಸ್ತಕದ ಅಂತರವು 14–16 ಇಂಚುಗಳು ಇರುವ ಹಾಗೆ ಕಾಪಾಡಿಕೊಳ್ಳಬೇಕು.
- ಆನ್‌ಲೈನ್ ಅಧ್ಯಯನ ಸಾಮಗ್ರಿಗಳಿಗಾಗಿ ಮೊಬೈಲ್ ಫೋನ್‌ಗಳಂತಹ ಸಣ್ಣ ಸಾಧನಗಳನ್ನು ಬಳಸುವುದನ್ನು ತಪ್ಪಿಸಿ.
- ಆಗಾಗ್ಗೆ ವಿರಾಮ ತೆಗೆದುಕೊಳ್ಳಲು 20–20–20 ನಿಯಮವನ್ನು ಅನುಸರಿಸಿ.
- ವಿರಾಮದ ಸಮಯದಲ್ಲಿ, ಮೊಬೈಲ್ ಫೋನ್ ಬಳಸುವುದನ್ನು ಅಥವಾ ಟಿವಿ ನೋಡುವುದನ್ನು ತಪ್ಪಿಸಿ.
- ನಿಮ್ಮ ಕಣ್ಣುಗಳಿಗೆ ವಿಶ್ರಾಂತಿ ನೀಡಲು ಮತ್ತು ಏಕಾಗ್ರತೆಯನ್ನು ಸುಧಾರಿಸಲು ಧ್ಯಾನವನ್ನು ಅಭ್ಯಾಸ ಮಾಡಿಕೊಳ್ಳಿ.
- ಆರೋಗ್ಯಕರ ಆಹಾರವನ್ನು ಸೇವಿಸಿ.
- ಸಾಕಷ್ಟು ನಿದ್ರೆಯನ್ನು ಮಾಡುವ ಜೊತೆಗೆ ನಿಯಮಿತವಾಗಿ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳಬೇಕು.

ದೃಷ್ಟಿ ಕೇಂದ್ರೀಕರಿಸುವಿಕೆ ಅಥವಾ ಬೈನಾಕ್ಯುಲರ್ ದೃಷ್ಟಿ ವೈಪರೀತ್ಯಗಳನ್ನು ತ್ವರಿತವಾಗಿ ಪರಿಹರಿಸಲು ವಿಫಲವಾದರೆ ಕಣ್ಣಿನ ಸ್ನಾಯುಗಳಲ್ಲಿ ಶಾಶ್ವತ ಬದಲಾವಣೆಗಳಾಗಲು ಕಾರಣವಾಗಬಹುದು, ಚಿಕಿತ್ಸೆಯನ್ನು ಮತ್ತಷ್ಟು ಸವಾಲಾಗಿಸುವಂತೆ ಮಾಡುತ್ತದೆ. ಆದ್ದರಿಂದ, ಈ ಪರಿಸ್ಥಿತಿಗಳಿಗೆ ಸಕಾಲಿಕ ಚಿಕಿತ್ಸೆ, ವಿಶೇಷವಾಗಿ ಕನ್ನಡಕದಿಂದ ಮಾತ್ರ ಚಿಕಿತ್ಸೆ ನೀಡಲಾಗದವುಗಳು ನಿರ್ಣಾಯಕವಾಗಿವೆ.

ಶೈಕ್ಷಣಿಕ ಯಶಸ್ಸಿಗೆ ಓದು ಅತ್ಯಗತ್ಯವಾದರೂ ಗಂಟಾನುಗಟ್ಟಲೆ ಬಿಡುವು ನೀಡದೆ ಓದುವುದರಿಂದ ನಿದ್ದೆಯಿಲ್ಲದೆ ಮಕ್ಕಳು ಒತ್ತಡಕ್ಕೆ ಸಿಲುಕುವ ಜೊತೆಗೆ ಸಮೀಪ ದೃಷ್ಟಿ ಹೆಚ್ಚಳದಂತಹ ಸಮಸ್ಯೆಗೆ ಒಳಗಾಗುತ್ತಾರೆ. ಆದ್ದರಿಂದ ಪರೀಕ್ಷಾ ಸಿದ್ಧತೆಯಲ್ಲಿ ತೊಡಗಿರುವಂತಹ ವಿದ್ಯಾರ್ಥಿಗಳು ಮೊಬೈಲ್, ಟಿ.ವಿ ಮುಂತಾದ ಡಿಜಿಟಲ್ ಸಾಧನಗಳ ಬಳಕೆಯನ್ನು ಕಡಿಮೆ ಮಾಡಿ ಪರೀಕ್ಷೆ ಸಮಯದಲ್ಲಿ ವಿಶ್ರಾಂತಿ ಹಾಗೂ ನಿದ್ದೆಗೂ ಹೆಚ್ಚಿನ ಗಮನ ನೀಡಬೇಕು.


Downloaded From:www.kpscvaani.com




# ಮರಾಠಿ ಮಣ್ಣಿನಲ್ಲಿ ಶ್ರಮಿಕ ಮಕ್ಕಳ ಕನ್ನಡ ಶಾಲೆ



**ಕನ್ನಡ ಭಾಷೆಯ ಕಂಪನ್ನು ಸೂಸುತ್ತಿರುವ ಅರವತ್ತು ವರ್ಷ ಪೂರೈಸಿದ ಪುಣೆಯ ಕಲ್ಮಾಡಿ ಶಾಮರಾವ್ ಹೈಸ್ಕೂಲ್**

ಮಂಜುನಾಥ್ ಚಾಂದ್

ಕರ್ನಾಟಕದ ದಕ್ಷಿಣಕನ್ನಡ, ಉತ್ತರಕರ್ನಾಟಕದ ನಾನಾ ಭಾಗಗಳಿಂದ ಸಣ್ಣಪುಟ್ಟ ಉದ್ಯೋಗಗಳನ್ನು ಅರಸಿಕೊಂಡು ಮಹಾರಾಷ್ಟ್ರದ ಮುಂಬೈ ಮತ್ತು ಪುಣೆಗೆ ಸಾಕಷ್ಟು ಮಂದಿ ವಲಸೆ ಹೋಗುವುದು ಸಾಮಾನ್ಯವಾಗಿತ್ತು. ಹೋಟೆಲ್‌ಗಳಲ್ಲಿ, ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಇವರೆಲ್ಲ ತೊಡಗಿಕೊಳ್ಳುತ್ತಿದ್ದರು. ಇವರಿಗೆಲ್ಲ ಸ್ಥಿರವಾದ ಬದುಕು ಇರಲಿಲ್ಲ. ಉದ್ಯೋಗವೂ ಸ್ಥಿರವಾದುದಲ್ಲ. ಇಂತಹ ಶ್ರಮಿಕ ವರ್ಗದ ಮಕ್ಕಳ ಭವಿಷ್ಯವಂತೂ ಸದಾ ಅಂಧಕಾರದಲ್ಲಿಯೇ ಮುಳುಗಿರುತ್ತಿತ್ತು. ಸೂಕ್ತವಾದ ಶಿಕ್ಷಣ ದೂರದ ಮಾತಾಗಿತ್ತು.

ಪುಣೆಯಲ್ಲಿ ಇಂತಹ ಶ್ರಮಿಕ ವರ್ಗದ ಮಕ್ಕಳು ಅನೇಕ ಕಡೆಗಳಲ್ಲಿ ಬೀಡು ಬಿಟ್ಟಿದ್ದರು. ಇವರಲ್ಲಿ ಬಹಳಷ್ಟು ಜನರು ನಿರ್ಗತಿಕರು. ಇವರ ಪಾಡನ್ನು ಕಣ್ಣಾರೆ ಕಂಡವರು ಕಲ್ಮಾಡಿ ಶಾಮರಾವ್. ಕನ್ನಡದ ಮಕ್ಕಳ ತಲೆಮಾರೊಂದು ಹೀಗೆ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುವುದನ್ನು ಮನಗಂಡ ಅವರು ಇಂತಹ ಮಕ್ಕಳಿಗಾಗಿಯೇ ಒಂದು ಶಾಲೆಯನ್ನು ತೆರೆಯುವ ಸಂಕಲ್ಪ ಮಾಡಿದರು. ಆ ವೇಳೆಗಾಗಲೇ ಪುಣೆಯಲ್ಲಿ ಕನ್ನಡ ಸಂಘವನ್ನು ಕಟ್ಟಿ ಬೆಳೆಸಿದ ಶ್ರೇಯಸ್ಸು, ಅನುಭವ ಅವರಿಗಿತ್ತು. ಇದರ ಆಧಾರದಲ್ಲಿಯೇ ಅವರು ಕನ್ನಡದ ಶ್ರಮಿಕ ಮಕ್ಕಳಿಗಾಗಿ ಒಂದೇ ಒಂದು ಕೊಠಡಿಯ ಶಾಲೆಯನ್ನು ಆರಂಭಿಸಿದರು. ಹಾಗೆ 1963ರಲ್ಲಿ ಬಾಡಿಗೆ ಕಟ್ಟಡದಲ್ಲಿ ಶುರುವಾದ ಶಾಲೆ-ಕರ್ನಾಟಕ ಹೈಸ್ಕೂಲ್. ಅಂದು ಇದ್ದ ಮಕ್ಕಳ ಸಂಖ್ಯೆ ಮೂವತ್ತೈದು.

"ಶಾಲೆಯೊಂದನ್ನು ತೆರೆದರೆ ಅನೇಕ ಕುಟುಂಬಗಳಲ್ಲಿ ಬೆಳಕು ಕಾಣುತ್ತದೆ, ತಲೆಮಾರುಗಳೇ ವಿಕಾಸದ ಹಾದಿಯಲ್ಲಿ ಸಾಗುತ್ತವೆ" ಎಂಬುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕಿಲ್ಲ ಅನಿಸುತ್ತದೆ.

ತಮ್ಮ ಪಾಲಕರು ಮಾಡುತ್ತಿದ್ದ ಕೆಲಸಗಳಲ್ಲಿಯೇ ಮಗ್ನರಾಗುತ್ತಿದ್ದ ಮಕ್ಕಳು ಶಾಲೆಯ ಮುಖ ಕಾಣಲು ಶುರುಮಾಡಿದರು. ತಮ್ಮ ಮಕ್ಕಳು ಓದಿ ಉತ್ತಮ ಶಿಕ್ಷಣ ಪಡೆಯುವಂತಾಗಬೇಕು ಎಂಬ ಹಂಬಲ ಹೊಂದಿದ್ದ ಪುಣೆಯ ಸುತ್ತಮುತ್ತ ಹೋಟೆಲ್ ಮತ್ತು ಕಟ್ಟಡ ನಿರ್ಮಾಣ ಕೆಲಸಗಳಲ್ಲಿ ತೊಡಗಿಕೊಂಡಿದ್ದ ಕಾರ್ಮಿಕರಿಗೆ ಈ ಕನ್ನಡ ಶಾಲೆ ಹೊಸ


Downloaded From:www.kpscvaani.com

ಆಶಾಕಿರಣವನ್ನು ಮೂಡಿಸಿತು. ತಮ್ಮ ಕಾಲನಿಯಿಂದ ಶಾಲೆ ಎಷ್ಟೇ ದೂರಾಗಿದ್ದರೂ ಕೂಡ ಪಾಲಕರು ಮಕ್ಕಳನ್ನು ಇಲ್ಲಿಗೆ ಬಂದು ಸೇರಿಸಲು ಆರಂಭಿಸಿದರು. 'ಅಮ್ಚೀ ಮರಾಠಿ' ಎನ್ನುವ ಊರಿನಲ್ಲಿ ತಮ್ಮ ಮಕ್ಕಳನ್ನೂ ಓದಿಸುವ ಕನ್ನಡ ಶಾಲೆಯೊಂದು ಇದೆಯಲ್ಲ ಎನ್ನುವುದೇ ಅವರ ಪಾಲಿನ ನೆಮ್ಮದಿಯ ವಿಷಯವಾಗಿತ್ತು.




ಹಾಗಾಗಿ ಇದು ಉಳ್ಳವರ ಮಕ್ಕಳ ಶಾಲೆಯಲ್ಲ. ಕಾರ್ಮಿಕರ ಮಕ್ಕಳ ಶಾಲೆ. ಅಕ್ಷರಶಃ ಅಕ್ಷರದಿಂದ ದೂರಾಗಿದ್ದವರ ಶಾಲೆ. ತಮ್ಮ ಪಾಲಕರು ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದರೆ ಅದೇ ಹೋಟೆಲ್‌ನಲ್ಲಿ ಪಾತ್ರೆ, ಲೋಟ ತೊಳೆದುಕೊಂಡೋ, ನೆಲ ಒರೆಸಿಕೊಂಡೋ ಇರುತ್ತಿದ್ದ ಮಕ್ಕಳ ಕಣ್ಣುಗಳಲ್ಲಿ ಭವಿಷ್ಯದ ಬಣ್ಣ ಬಣ್ಣದ ಕನಸುಗಳನ್ನು ಮೂಡುವಂತೆ ಮಾಡಿದವರು ಡಾ. ಕಲ್ಮಾಡಿ ಶಾಮರಾವ್. ಅವರಿಗೆ ಸಾಥ್ ನೀಡಿದವರು ಖ್ಯಾತ ಉದ್ಯಮಿ ಜಿ.ಎಂ.ಶೆಟ್ಟಿ. ಇವರಿಬ್ಬರ ದೂರದೃಷ್ಟಿಯ ಫಲವಾಗಿ ಸಾವಿರಾರು ಮಕ್ಕಳು ರೆಕ್ಕೆ ಬಲಿತು ಪ್ರಪಂಚವನ್ನು ಕಾಣುವಂತಾಯಿತು ಎಂದರೆ ಅಚ್ಚರಿಯಿಲ್ಲ.

ಅದರಲ್ಲಿಯೂ ಮುಖ್ಯವಾಗಿ ಮರಾಠಿ ಪ್ರಾಬಲ್ಯವನ್ನು ಹೊಂದಿರುವ ಪುಣೆಯಲ್ಲಿ ಕನ್ನಡ ಶಾಲೆಯೊಂದು ತಳವರ್ಗದ ಮಕ್ಕಳ ಅಭ್ಯುದಯವನ್ನೇ ಮುಖ್ಯ ಧ್ಯೇಯವಾಗಿರಿಸಿಕೊಂಡು ಆರು ದಶಕಗಳಿಂದ ನಿರಂತರವಾಗಿ ತನ್ನ ಕೈಂಕರ್ಯವನ್ನು ಮುಂದುವರಿಸಿಕೊಂಡು ಬಂದಿರುವುದು ಹೆಮ್ಮೆಯ ಸಂಗತಿ. ಇಲ್ಲಿರುವುದು ಲಾಭದ ಉದ್ದೇಶವಲ್ಲ, ಇದು ಶುದ್ಧ ಸೇವಾ ಮನೋಭಾವನೆ.

ಪುಣೆ ನಗರದ ನಾನಾ ಭಾಗಗಳಲ್ಲಿ ಚದುರಿ ಹೋಗಿರುವ ಕನ್ನಡಿಗರನ್ನು ಒಟ್ಟುಗೂಡಿಸುವ ಉದ್ದೇಶದಿಂದ 1953ರಲ್ಲಿಯೇ ಕನ್ನಡ ಸಂಘ ಸ್ಥಾಪನೆಯಾಗಿತ್ತು. ಆಟೋಟ, ಸಾಂಸ್ಕೃತಿಕ ಮತ್ತಿತರ ಕಾರ್ಯಕ್ರಮಗಳನ್ನು ನಡೆಸುವುದು, ಹಿರಿಯರನ್ನು ಗೌರವಿಸುವಂತಹ ಚಟುವಟಿಕೆಗಳ ಮೂಲಕ ತಮ್ಮ ಊರು ಬಿಟ್ಟು ಬಂದವರನ್ನು ಒಂದೆಡೆ ಸೇರಿಸುವುದು ಈ ಸಂಘದ ಮುಖ್ಯ ಉದ್ದೇಶವಾಗಿತ್ತು. ಇಂತಹುದೊಂದು ಸಂಘಟನೆ ಶೈಕ್ಷಣಿಕ ಕ್ಷೇತ್ರದಲ್ಲಿಯೂ ಸೈ ಎನಿಸಿಕೊಂಡಿದ್ದು ಅವಿಸ್ಮರಣೀಯ.

ಆ ಕಾಲದಲ್ಲಿ ಪುಣೆ ನಗರದಲ್ಲಿ ಕೆಲವು ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಕಲಿಸುತ್ತಿದ್ದರು. ಆದರೆ ನಾಲ್ಕನೇ ತರಗತಿಯ ಬಳಿಕ ಅದು ಸಾಧ್ಯವಿರಲಿಲ್ಲ. ಯಾಕೆಂದರೆ ಇಲ್ಲಿ ಯಾವುದೇ ಕನ್ನಡ ಮಾಧ್ಯಮ ಶಾಲೆಗಳಿರಲಿಲ್ಲ. ಆರಂಭದಲ್ಲಿ ಪುಣೆನಗರದಲ್ಲಿದ್ದ ನಾನಾ ಶಾಲಾ–ಕಾಲೇಜುಗಳ ಸಹಾಯ ಪಡೆದುಕೊಂಡು ಅಲ್ಲಿನ ತರಗತಿಗಳಲ್ಲಿ ಈ ಮಕ್ಕಳಿಗೆ ಪಾಠ ಮಾಡಲಾಗುತ್ತಿತ್ತು.

ಇಂತಹ ಶಾಲೆಗೆ ಕ್ರಮೇಣ ಬೇಡಿಕೆ ಹೆಚ್ಚಾಗಿದ್ದರಿಂದ ಕಾರ್ಮಿಕರ ಮಕ್ಕಳಿಗೆ ಹೇಗಾದರೂ ಮಾಡಿ ಸ್ವಂತ ಕಟ್ಟಡ ನಿರ್ಮಿಸಬೇಕು ಎಂಬ ಕನಸು ಹೊತ್ತ ಶಾಮರಾವ್ ಅವರು ಪ್ರಭಾತ್ ರಸ್ತೆಯ ಎರಂಡವಾನೆಯಲ್ಲಿ ಅದಕ್ಕೊಂದು ಜಾಗ ಹುಡುಕಿದರು. ಅಲ್ಲಿ ಕಟ್ಟಡ ನಿರ್ಮಿಸುವ ಕೆಲಸವನ್ನೂ ಶುರು ಮಾಡಿಕೊಂಡರು. ಆಗೆಲ್ಲ ಅವರು ತಮ್ಮ ಅಂಬಾಸಡರ್ ಕಾರಿನಲ್ಲಿಯೇ ಕಲ್ಲುಗಳನ್ನು ತುಂಬಿಕೊಂಡು ಬರುತ್ತಿದ್ದರು. ಎದ್ದು ನಿಂತ ಶಾಲೆಯ ಗೋಡೆಗಳ ಕ್ಯೂರಿಂಗ್‌ಗೆ ತಾವೇ ನಿಂತು ನೀರು ಹಾಕುತ್ತಿದ್ದರು. ಅಂದರೆ ಅವರಿಗೆ ತಮ್ಮ ಮುಂದಿನ ತಲೆಮಾರಿನ ಶಿಕ್ಷಣದ ಬಗ್ಗೆ ಎಂತಹ ಕಾಳಜಿ ಇತ್ತು ಎಂಬುದು ವೇದ್ಯವಾಗುತ್ತದೆ.

ಅವರ ಈ ಅವಿರತ ಶ್ರಮದ ಫಲವಾಗಿ ಶ್ರಮಿಕರ ಮಕ್ಕಳಿಗೆ 1966ರಲ್ಲಿ ಪ್ರಭಾತ್ ರಸ್ತೆಯ ಎರಂಡವಾನೆಯಲ್ಲಿ ಕನ್ನಡ ಮಾಧ್ಯಮ ಶಾಲೆಗೆ ಸ್ವಂತ ಕಟ್ಟಡ ನಿರ್ಮಾಣವಾಯಿತು. ಅಲ್ಲಿಯ ತರಗತಿಗಳಲ್ಲಿ ಶ್ರಮಿಕ ಮಕ್ಕಳು ಅಕ್ಷರ




Downloaded From:www.kpscvaani.com



ಕಲಿಯುವುದನ್ನು ಆರಂಭಿಸಿದಾಗ ಶಾಮರಾವ್ ಅವರ ಆಶಯ ಪೂರ್ಣಗೊಂಡಿತ್ತು. ಕನಸು ನನಸಾಗಿದ್ದಕ್ಕೆ ಅವರ ಕಣ್ಣುಗಳು ಅಕ್ಷರಶಃ ತೇವಗೊಂಡಿದ್ದವು.

ಆ ಬಳಿಕ ಶಾಲೆ ವರ್ಷದಿಂದ ವರ್ಷಕ್ಕೆ ಮಕ್ಕಳ ಸಂಖ್ಯೆ ಹೆಚ್ಚಾಯಿತು. ಕಟ್ಟಡ ಕಾರ್ಮಿಕರ ಮಕ್ಕಳು, ಹೋಟೆಲ್ ಕಾರ್ಮಿಕರ ಮಕ್ಕಳು ನಗರದ ಯಾವುದೇ ಮೂಲೆಯಲ್ಲಿದ್ದರೂ ಈ ಶಾಲೆಗೆ ಎಡತಾಕಲು ಶುರುಮಾಡಿದರು. ಅವರ ಕನಸುಗಳಿಗೆ ರೆಕ್ಕೆ ಪುಕ್ಕ ಬಂದಿತು. ಮಕ್ಕಳ ಭವಿಷ್ಯ ರೂಪಿಸಲೊಂದು ಶಾಲೆ ಸಿಕ್ಕಿದ್ದರಿಂದ ಪಾಲಕರೂ ಪುಳಕಿತರಾದರು. ಇಂದು ಇಡೀ ಮಹರಾಷ್ಟ್ರದಲ್ಲಿ ಹೀಗೆ ಆರವತ್ತು ವರ್ಷಗಳನ್ನು ಪೂರೈಸಿದ ಇನ್ನೊಂದು ಕನ್ನಡ ಮಾಧ್ಯಮ ಶಾಲೆ ಇಲ್ಲ.

ಈ ಕನ್ನಡ ಮಾಧ್ಯಮ ಶಾಲೆಯನ್ನು ಬೆಳೆಸಲು ಶಾಮರಾವ್ ಅವರು ಮುಂದೆಯೂ ಹಗಲಿರುಳೂ ಶ್ರಮಿಸಿದರು. ನಿಧಿ ಸಂಗ್ರಹಕ್ಕಾಗಿ ಅನೇಕ ಸಾಂಸ್ಕೃತಿಕ ಹಾಗೂ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ಅಂತಹ ಸಂದರ್ಭಗಳಲ್ಲಿ ಶಾಮರಾಯರ ನೆರವಿಗೆ ನಿಂತವರು ಸಂಗೀತ ದಿಗ್ಗಜ ಪಂಡಿತ್ ಭೀಮ್ ಸೇನ್ ಜೋಷಿಯವರು.

ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಅವರೂ ಕೂಡ ಅನೇಕ ಕಾರ್ಯಕ್ರಮಗಳನ್ನು ಶಾಲೆಗಾಗಿ ನಡೆಸಿಕೊಟ್ಟಿದ್ದನ್ನು ಹಳೆಯ ವಿದ್ಯಾರ್ಥಿಗಳು ನೆನಪಿಸಿಕೊಳ್ಳುತ್ತಾರೆ.

ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಮಕ್ಕಳು ಪ್ರೌಢ ಶಿಕ್ಷಣಕ್ಕಾಗಿ ಈ ಶಾಲೆಗೆ ಬರುತ್ತಾರೆ. ಇಂದು 146 ಮಕ್ಕಳು ಈ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇವರಲ್ಲಿ 78 ಮಂದಿ ಹೆಣ್ಣುಮಕ್ಕಳು. 68 ಮಂದಿ ಗಂಡು ಮಕ್ಕಳು. ಐವರು ಪೂರ್ಣಕಾಲಿಕ ಶಿಕ್ಷಕರಿದ್ದಾರೆ ಮತ್ತು ಮೂವರು ಸಹಾಯಕ ಶಿಕ್ಷಕರಿದ್ದಾರೆ. ಎಸ್‌ಎಸ್‌ಎಲ್‌ಸಿ ಬೋರ್ಡ್ ಪಠ್ಯಕ್ರಮದಂತೆ ನಡೆಯುತ್ತಿರುವ ಶಾಲೆಗೆ ಮಹಾರಾಷ್ಟ್ರ ಸರ್ಕಾರದಿಂದ ಸಹಾಯಧನ ಕೂಡ ಸಿಗುತ್ತಿದೆ.

ಕೇವಲ ಪಠ್ಯಕ್ರಮಗಳು ಮಾತ್ರವಲ್ಲದೆ ಮಕ್ಕಳು ಮಲ್ಲಕಂಭ, ಟೇಕ್ವಾಂಡೋ, ಕಂಪ್ಯೂಟರ್, ಸಂಗೀತ, ಹೊಲಿಗೆ, ಕಸೂತಿ ಕೆಲಸವನ್ನು ಕೂಡ ಪಡೆದುಕೊಳ್ಳುತ್ತಿರುವುದು ವಿಶೇಷ. ವಿದ್ಯಾರ್ಥಿಗಳ ಪಾಲಕರ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಉಚಿತ ಸಮವಸ್ತ್ರ, ಪಠ್ಯಪುಸ್ತಕಗಳನ್ನು ಕೂಡ ಒದಗಿಸಲಾಗುತ್ತದೆ. ಶಾಲೆಯ ಗ್ರಂಥಾಲಯದಲ್ಲಿ ಕನ್ನಡ ಪುಸ್ತಕಗಳ ದೊಡ್ಡ ಭಂಡಾರವೇ ಇರುವುದು ವಿಶೇಷ. ಇಲ್ಲಿನ ಆಡಿಟೋರಿಯಂನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಕ್ಕಳು ನಡೆಸಿಕೊಡುತ್ತಾರೆ. ವರ್ಷಕ್ಕೆ ಕನಿಷ್ಠ ಎರಡು ಕನ್ನಡ ನಾಟಕಗಳನ್ನು ಪ್ರದರ್ಶನ ಮಾಡುತ್ತಾರೆ. ಅವರಿಗೆಲ್ಲ ಸೂಕ್ತವಾದ ತರಬೇತಿಯನ್ನು ನೀಡುವ ಶಿಕ್ಷಕರಿದ್ದಾರೆ.

ಶಾಲೆಯ ಶಿಕ್ಷಣವನ್ನು ಪೂರ್ತಿಗೊಳಿಸಿದ ವಿದ್ಯಾರ್ಥಿಗಳು ಪ್ರತಿಷ್ಠಿತ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಶೂನ್ಯ ಬಡ್ಡಿದರದಲ್ಲಿ ಶಿಕ್ಷಣ ಸಾಲವನ್ನೂ ಒದಗಿಸಲಾಗುತ್ತಿದೆ. ವಿದ್ಯಾರ್ಥಿನಿಯರಿಗೆ ದೊರೆಯುತ್ತಿರುವ ಲೀಲಾ ಪೂನಾವಾಲಾ ವಿದ್ಯಾರ್ಥಿ ವೇತನ ಇನ್ನೊಂದು ಆಶಾಕಿರಣವಾಗಿದೆ. ಈ ಎಲ್ಲ ಅವಕಾಶಗಳನ್ನು ಪಡೆದ ಸಾಕಷ್ಟು ಮಕ್ಕಳು ಕಳೆದ ಆರವತ್ತು ವರ್ಷಗಳ ಅವಧಿಯಲ್ಲಿ ಎಂಜಿನಿಯರಿಂಗ್, ವೈದ್ಯಕೀಯ, ವಿಜ್ಞಾನ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಜೀವನವನ್ನು ಕಟ್ಟಿಕೊಂಡಿದ್ದಾರೆ.

ಇಂದಿಗೂ ಇಂತಹ ಅಪರೂಪದ ಕನ್ನಡ ಮಾಧ್ಯಮ ಶಾಲೆಯನ್ನು ಹಳೆಯ ವಿದ್ಯಾರ್ಥಿಗಳು ಮರೆತಿಲ್ಲ. ಆಗಾಗ ಶಾಲೆಗೆ ಭೇಟಿ ನೀಡಿ ರಕ್ತದಾನ ಶಿಬಿರವೂ ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಾರೆ. ಬಡ ವಿದ್ಯಾರ್ಥಿಗಳಿಗೆ ನೆರವಾಗುತ್ತಾರೆ. ಸಂಸ್ಥೆಯ ಟ್ರಸ್ಟಿಗಳು ಕೂಡ ಆಗಾಗ ತರಗತಿಗಳಲ್ಲಿ ಮಕ್ಕಳಿಗೆ ಪಾಠಗಳನ್ನು ಮಾಡುತ್ತಾರೆ. ಅಧ್ಯಕ್ಷರಾದ ಕುಶಲ್ ಹೆಗ್ಡೆ, ಉಪಾಧ್ಯಕ್ಷರಾದ ಇಂದಿರಾ ಸಾಲ್ಯಾನ್, ಡಾ. ನಾರಾಯಣ ಹೆಗ್ಡೆ ಅವರು ಶಾಮರಾವ್ ಅವರ ಕನಸುಗಳನ್ನು ಜೀವಂತವಾಗಿ ಇಡುವಲ್ಲಿ ನಿರಂತರ ಶ್ರಮ ವಹಿಸಿದ್ದಾರೆ. ಶಾಲೆಯನ್ನು ತಮ್ಮ ರಕ್ತ–ಮಾಂಸದಂತೆ ನೋಡಿಕೊಂಡಿದ್ದಾರೆ. 1995ರಲ್ಲಿ ಶಾಮರಾವ್ ಅವರು ನಿಧನರಾದ ಬಳಿಕ ಅಂದರೆ 1996ರಲ್ಲಿ ಈ ಶಾಲೆಗೆ 'ಕಲ್ಮಾಡಿ ಶಾಮರಾವ್' ಅವರ ಹೆಸರನ್ನು ನಾಮಕರಣ ಮಾಡಲಾಯಿತು.

ಮರಾಠಿ ಮಣ್ಣಿನಲ್ಲಿ ಕನ್ನಡಿಗ ಶಾಮರಾವ್ ಅವರು ಬಿತ್ತಿದ ಕನಸಿನ ಬೀಜ ಇಂದು ಹೆಮ್ಮರವಾಗಿ ಬೆಳೆದಿದೆ. ಅದರ ಫಲವನ್ನು ತಿಂದ ಮಕ್ಕಳು ಇಂದು ವಿಶ್ವದಾದ್ಯಂತ ಹಬ್ಬಿದ್ದಾರೆ. ಇತ್ತೀಚೆಗಷ್ಟೇ ವಜ್ರಮಹೋತ್ಸವವನ್ನು ಆಚರಿಸಿಕೊಂಡಿರುವ ಡಾ. ಕಲ್ಮಾಡಿ ಶಾಮರಾವ್ ಹೈಸ್ಕೂಲ್ ಕನ್ನಡದ ಇನ್ನಷ್ಟು ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸಲು ಕಂಕಣಬದ್ಧವಾಗಿದೆ. ■





Downloaded From:www.kpscvaani.com



# ವಾಹನ ಪಾರ್ಕಿಂಗ್ ಕುರಿತ ಕಾನೂನು ನಿಯಮಗಳು


ಡಾ. ಅನಿಲ್‌ಕುಮಾರ್ ಪಿ. ಗ್ರಾಮಪುರೋಹಿತ್

**ಪ್ರತಿಯೊಬ್ಬರೂ ವಾಹನ ಖರೀದಿಸುವ ಮುನ್ನ ಪಾರ್ಕಿಂಗ್ ಕುರಿತ ಕಾನೂನು ಮತ್ತು ನಿಯಮಗಳ ಬಗ್ಗೆ ತಿಳಿದುಕೊಳ್ಳುವುದು ಸೂಕ್ತ.**

"ನನ್ನ ಹತ್ತಿರ ಎರಡು ಕಾರ್ ಇದ್ದರೂ ಕೂಡ ಸಾಮಾನ್ಯವಾಗಿ ಟೂ ವೀಲರ್‌ನಲ್ಲೆ ಓಡಾಡೋದು, ಯಾಕಂದ್ರೆ ಬೆಂಗಳೂರಿನಲ್ಲಿ ಪಾರ್ಕಿಂಗ್‌ದೇ ದೊಡ್ಡ ಪ್ರಾಬ್ಲ್ಂ". "ಸರ್ ನಾನು ಕಾರ್ ಓಡ್ಸಿ ತಿಂಗ್ಳಾಯ್ತು. ಪಾರ್ಕಿಂಗ್ ಪ್ರಾಬ್ಲಂನಿಂದ ಸಾಕಾಗಿ, ಕಷ್ಟನೋ ಸುಖಾನೋ ಬಸ್ಸಿಗೆ ಹೋಗ್ತೀನಿ". ಈ ಮಾತುಗಳು ನಗರದ ಬಹುಜನರ ಸಾಮಾನ್ಯ ಉವಾಚ. ಸಂಚಾರ ದಟ್ಟಣೆ ಹಾಗೂ ಪಾರ್ಕಿಂಗ್ ಜಾಗದ ಕೊರತೆ ಒಂದೇ ನಾಣ್ಯದ ಎರಡು ಮುಖಗಳು.

ಹೆಚ್ಚುತ್ತಿರುವ ನಗರೀಕರಣ ಹಾಗೂ ಆಟೋಮೊಬೈಲ್ ಉದ್ಯಮಗಳ ಶರವೇಗದ ಉತ್ಪಾದನೆ ಹಾಗೂ ಗ್ರಾಹಕರ ಬೇಡಿಕೆ ಮತ್ತು ವ್ಯವಸ್ಥಿತವಾಗಿ ಬ್ಯಾಂಕ್‌ಗಳಿಂದ ದೊರೆಯುತ್ತಿರುವ ಸಾಲ ಸೌಲಭ್ಯಗಳು ಮತ್ತು ಇತರ ಸೌಕರ್ಯಗಳಿಂದ ವಾಹನಗಳ ಖರೀದಿ ಭರದಿಂದ ಸಾಗಿರುವುದನ್ನು ನಾವೆಲ್ಲರು ಗಮನಿಸಿದ್ದೇವೆ. ವಾಹನಗಳ ನಿಲುಗಡೆ ವ್ಯವಸ್ಥೆಯು ಸಾರಿಗೆ ವ್ಯವಸ್ಥೆಯ ಒಂದು ಅವಿಭಾಜ್ಯ ಅಂಗವಾಗಿದೆ. ನಗರಗಳಲ್ಲಿ ವಾಹನಗಳ ನಿಲುಗಡೆಯು ತುಂಬಾ ಮುಖ್ಯವಾದ ಸಮಸ್ಯೆಗಳಲ್ಲಿ ಒಂದಾಗಿದೆ. ನಗರದ ಜನರ ಆರ್ಥಿಕ ಪರಿಸ್ಥಿತಿಯು ಉತ್ತಮಗೊಳ್ಳುತ್ತಿರುವುದರಿಂದ ಸ್ವಂತ ವಾಹನಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ ಎಂಬುದಕ್ಕೆ ಪೂರಕವಾಗಿ ಕರ್ನಾಟಕದಲ್ಲಿ 2012 ರಿಂದ 2022 ರ ವರೆಗೆ ಒಂದು ದಶಕದಲ್ಲಿ ಹೊಸ ವಾಹನಗಳ ನೋಂದಣಿಯು 10.91 ಮಿಲಿಯನ್ ನಿಂದ 29.53 ಮಿಲಿಯನ್ ಏರಿರುವ ಅಂಕಿ ಅಂಶಗಳು ಸಾಕ್ಷಿಯಾಗಿ ನಿಲ್ಲುತ್ತವೆ.


Downloaded From:www.kpscvaani.com



ಜನರು ಸ್ವಂತ ವಾಹನ ಖರೀದಿಸುವುದು ಹೆಚ್ಚಾಗಿರುವುದರಿಂದ ಸಂಚಾರ ದಟ್ಟಣೆ ಹಾಗೂ ನಿಲುಗಡೆ ಸ್ಥಳಗಳು ಸವಾಲಾಗಿ ಪರಿಣಮಿಸುತ್ತಿವೆ. ಅದರಲ್ಲೂ ಆನ್‌ಸ್ಟ್ರೀಟ್ ಪಾರ್ಕಿಂಗ್ ಅಂದರೆ ಬೀದಿಯ ಮೇಲೆ ವಾಹನವನ್ನು ನಿಲ್ಲಿಸುವ ಪರಿಪಾಠ ಬೆಳೆಯುತ್ತಿದೆ. ಇದು ಮುಂದಿನ ದಿನಗಳಲ್ಲಿ ನಗರದ ಸುಗಮ ಸಂಚಾರಕ್ಕೆ ಮಾರಕವಾಗಲಿದೆ.

**ಎಲ್ಲೆಂದರಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡುವುದರಿಂದ ಉಂಟಾಗುವ ಪ್ರಮುಖ ಪರಿಣಾಮಗಳು**

- **ದಟ್ಟಣೆ**– ಬೀದಿಯಲ್ಲಿರುವ ಸಾರ್ವಜನಿಕ ಜಾಗವು ವಾಹನಗಳ ಪಾರ್ಕಿಂಗ್‌ನಿಂದ ಸಂಚಾರದ ಹರಿವಿನಲ್ಲಿ ಅಡಚಣೆ ಉಂಟಾಗುವುದು ಸಹಜ.
- **ಅಪಘಾತಗಳು**– ಪಾರ್ಕ್ ಮಾಡಿದ ವಾಹನಗಳ ಮಾಲೀಕರು ಬಾಗಿಲನ್ನು ತೆಗೆದಾಗ ವಾಹನದ ಎಡ ಮತ್ತು ಬಲದಲ್ಲಿ ಹೋಗುತ್ತಿರುವ ಇತರೆ ರಸ್ತೆ ಬಳಕೆದಾರರಿಗೆ ಆಕಸ್ಮಿಕವಾಗಿ ಅಪಘಾತಗಳು ಆಗುವ ಸಂಭವ ಇರುತ್ತದೆ.
- **ಅಡೆತಡೆ**– ಅಂದರೆ ತುರ್ತು ಸ್ಪಂದನ ವಾಹನಗಳಾದ ಆಂಬ್ಯುಲೆನ್ಸ್, ಅಗ್ನಿಶಾಮಕ ಮುಂತಾದ ವಾಹನಗಳು ಓಡಾಡಲು ತೊಂದರೆಯಾಗುವುದಲ್ಲದೆ, ಮುಖ್ಯ ರಸ್ತೆಗಳಲ್ಲಿ ಸಹ ಇದರ ಸಮಸ್ಯೆಗಳು ಹೆಚ್ಚುತ್ತಾ ಹೋಗುತ್ತದೆ.
- **ಪರಿಸರ ಮಾಲಿನ್ಯ** – ವಾಹನಗಳಿಂದ ಹೊರಹೊಮ್ಮುವ ವಿಷಕಾರಿ ಅನಿಲಗಳು ಸುತ್ತಮುತ್ತಲಿನ ಪರಿಸರದ ಮೇಲೆ ಬಹಳ ದುಷ್ಪರಿಣಾಮವನ್ನು ಬೀರುತ್ತವೆ. ಹಾಗೂ ಶಬ್ದ ಮಾಲಿನ್ಯವು ಹೆಚ್ಚಾಗುತ್ತದೆ.

ನಗರಗಳಲ್ಲಿ ಹೆಚ್ಚುತ್ತಿರುವ ವಾಹನಗಳ ಸಂಖ್ಯೆಯಿಂದ ನಗರಗಳ ಎಲ್ಲಾ ರಸ್ತೆಗಳು ತಮ್ಮ ಧಾರಣಾ ಸಾಮರ್ಥ್ಯವನ್ನು ಮೀರಿರುವುದು (1:1 ಅನುಪಾತ) ಸಂಚಾರ ದಟ್ಟಣೆಗೆ ಕಾರಣವಾಗಿದೆ. ಜೊತೆಗೆ ವಾಹನಗಳ ಪಾರ್ಕಿಂಗ್ ಸೌಲಭ್ಯವು ಎಲ್ಲಾ ಕಡೆ ದೊರಕದೆ ಅಲ್ಲಲ್ಲಿ ಲಭ್ಯವಿರುವ ಸ್ಥಳಗಳಲ್ಲಿ ಹೇಗೆಂದರೆ ಹಾಗೆ ವಾಹನಗಳನ್ನು ನಿಲ್ಲಿಸುವ ಪರಿಸ್ಥಿತಿಯು ಉಂಟಾಗುತ್ತಿದೆ. ಪಾರ್ಕಿಂಗ್ ಜಾಗಕ್ಕೆ ಹೆಚ್ಚಿದ ಬೇಡಿಕೆಯಿಂದ ನಗರಗಳಲ್ಲಿ ಲಭ್ಯವಿರುವ ತೆರೆದ ಪ್ರದೇಶಗಳು ದಿನದಿಂದ ದಿನಕ್ಕೆ ಪಾರ್ಕಿಂಗ್ ಲಾಟ್‌ಗಳಾಗಿ ಬದಲಾಗುತ್ತಿವೆ.

ಪಾರ್ಕಿಂಗ್, ಸಂಚಾರ ದಟ್ಟಣೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಅಂಶಗಳು ಪರಸ್ಪರ ಆಳವಾಗಿ ಹೆಣೆದುಕೊಂಡಿದ್ದು, ವಾಹನ ಹೊಂದಿರುವ ಪ್ರತಿಯೊಬ್ಬರೂ ಭಾರತೀಯ ಮೋಟಾರು ವಾಹನಗಳ ಕಾಯ್ದೆಯು ಏನು ಹೇಳುತ್ತದೆ ಎಂಬುದನ್ನು ತಿಳಿದುಕೊಳ್ಳಲೇಬೇಕು.

ಭಾರತೀಯ ಮೋಟಾರು ವಾಹನಗಳ ಕಾಯ್ದೆ ಅನ್ವಯ ಪಾರ್ಕಿಂಗ್ ಕುರಿತಂತೆ ಕಾನೂನು ನಿಯಮಗಳು ಈ ಕೆಳಕಂಡಂತಿದೆ.

**ಸೆಕ್ಷನ್ 117 – ಪಾರ್ಕಿಂಗ್ ಸ್ಥಳಗಳು ಮತ್ತು ನಿಲುಗಡೆ ನಿಲ್ದಾಣಗಳು**

ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಈ ಪರವಾಗಿ ಅಧಿಕಾರ ಪಡೆದ ಯಾವುದೇ ಪ್ರಾಧಿಕಾರವು, ಸಂಬಂಧಪಟ್ಟ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸ್ಥಳೀಯ ಪ್ರಾಧಿಕಾರದೊಂದಿಗೆ ಸಮಾಲೋಚಿಸಿ, ಮೋಟಾರು ವಾಹನಗಳು ಅನಿರ್ದಿಷ್ಟವಾಗಿ ಅಥವಾ ನಿರ್ದಿಷ್ಟ ಸಮಯದವರೆಗೆ ನಿಲ್ಲುವ ಸ್ಥಳಗಳನ್ನು ನಿರ್ಧರಿಸಬಹುದು. ನಿಗದಿತ ಅವಧಿ, ಮತ್ತು ಸಾರ್ವಜನಿಕ ಸೇವಾ ವಾಹನಗಳು ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಮತ್ತು ಇಳಿಸಲು ಅಗತ್ಯಕ್ಕಿಂತ ಹೆಚ್ಚು ಸಮಯದವರೆಗೆ ನಿಲ್ಲಿಸಬಹುದಾದ ಸ್ಥಳಗಳನ್ನು ನಿರ್ಧರಿಸಬಹುದು.

**ಸೆಕ್ಷನ್ 122 – ವಾಹನವನ್ನು ಅಪಾಯಕಾರಿ ಸ್ಥಿತಿಯಲ್ಲಿ ಬಿಡುವುದು**

ಮೋಟಾರು ವಾಹನದ ಉಸ್ತುವಾರಿ ವಹಿಸುವ ಯಾವುದೇ ವ್ಯಕ್ತಿಯು ವಾಹನವನ್ನು ಅಥವಾ ಯಾವುದೇ ಟ್ರೇಲರ್ ಅನ್ನು ತ್ಯಜಿಸಲು ಅಥವಾ ಅಂತಹ ಸ್ಥಾನದಲ್ಲಿ ಅಥವಾ ಅಂತಹ ಸ್ಥಿತಿಯಲ್ಲಿ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ವಿಶ್ರಾಂತಿ ಪಡೆಯಲು ಕಾರಣವಾಗುವುದಿಲ್ಲ ಅಥವಾ ಅನುಮತಿಸುವುದಿಲ್ಲ, ಸಾರ್ವಜನಿಕ ಸ್ಥಳದ ಇತರ ಬಳಕೆದಾರರಿಗೆ ಅಥವಾ ಪ್ರಯಾಣಿಕರಿಗೆ ಅಪಾಯ, ಅಡಚಣೆ ಅಥವಾ ಅನಗತ್ಯ ಅನಾನುಕೂಲತೆಯನ್ನು ಉಂಟುಮಾಡುವ ಸಂದರ್ಭಗಳು.

**ಸೆಕ್ಷನ್ 127 – ಸಾರ್ವಜನಿಕ ಸ್ಥಳದಲ್ಲಿ ತ್ಯಜಿಸಲಾದ ಅಥವಾ ಗಮನಿಸದೆ ಬಿಟ್ಟ ಮೋಟಾರು ವಾಹನಗಳನ್ನು ತೆಗೆಯುವುದು.**

(1) ಯಾವುದೇ ಮೋಟಾರು ವಾಹನವನ್ನು ಹತ್ತು ಗಂಟೆ ಅಥವಾ ಅದಕ್ಕಿಂತ ಹೆಚ್ಚು ಕಾಲ ಸಾರ್ವಜನಿಕ ಸ್ಥಳದಲ್ಲಿ ಬಿಟ್ಟುಹೋದರೆ ಅಥವಾ ಗಮನಿಸದೆ ಬಿಟ್ಟರೆ ಅಥವಾ ಪಾರ್ಕಿಂಗ್ ಅನ್ನು ಕಾನೂನುಬದ್ಧವಾಗಿ ನಿಷೇಧಿಸಲಾದ ಸ್ಥಳದಲ್ಲಿ ನಿಲ್ಲಿಸಿದರೆ, ಅದನ್ನು ಎಳೆಯುವ ಸೇವೆಯಿಂದ ತೆಗೆದುಹಾಕುವುದು (ಟೋಯಿಂಗ್) ಅಥವಾ ಚಕ್ರ ಕ್ಲ್ಯಾಂಪ್ ಸೇರಿದಂತೆ ಯಾವುದೇ ವಿಧಾನದಿಂದ ಅದನ್ನು ನಿಶ್ಚಲಗೊಳಿಸುವುದು ನ್ಯಾಯವ್ಯಾಪ್ತಿಯನ್ನು ಹೊಂದಿರುವ ಸಮವಸ್ತ್ರದಲ್ಲಿರುವ ಪೋಲೀಸ್ ಅಧಿಕಾರಿಯಿಂದ ಅಧಿಕೃತಗೊಳಿಸಲಾಗಿದೆ.


Downloaded From:www.kpscvaani.com

(2) ಸಾರ್ವಜನಿಕ ಸ್ಥಳಕ್ಕೆ ಸಂಬಂಧಿಸಿದಂತೆ ಅದರ ಸ್ಥಾನದಿಂದಾಗಿ ಅಥವಾ ಅದರ ಭೌತಿಕ ನೋಟವು ಸಂಚಾರಕ್ಕೆ ಅಡಚಣೆಯನ್ನು ಉಂಟುಮಾಡುವ ಕಾರಣದಿಂದಾಗಿ, ಕೈಬಿಡಲಾದ, ಗಮನಿಸದ, ಧ್ವಂಸಗೊಂಡ, ಸುಟ್ಟುಹೋದ ಅಥವಾ ಭಾಗಶಃ ಕಿತ್ತುಹಾಕಲ್ಪಟ್ಟ ವಾಹನವು ಟ್ರಾಫಿಕ್ ಅಪಾಯವನ್ನು ಉಂಟುಮಾಡುತ್ತದೆ. ಎಳೆಯುವ ಸೇವೆಯ ಮೂಲಕ ಸಾರ್ವಜನಿಕ ಸ್ಥಳದಿಂದ ತೆಗೆದುಹಾಕುವಿಕೆಯನ್ನು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪೊಲೀಸ್ ಅಧಿಕಾರಿಯಿಂದ ಅಧಿಕೃತಗೊಳಿಸಬಹುದು.

(3) ಪೊಲೀಸ್ ಅಧಿಕಾರಿಯಿಂದ ಉಪ–ವಿಭಾಗ (1) ಅಥವಾ ಉಪ–ವಿಭಾಗ (2) ರ ಅಡಿಯಲ್ಲಿ ವಾಹನವನ್ನು ತೆಗೆದುಹಾಕಲು ಅಧಿಕಾರ ನೀಡಿದರೆ, ವಾಹನದ ಮಾಲೀಕರು ಯಾವುದೇ ಇತರ ದಂಡದ ಹೊರತಾಗಿ ಎಲ್ಲಾ ಎಳೆಯುವ ವೆಚ್ಚಗಳಿಗೆ ಜವಾಬ್ದಾರರಾಗಿರುತ್ತಾರೆ.

**ಸೆಕ್ಷನ್ 201 –ಮುಕ್ತ ಸಂಚಾರಕ್ಕೆ ಅಡಚಣೆಯನ್ನು ಉಂಟುಮಾಡುವುದಕ್ಕಾಗಿ ದಂಡ.**

(1) ದಟ್ಟಣೆಯ ಮುಕ್ತ ಸಂಚಾರಕ್ಕೆ ಅಡ್ಡಿಯುಂಟುಮಾಡುವ ರೀತಿಯಲ್ಲಿ, ಯಾವುದೇ ಸಾರ್ವಜನಿಕ ಸ್ಥಳದಲ್ಲಿ ದುರಸ್ಥಿಗೊಂಡ ವಾಹನವನ್ನು ಇಟ್ಟುಕೊಳ್ಳುವವನು, ಆ ಸ್ಥಾನದಲ್ಲಿ ಉಳಿಯುವವರೆಗೆ ಗಂಟೆಗೆ ಐವತ್ತು ರೂಪಾಯಿಗಳವರೆಗೆ ದಂಡಕ್ಕೆ ಹೊಣೆಗಾರನಾಗಿರುತ್ತಾನೆ. ಪರಂತು ಅಪಘಾತಗಳಿಗೆ ಒಳಗಾದ ವಾಹನವು ಕಾನೂನಿನಡಿಯಲ್ಲಿ ತಪಾಸಣೆಯ ಔಪಚಾರಿಕತೆಗಳನ್ನು ಪೂರ್ಣಗೊಳಿಸಿದ ಸಮಯದಿಂದ ಮಾತ್ರ ದಂಡಕ್ಕೆ ಜವಾಬ್ದಾರನಾಗಿರುತ್ತಾನೆ. ಸರ್ಕಾರಿ ಸಂಸ್ಥೆಯಿಂದ ವಾಹನವನ್ನು ಅಲ್ಲಿಂದ ತೆಗೆದರೆ, ವಾಹನದ ಮಾಲೀಕರಿಂದ ಎಳೆಯುವ ಶುಲ್ಕವನ್ನು ವಸೂಲು ಮಾಡಲಾಗುತ್ತದೆ.



**ಕರ್ನಾಟಕ ಮೋಟಾರು ವಾಹನಗಳ ಅಧಿನಿಯಮದ ಪ್ರಕಾರ ಈ ಕೆಳಕಂಡ ಸ್ಥಳಗಳಲ್ಲಿ ವಾಹನ ನಿಲುಗಡೆ ಮಾಡುವಂತಿಲ್ಲ**

- ರಸ್ತೆ ಕ್ರಾಸ್ ಬಳಿ ಅಥವಾ ಕ್ರಾಸ್ ಒಳಗೆ
- ರಸ್ತೆ ಬೆಂಡ್ ಇರುವಲ್ಲಿ/ಬಾಗಿರುವಲ್ಲಿ
- ಬೆಟ್ಟದ ಮೇಲೆ
- ಫುಟ್‌ಪಾತ್ ಮೇಲೆ ಅಥವಾ ಅದರಿಂದ ಆಚೆ
- ಟ್ರಾಫಿಕ್ ಸಿಗ್ನಲ್ ಜಂಕ್ಷನ್ ಬಳಿ
- ಪಾದಚಾರಿ ಕ್ರಾಸಿಂಗ್ ಮೇಲೆ
- ಬಸ್ ನಿಲ್ದಾಣದ ಹತ್ತಿರ
- ಸ್ಕೂಲ್ ಅಥವಾ ಆಸ್ಪತ್ರೆ ಗೇಟ್ ಬಳಿ
- ಸಂಚಾರ ರಸ್ತೆ ಚಿನ್ಹೆಗಳು ಕಾಣದಂತೆ ಅದರ ಮುಂದೆ ನಿಲುಗಡೆ
- ಅಗ್ನಿಶಾಮಕ ದಳದ ಗೇಟ್ ಮುಂಭಾಗ
- ಮುಖ್ಯರಸ್ತೆಯಲ್ಲಿ ಅಥವಾ ವೇಗವಾಗಿ ಹೋಗುವ ವಾಹನಗಳಿರುವ ರಸ್ತೆಯಲ್ಲಿ
- ಈಗಾಗಲೇ ನಿಲ್ಲಿಸಿರುವ ವಾಹನದ ಮುಂಭಾಗದ ವಿರುದ್ಧ ದಿಕ್ಕಿನಲ್ಲಿ
- ಬಿಳಿ ಪಟ್ಟಿ ಮುಂದುವರೆಯುತ್ತಲೇ ಇರುವ ರಸ್ತೆಗಳಲ್ಲಿ (ಬ್ರೋಕನ್ ಲೈನ್ ಇದ್ದರೂ ಸಹ)

**ಸೆಕ್ಷನ್ 283 ಐಪಿಸಿ–ಸಾರ್ವಜನಿಕ ಮಾರ್ಗದಲ್ಲಿ ಅಥವಾ ನ್ಯಾವಿಗೇಷನ್ ಮಾರ್ಗದಲ್ಲಿ ಅಪಾಯ ಅಥವಾ ಅಡಚಣೆ**


ಯಾವುದೇ ಕಾರ್ಯವನ್ನು ಮಾಡುವ ಮೂಲಕ ಅಥವಾ ತನ್ನ ಸ್ವಾಧೀನದಲ್ಲಿರುವ ಯಾವುದೇ ಆಸ್ತಿಯ ಆದೇಶ ತೆಗೆದುಕೊಳ್ಳುವುದನ್ನು ಬಿಟ್ಟುಬಿಡುವ ಮೂಲಕ ಅಥವಾ ಸಾರ್ವಜನಿಕ ಮಾರ್ಗದಲ್ಲಿ ಯಾವುದೇ ವ್ಯಕ್ತಿಗೆ ಅಪಾಯ, ಅಡಚಣೆ ಅಥವಾ ಗಾಯವನ್ನು ಉಂಟುಮಾಡುವವರಿಗೆ 200ರೂ ಗಳವರೆಗೆ ವಿಸ್ತರಿಸಬಹುದಾದ ದಂಡವನ್ನು ವಿಧಿಸಲಾಗುತ್ತದೆ.

ಕೃತಕ ಬುದ್ಧಿಮತ್ತೆ, ಇಂದು ಹೆಚ್ಚು ಪ್ರಚಲಿತವಿರುವ ಹಾಗೂ ಚರ್ಚಾವೇದಿಕೆಗಳಲ್ಲಿ ಬಹು ಚರ್ಚಿತ ವಿಷಯ. ವೈಜ್ಞಾನಿಕವಾಗಿ ಎಲ್ಲ ಕ್ಷೇತ್ರಗಳನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿರುವ ಕೃತಕ ಬುದ್ಧಿಮತ್ತೆಯು ತನ್ನ ಇರುವಿಕೆಯನ್ನು ಪಾರ್ಕಿಂಗ್ ವ್ಯವಸ್ಥೆಯ ಸುಧಾರಣೆಯಲ್ಲಿಯೂ ತೋರುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ. ಸಂಪೂರ್ಣವಾಗಿ ಸ್ವಯಂಚಾಲಿತವಾಗಿ ಕೃತಕ ಬುದ್ಧಿಮತ್ತೆ ಆಧಾರಿತ ಪಾರ್ಕಿಂಗ್ ವ್ಯವಸ್ಥೆ ಮುಂದೊಂದು ದಿನ ಅನಿವಾರ್ಯವಾಗಬಹುದು. ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಿಂದಾಗಿ ಮುಂದಿನ ದಿನಗಳಲ್ಲಿ ನಿಖರವಾದ ಸ್ಥಳಗಳಲ್ಲಿ ವಾಹನಗಳು ಯಾವುದೇ ತೊಂದರೆ ಇಲ್ಲದೆ ಬಂದು ನಿಲ್ಲುವಂತೆ ಹಾಗೂ ನಿಖರ ಸಮಯದ ನಂತರ ನಿಲ್ದಾಣದಿಂದ ತೆರಳಲು ಅನುವು ಮಾಡಿಕೊಡುವ ದಿನಗಳು ದೂರವಿಲ್ಲ. ಆ ದಿನಗಳು ಬಂದಲ್ಲಿ ವಾಹನ ಪಾರ್ಕಿಂಗ್ ಸಮಸ್ಯೆ ಖಂಡಿತವಾಗಿ ದೂರವಾಗಲಿದೆ.



Downloaded From:www.kpscvaani.com

# ಪದಬಂಧ-52




ವಿದ್ಯಾ ವಿ. ಹಾಲಭಾವಿ

## ಎಡದಿಂದ ಬಲಕ್ಕೆ

3. ಕಣದಲ್ಲಿ ನಡೆದ ಮದುವೆ(3)
5. ಮಾತಾಡದಿರುವಿಕೆ ಅಥವಾ ನೀರವತೆ(2)
7. ಆ ಮನೆ ಮುಂದೆ ನಿಂತಿರುವ ಗಜ(2)8.ಮಯನ ಹತ್ತಿರ ಕಳೆದ ವೇಳೆ(3)
9. ನಮ್ಮ ರಾಜ್ಯದ ಪ್ರಥಮ ಮಹಿಳಾ ಎಂಜಿನಿಯರ್(4)
11. ನಿರುಪಯುಕ್ತವಾದುದನ್ನು ಹೀಗೆನ್ನಿ(2)
13. ಏಳು ದಿನಗಳ ಅವಧಿ(2)
14. ಪಂಚಾಯಿತರ ಸಮ್ಮುಖದಲ್ಲಿ ಸಿದ್ಧಗೊಳಿಸಿದ ವರದಿ(4)
17. ಉತ್ತರದವರ ಪಲ್ಲಂಗ(3)
18. ಸ್ನೇಹಿತ ಇಲ್ಲಿದ್ದಾನೆ(2)
19. ವಸ್ತುಗಳನ್ನಿಡುವ ತಗಡಿನ ಪೆಟ್ಟಿಗೆ(2)
20. ಪಚನಾಂಗವಿಲ್ಲಿ ಉಲ್ಟಾ ಕಾಣುತ್ತಿದೆ(3)

## ಮೇಲಿಂದ ಕೆಳಕ್ಕೆ

1. ಹೂವಿನಲ್ಲಿರುವ ಸಿಹಿ ರಸ (4)
2. ಮನದನ್ನೆ ಇರುವ ಗೃಹ (2)
4. ಲಂಕಾಧಿಪತಿ ತಿರುಗಿದ್ದಾನಲ್ಲಾ (3)
6. ಉತ್ತಮ ಜಾತಿಯ ಜೇನುತುಪ್ಪ ನರಿಯಲ್ಲಿ ಸಿಗುವುದೇ? (3)
7. ಸದನದ ಮುಂದೆ ಪ್ರತೀ ವರ್ಷ ಮಂಡಿಸಲಾಗುವ ಖರ್ಚುವೆಚ್ಚ (4)
10. ಕೊಳಕ ಇಲ್ಲಿದ್ದಾನೆ (3)
12. ಪ್ರಚಾರದ ಚೀಟಿ (4)
14. ಪ್ರತ್ಯೇಕವಾದ ಗುಂಪು (3)
15. ಮಸ್ತಿಷ್ಕ ಇಲ್ಲಿದೆ (3)
16. ಕರಿಯ ಹತ್ತಿರ ಕಾಣುತ್ತಿರುವ ಹೆಣ್ಣುದುಂಬಿ (4)
18. ಮಿಟಕಲಾಡಿ ಹಿಡಿದಿರುವ ಹೀಚು! (2)

## ಉತ್ತರ

**ಮೇಲಿಂದ ಕೆಳಕ್ಕೆ**

1. ಮಕರಂದ 2. ಮನೆ 4. ಣವರಾ 6. ನಸರಿ 7. ಆಯವ್ಯಯ 10. ಶ್ವಪಚ 12. ಕರಪತ್ರ 14. ಪಂಗಡ 15. ಮೆದುಳು 16. ಮಧುಕರಿ 18. ಮಿಡಿ

**ಎಡದಿಂದ ಬಲಕ್ಕೆ**

3. ಕಲ್ಯಾಣ 5. ಮೌನ 7. ಆನೆ 8. ಸಮಯ 9. ರಾಜೇಶ್ವರಿ 11. ವ್ಯರ್ಥ 13. ವಾರ 14. ಪಂಚನಾಮೆ17. ಪಲ್ಲಂಗ 18.ಮಿತ್ರ 19.ಡಬ್ಬ 20.ಉರುಕ

**–: ಸೂಚನೆ :–**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Hemanth M Nimbalkar, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆಬ್ರವರಿ 18 ರಂದು ಹಾವೇರಿಯಲ್ಲಿ ನಿರ್ಮಾಣವಾಗಿರುವ ನೂತನ ಗಾಂಧಿ ಭವನವನ್ನು ಉದ್ಘಾಟಿಸಿದ ಸಂದರ್ಭ.
ಈ ಸಂದರ್ಭದಲ್ಲಿ ಸಚಿವರಾದ ದಿನೇಶ್ ಗುಂಡೂರಾವ್, ಶಿವಾನಂದ ಪಾಟೀಲ್,ಮತ್ತಿತರ ಗಣ್ಯರು ಉಪಸ್ಥಿತರಿದ್ದಾರೆ.




ಫೆಬ್ರವರಿ 19 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಮ್ಮುಖದಲ್ಲಿ ಟಾಟಾ ಸಮೂಹ ಸಂಸ್ಥೆಯ ಏರ್ ಇಂಡಿಯಾ ಹಾಗೂ
ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಅವರು ರಾಜ್ಯದಲ್ಲಿ ಒಟ್ಟು 2300 ಕೋಟಿ ರೂಪಾಯಿ ಹೂಡಿಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದೊಂದಿಗೆ
ಒಡಂಬಡಿಕೆಗೆ ಸಹಿ ಮಾಡಿದ ಸಂದರ್ಭ. ಈ ಸಂದರ್ಭದಲ್ಲಿ ಕೈಗಾರಿಕಾ ಸಚಿವರಾದ ಎಂ.ಬಿ.ಪಾಟೀಲ್,
ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಡಾ.ರಜನೀಶ್ ಗೋಯಲ್, ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳಾದ ಎಲ್.ಕೆ.ಅತೀಕ್,
ಟಾಟಾ ಸಮೂಹದ ಉನ್ನತಾಧಿಕಾರಿಗಳಾದ ನಿಪುಣ್ ಅಗರ್‌ವಾಲ್, ಸುಕರಣ್ ಸಿಂಗ್, ಬೆಂಗಳೂರು ಅಂತಾರಾಷ್ಟ್ರೀಯ
ವಿಮಾನ ನಿಲ್ದಾಣ ಲಿ. ಸಿಇಒ ಹರಿ ಮರಾರ್ ಹಾಗೂ ಮತ್ತಿತರ ಗಣ್ಯರು ಉಪಸ್ಥಿತರಿದ್ದಾರೆ.

Downloaded From:www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



Downloaded From:www.kpscvaani.com